ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜನವರಿ 26 ಗುರುವಾರ 2023

ಸಂಪುಟ: 43 | ಸಂಚಿಕೆ: 279 | ಪುಟಗಳು: 12 + VIII

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಎಸ್.ಎಂ.ಕೃಷ್ಣ 'ಪದ್ಮ ವಿಭೂಷಣ'

ಎಸ್.ಎಲ್.ಭೈರಪ್ಪ, ಸುಧಾಮೂರ್ತಿ ಪದ್ಮಭೂಷಣರು

- ಶ್ರೀಮತಿ ರಾಣಿ ಮಾಚಯ್ಯ, ಖಾದರ್ ವಲ್ಲಿ ದುಡೆಕುಲ, ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ, ಶಾ ರಷೀದ್ ಅಹಮದ್ ಖಾದ್ರಿ, ಸುಬ್ಬರಾಮನ್ ಅವರಿಗೆ ಪದ್ಮಶ್ರೀ ಪ್ರಶಸ್ತಿ
- ಆರು ಮಂದಿಗೆ ಪದ್ಮವಿಭೂಷಣ, 9 ಮಂದಿಗೆ ಪದ್ಮಭೂಷಣ, 91 ಜನರಿಗೆ ಪದ್ಮಶ್ರೀ ಪ್ರಶಸ್ತಿ ಪ್ರಕಟ



ಎಸ್.ಎಂ.ಕೃಷ್ಣ | ಎಸ್.ಎಲ್.ಭೈರಪ್ಪ | ಡಾ.ಸುಧಾಮೂರ್ತಿ | ರಾಣಿ ಮಾಚಯ್ಯ



ಸುಬ್ಬರಾಮನ್ | ಖಾದರ್ ವಲ್ಲಿ ದುಡೆಕುಲ | ಮುನಿವೆಂಕಟಪ್ಪ | ಶಾ ರಷೀದ್

ಮೈಸೂರು, ಜ.25–ಗಣರಾಜ್ಯೋತ್ಸವದ ಹಿಂದಿನ ದಿನ ಕೇಂದ್ರ ಸರ್ಕಾರವು ರಾಷ್ಟ್ರದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಾದ ಪದ್ಮ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ಅತ್ಯುನ್ನತ ಪ್ರಶಸ್ತಿಯಾದ ಪದ್ಮವಿಭೂಷಣ ಪ್ರಶಸ್ತಿಗೆ ಕರ್ನಾಟಕದ ಮುತ್ಸದ್ದಿ ರಾಜಕಾರಣಿ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಭಾಜನರಾಗಿದ್ದಾರೆ.

ಖ್ಯಾತ ಕಾದಂಬರಿಕಾರರಾದ ಎಸ್.ಎಲ್.ಭೈರಪ್ಪ ಮತ್ತು ಇನ್‌ಫೋಸಿಸ್ ಸುಧಾಮೂರ್ತಿ ಅವರು ಪದ್ಮಭೂಷಣ ಹಾಗೂ ಕೊಡಗಿನ ಜಾನಪದ ನೃತ್ಯ ಕಲಾವಿದೆಯೂ ಆದ ಕೊಡವ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷೆ ಶ್ರೀಮತಿ ರಾಣಿ ಮಾಚಯ್ಯ, ಖಾದರ್ ವಲ್ಲಿ, ದುಡೆಕುಲ, ನಾಡೋಜ ಪಿಂಡಿಪಾಪನಹಳ್ಳಿ ಮುನಿವೆಂಕಟಪ್ಪ, ಶಾ ರಷೀದ್ ಅಹಮದ್ ಖಾದ್ರಿ ಮತ್ತು ಎಸ್.ಸುಬ್ಬರಾಮನ್ ಅವರಿಗೆ ಪದ್ಮಶ್ರೀ ಪ್ರಶಸ್ತಿಗಳು ಲಭಿಸಿದೆ. ಕಾದಂಬರಿಕಾರ ಎಸ್.ಎಲ್.ಭೈರಪ್ಪ ಅವರಿಗೆ ಈ ಹಿಂದೆ ಪದ್ಮಶ್ರೀ ▶ 11ನೇ ಪುಟಕ್ಕೆ

ಶುಭಾಶಯಗಳು

ನಾಡಿನ ಸಮಸ್ತರಿಗೂ ಗಣರಾಜ್ಯೋತ್ಸವದ ಶುಭಾಶಯಗಳು



ಬಿಡುವು

ಗಣರಾಜ್ಯೋತ್ಸವದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 27.1.2023ರ ಶುಕ್ರವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ನಕ್ಕರೆ ಅದೇ ಸ್ವರ್ಗ

ಓರ್ವ : (ಮದುವೆ ಛತ್ರದ ಭೋಜನ ಶಾಲೆಯಲ್ಲಿ) "ಬೆಂಡೆಕಾಯಿ ಪಲ್ಯಕ್ಕೆ ಉಪ್ಪು ಜಾಸ್ತಿಯಾಯಿತಲ್ಲವೇ?"

ಮತ್ತೋರ್ವ : "ಇಲ್ಲ ಉಪ್ಪಿನ ಪ್ರಮಾಣಕ್ಕೆ ಬೆಂಡೆಕಾಯಿ ಕಡಿಮೆಯಾಗಿದೆ ಅಷ್ಟೆ"

ಮೈಸೂರು ಮಿತ್ರ
ಗುರುವಾರ, 26 ಜನವರಿ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ನಾಳೆ ಎಂದು ಯಾವ ಕಾರ್ಯವನ್ನು ಮುಂದೂಡಬೇಡ.
ನಿನ್ನ ಪಾಲಿಗೆ ಆ ನಾಳೆ ಎಂದೂ ಬಾರದಿರಬಹುದು. –ಕಾಂಗ್ರೀವ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಗ್ಗ ಹರಿಯಲಿಲ್ಲ, ಕೋಲು ಮುರಿಯಲಿಲ್ಲ

ನಿಮ್ಮ ಪತ್ರಗಳು

ಅವಧಿ ಮೀರಿದ ತಿಂಡಿ ತಿನಿಸುಗಳ ಮಾರಾಟ...!

ಮಾನ್ಯರೇ,

ದೇಶದಾದ್ಯಂತ ಒಂದು ಕಡೆಯಿಂದ ಮತ್ತೊಂದು ಕಡೆಗೆ ತೆರಳಲು ಹಾಗೂ ಸರಕು ಸಾಗಾಟಕ್ಕೆ, ಬಡವರಿಗೆ ಹಾಗೂ ಶ್ರೀಮಂತರಿಗೂ ಅನುಕೂಲವಾಗಿರುವ ಸಾರಿಗೆ ಎಂದರೆ ಅದು ನಮ್ಮ ಭಾರತೀಯ ರೈಲ್ವೆ ಇಲಾಖೆಯ ರೈಲುಗಳು. ರೈಲ್ವೆ ನಿಲ್ದಾಣಗಳಲ್ಲಿ ಅನೇಕ ಪ್ರಯಾಣಿಕರಿಗೆ ಹಸಿವನ್ನು ನೀಗಿಸಲು ಇಲಾಖೆಯು ನಿಲ್ದಾಣಗಳಲ್ಲಿ ಕೆಲವು ಅಂಗಡಿಗಳನ್ನು ಮಾಡಿಕೊಟ್ಟಿದ್ದಾರೆ. ಇವುಗಳಲ್ಲಿ ನಮ್ಮ ರಾಜ್ಯದ ಮುಖ್ಯವಾಗಿ ಮೈಸೂರು, ಮಂಡ್ಯ, ಚಾಮರಾಜನಗರ, ಕೆಂಗೇರಿ, ಬೆಂಗಳೂರು, ಯಶವಂತಪುರ, ಹಾಸನ ಹಾಗೂ ಮುಂತಾದ ನಿಲ್ದಾಣಗಳಲ್ಲಿ ಪದಾರ್ಥಗಳ ಅವಧಿ ಮುಗಿದಿದ್ದರೂ ಸಹ ಯಾರೂ ಗಮನಿಸುವುದಿಲ್ಲ ಎಂದು ಮಾರಾಟ ಮಾಡುತ್ತಿದ್ದಾರೆ. ಇದನ್ನು ಪ್ರಯಾಣಿಕರು ಪ್ರಯಾಣ ಮಾಡುವಾಗ ಚಿಕ್ಕ ಮಕ್ಕಳಿಂದ ಹಿಡಿದು ವಯಸ್ಕರು ಪಡೆಯುತ್ತಿದ್ದಾರೆ. ಇದರಿಂದ ಸಾರ್ವಜನಿಕರ ಆರೋಗ್ಯ ಹದಗೆಟ್ಟು, ಅನಾಹುತಗಳಾದರೆ ಯಾರು ಜವಾಬ್ದಾರರು? ದಯವಿಟ್ಟು ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಆಹಾರ ತಪಾಸಣೆಯ ಅಧಿಕಾರಿಗಳು ಕೂಡಲೇ ಪರಿಶೀಲಿಸಿ ಕಾನೂನು ಕ್ರಮ ಜರುಗಿಸಿ ಅವಧಿ ಮುಗಿದ ಪದಾರ್ಥಗಳ ಮಾರಾಟ ಮಾಡುವ ಅಂಗಡಿಗಳನ್ನು ತೆಗೆಸಿ ಸಾರ್ವಜನಿಕರ ಆರೋಗ್ಯ ಕಾಪಾಡಬೇಕು. **–ನಾಗೇಶ್, ಮಾನಸಗಂಗೋತ್ರಿ, ಮೈಸೂರು.**

ಕಾಂಕ್ರೀಟ್ ಸ್ಲಾಬ್‌ಗಳನ್ನು ಅಳವಡಿಸಿ



ಮಾನ್ಯರೇ,

ಮೈಸೂರಿನ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯ ಬಿಸಿಎಂ ವಿದ್ಯಾರ್ಥಿನಿಲಯದ ಮುಂಭಾಗ ಹೊಸದಾಗಿ ಚರಂಡಿ ನಿರ್ಮಾಣ ಮಾಡಲಾಗಿದೆ. ಆದರೆ ನಿರ್ಮಾಣವಾಗಿ ಎರಡು ತಿಂಗಳಾದರೂ ಚರಂಡಿಯ ಮೇಲೆ 'ಕಾಂಕ್ರೀಟ್ ಸ್ಲಾಬ್'ಗಳನ್ನು ಹಾಕಿಲ್ಲ. ಸಮೀಪದಲ್ಲಿ ವಿದ್ಯಾರ್ಥಿನಿಲಯ ಮತ್ತು ಶಾಲೆಗಳು ಇದ್ದು ಅನಾಹುತ ಸಂಭವಿಸುವ ಸಾಧ್ಯತೆ ಇದೆ. ಈಗಾಗಲೇ ಹಲವು ಬಾರಿ ಮನವಿ ಮಾಡಿದ್ದರೂ ಸ್ಪಂದಿಸಿಲ್ಲ. ರಸ್ತೆಯಲ್ಲಿ ರಾತ್ರಿ ಹೊತ್ತು ದಾರಿದೀಪಗಳು ಸರಿಯಾಗಿ ಇಲ್ಲದ ಕಾರಣ ಫುಟ್‌ಪಾತ್ ಯಾವುದು ಚರಂಡಿ ಯಾವುದು ಎಂದು ಹುಡುಕಬೇಕಿದೆ. ಈಗಾಗಲೇ ಕೆಲವರಿಗೆ ಅನಾಹುತ ಸಂಭವಿಸಿದೆ. ದಯವಿಟ್ಟು ಸಂಬಂಧಿಸಿದ ಅಧಿಕಾರಿಗಳು ಗಮನಹರಿಸಿ ಕೂಡಲೇ ಕಾಂಕ್ರಿಟ್ ಸ್ಲಾಬ್‌ಗಳನ್ನು ಹಾಕಬೇಕೆಂದು ಮನವಿ.

–ಮಹಾಂತೇಶ್ ಬಸಪ್ಪ, ವಿದ್ಯಾರ್ಥಿನಿಲಯ, ಕುವೆಂಪುನಗರ



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಲಿಂಗ ಸಮಾನತೆಯ ಸಂವಿಧಾನಾತ್ಮಕ ಆಶಯ ಆಚರಣೆಯಾಗಬೇಕಷ್ಟೆ

ಇಂದು ಹೆಣ್ಣು ಮಕ್ಕಳಿಗೆ ಎಲ್ಲ ಕ್ಷೇತ್ರಗಳಲ್ಲೂ ಅವಕಾಶಗಳು ತೆರೆದುಕೊಳ್ಳುತ್ತಿವೆ ಎನ್ನುವುದು ನಿಜ. ಆದಾಗ್ಯೂ ಸಮಾಜದ ವಿವಿಧ ಪದರಗಳಲ್ಲಿ ಬೇರು ಬಿಟ್ಟಿರುವ ಪುರುಷ ಪ್ರಧಾನ ಮೌಲ್ಯಾಚರಣೆಗಳು ಅನೇಕ ಕಡೆಗಳಲ್ಲಿ ಹೆಣ್ಣನ್ನು ಸಮಾನ ಅವಕಾಶಗಳಿಂದ ವಂಚಿಸುತ್ತಿವೆ. ಲಿಂಗ ಪೂರ್ವಾಗ್ರಹಗಳನ್ನು ಜೀವಂತವಾಗಿಟ್ಟಿರುವ ಕುಟುಂಬ, ಶಿಕ್ಷಣ, ಉದ್ಯೋಗ, ಮನರಂಜನೆ-ಒಟ್ಟಿನಲ್ಲಿ ಎಲ್ಲ ಸಂಸ್ಥೆಗಳಲೂ ಲಿಂಗ ಅಸಮಾನತೆಯ ಕುರುಹುಗಳು ಜೀವಂತವಾಗಿವೆ.

ಈ ದಿನ ನಾವು ಆಚರಿಸುತ್ತಿರುವುದು 74ನೇ ಗಣರಾಜ್ಯೋತ್ಸವವನ್ನು. ಇದು ಭಾರತೀಯ ಸಂವಿಧಾನ 73 ವರ್ಷಗಳನ್ನು ಪೂರೈಸಿದ ಸಂದರ್ಭವೂ ಹೌದು. ಬಹು ಧರ್ಮ, ಬಹು ಜಾತಿ, ಬಹು ಲಿಂಗ, ಬಹು ಭಾಷೆ–ಹೀಗೆ ವೈವಿಧ್ಯವಾದ ಜನ ಸಮುದಾಯಗಳನ್ನು ಹೊಂದಿರುವ ಈ ದೇಶ ಇಷ್ಟೊಂದು ಭಿನ್ನತೆಯ ನಡುವೆಯೂ 'ಬಹುತ್ವ' ತತ್ವವನ್ನು ಆಧರಿಸಿ–ಆಚರಿಸಲು ಮೂಲ ಕಾರಣವೇ ನಮ್ಮ ಸಂವಿಧಾನ. ಸ್ವಾತಂತ್ರ್ಯ, ಸಮಾನತೆ, ಸಾಮಾಜಿಕ ನ್ಯಾಯ, ಸಹೋದರತ್ವ ಮತ್ತು ಸಹೋದರಿತ್ವ, ಸಹಜೀವನ–ಮುಂತಾದ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ವಿಶೇಷ ಅರ್ಥವನ್ನು ನೀಡಿರುವುದೇ ಭಾರತೀಯ ಸಂವಿಧಾನ.

ಗಣರಾಜ್ಯೋತ್ಸವ ಆಚರಣೆಗೆ ನಿಜವಾದ ಅರ್ಥ ಬರುವುದು ಸಂವಿಧಾನದ ಆಶಯಗಳೆಲ್ಲ ಸಾಕಾರವಾದಾಗ ಮಾತ್ರ. ಸಾಮಾಜಿಕ ಸ್ವಾತಂತ್ರ್ಯ ಸ್ಥಾಪನೆಯಾಗುವವರೆಗೂ ಕೇವಲ ರಾಜಕೀಯ ಪ್ರಜಾಪ್ರಭುತ್ವದಿಂದ ಈ ಸಮಾಜದ ಪದರ ಪದರಗಳಲ್ಲಿ ಹಾಸುಹೊಕ್ಕಾಗಿರುವ ಸಾಮಾಜಿಕ ಅಸಮಾನತೆಗೆ ಅಂತ್ಯವಿರುವುದಿಲ್ಲ ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರು ನೀಡಿದ ಎಚ್ಚರಿಕೆ ಇಂದಿಗೂ ಭಾರತದ ಮೂಲೆ–ಮೂಲೆಗಳಲ್ಲಿ ಪ್ರತಿಧ್ವನಿಸುತ್ತಿದೆ. ಸಮಾಜದ ಅಂಚಿನಲ್ಲಿರುವ ದಮನಿತ, ದುರ್ಬಲ ವರ್ಗಗಳ ಶೋಷಣೆ ಒಂದೆಡೆ ಸಾಂಪ್ರದಾಯಿಕ ರೂಪಗಳಲ್ಲಿ ಮುಂದುವರೆಯುತ್ತಿದ್ದರೆ, ಮತ್ತೊಂದೆಡೆ ಹೊಸ–ಹೊಸ ಪ್ರಕಾರಗಳಲ್ಲಿ ಕಾಣಿಸಿಕೊಳ್ಳುತ್ತಿದೆ. ಜಾತಿ–ವರ್ಗ–ಧಾರ್ಮಿಕ ಸಮೂಹ–ಪ್ರದೇಶ ಮುಂತಾದ ಎಲ್ಲೆಗಳನ್ನು ಭೇದಿಸಿ ಈ ಶೋಷಣೆಗೆ ಬಲಿಯಾಗುತ್ತಿರುವ ಒಂದು ಗುಂಪೆಂದರೆ ಮಹಿಳೆಯರದ್ದು. ಭಾರತದ ಜನಸಂಖ್ಯೆಯಲ್ಲಿ ಹೆಚ್ಚು–ಕಡಿಮೆ ಅರ್ಧದಷ್ಟಿರುವ ಸ್ತ್ರೀಯರು ಮನೆಯ ಒಳಗೆ–ಹೊರಗೆ ಎದುರಿಸುತ್ತಿರುವ ದೌರ್ಜನ್ಯಗಳ ಪ್ರಮಾಣ ಮತ್ತು ಪರಿಯನ್ನು ನೋಡಿದರೆ ಲಿಂಗ ಸಮಾನತೆಯ ಸಾಧನೆಗಾಗಿ ಸಂವಿಧಾನ ತೋರಿದ ಹಾದಿಯಲ್ಲಿ ಸುಮಾರು ಮುಕ್ಕಾಲು ಶತಮಾನದ ಇತಿಹಾಸವಿರುವ ನಮ್ಮ ಪ್ರಜಾಪ್ರಭುತ್ವ ನಡೆಯುತ್ತಿದೆಯೇ ಎಂಬ ಪ್ರಶ್ನೆಯನ್ನು ನಾವು ಇಂದು ಗಟ್ಟಿ ಧ್ವನಿಯಲ್ಲಿ ಕೇಳುವ ಅಗತ್ಯವಿದೆ.

ಪ್ರಜಾಸತ್ತಾತ್ಮಕ ವ್ಯವಸ್ಥೆ ಭಾರತದಲ್ಲಿ ಅಸ್ತಿತ್ವಕ್ಕೆ ಬಂದ ಏಳು ದಶಕಗಳಲ್ಲಿ ಲಿಂಗ ಸಮಾನತೆಯ ಸಾಧನೆಗಾಗಿ ನೂರಾರು ಕಾಯಿದೆಗಳೂ, ಕಾರ್ಯ ನೀತಿಗಳೂ, ಯೋಜನೆಗಳೂ ಅಸ್ತಿತ್ವಕ್ಕೆ ಬಂದಿವೆ, ಬರುತ್ತಲೇ ಇವೆ. ಮಹಿಳೆಯರ ಹಿತಾಸಕ್ತಿಗಳನ್ನು ಸಂರಕ್ಷಿಸಲು ಸಮಿತಿಗಳು, ಆಯೋಗಗಳು ರಚನೆಯಾಗುತ್ತಲೇ ಇವೆ. ಈ ಎಲ್ಲ ಪ್ರಯತ್ನಗಳಿಂದ ಅವರ ಬದುಕಿನ ಪರಿಸ್ಥಿತಿಗಳಲ್ಲಿ ಅನೇಕ ಕ್ಷೇತ್ರಗಳಲ್ಲಿ ಗಮನಾರ್ಹವಾದ ಬದಲಾವಣೆಗಳಾಗಿವೆ ನಿಜ. ಆದರೆ ಬದಲಾಗದಿರುವುದು ಅಸಮಾನ ಲಿಂಗ ಸಂಬಂಧಗಳು, ಮೇಲು ಮೇಲಿನ ಸ್ಥಾನಗಳಲ್ಲಿ ಮಹಿಳೆಯರಿಗೆ ಮುಕ್ತ ಅವಕಾಶಗಳ ನಿರಾಕರಣೆ ಹಾಗೂ ಅವರ ಮೇಲೆ ನಡೆಯುತ್ತಲೇ ಇರುವ ವ್ಯಕ್ತ ಅಥವಾ ಅವ್ಯಕ್ತ ದೌರ್ಜನ್ಯಗಳು.

ಲಿಂಗ ಸಮಾನ ಸಮಾಜದ ನಿರ್ಮಾಣಕ್ಕಾಗಿ ಸಂವಿಧಾನದ ಮೂರು ಮೂಲ ವಿಧಿಗಳು, ಎಂದರೆ ವಿಧಿ 14 , ವಿಧಿ15(1) ಮತ್ತು ವಿಧಿ15(3)–ಇವುಗಳ ಆಶಯಗಳನ್ನು ಪಾಲಿಸಿದರೆ ಸಾಕು. ಲಿಂಗ ಸಮಾನತೆಯ ಸಂಘರ್ಷಕ್ಕೆ ನಿಜವಾದ ಅರ್ಥ ಬರುವುದಷ್ಟೇ ಅಲ್ಲ, ಮಹಿಳಾ ಹಕ್ಕುಗಳು ಆಚರಣೆಗಳಾಗಿ ಪರಿವರ್ತನೆಯಾಗುತ್ತವೆ. ಆದರೆ ಎಲ್ಲ ಸಂದರ್ಭಗಳಲ್ಲಿಯೂ ಎಲ್ಲ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ವಿಚಾರದಲ್ಲಿಯೂ ಹಾಗೆ ಆಗುತ್ತಿಲ್ಲ.

ಸಂವಿಧಾನದ 14ನೇ ವಿಧಿ ದೇಶದ ಎಲ್ಲ ಪ್ರಜೆಗಳಿಗೆ ಕಾನೂನು ರೀತ್ಯಾ ಸಮಾನ ಅವಕಾಶಗಳನ್ನು ನೀಡಿರುವುದೇ ಅಲ್ಲದೆ ಎಲ್ಲರಿಗೂ ಸಮಾನ ಕಾನೂನಾತ್ಮಕ ರಕ್ಷಣೆಯನ್ನೂ ಒದಗಿಸುತ್ತದೆ. ಎಲ್ಲ ಪ್ರಜೆಗಳೂ ಎಂದ ಮೇಲೆ ಮಹಿಳೆಯರೂ ಸೇರುತ್ತಾರೆ ತಾನೇ. ಅವರ ಹಕ್ಕುಗಳನ್ನು ರಕ್ಷಿಸುವುದಕ್ಕೆ ಆಡಳಿತಾತ್ಮಕ ವ್ಯವಸ್ಥೆಯ ಬದ್ಧತೆಯನ್ನು ಸಂವಿಧಾನವೇ ಸ್ಪಷ್ಟವಾಗಿ ಸಾರಿದ್ದರೂ ಇಂದಿಗೂ ಅವರ ಮೇಲೆ ಉದ್ಯೋಗ ಸ್ಥಳಗಳಲ್ಲಿ, ಮನೆಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಶಾಲೆಗಳಲ್ಲಿ ದೌರ್ಜನ್ಯ ನಡೆಯುತ್ತಲೇ ಇದೆ. ಇತ್ತೀಚೆಗೆ 20 ವರ್ಷದ ಹೆಣ್ಣು ಮಗಳು ನವ ವರ್ಷದ ರಾತ್ರಿ ದೆಹಲಿಯಲ್ಲಿ ತನ್ನ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ, ಅದಕ್ಕೆ ಢಿಕ್ಕಿ ಹೊಡೆದ ಕಾರಿನ ಕೆಳಗೆ ಸಿಲುಕಿ ಹಾಕಿಕೊಂಡ ಆಕೆಯನ್ನು 12 ಕಿಲೋಮೀಟರು ದೂರ ಎಳೆದುಕೊಂಡು ಹೋದ ಕಾರಿನಲ್ಲಿದ್ದ 5 ಜನ ದುಷ್ಕರ್ಮಿಗಳು ಆಕೆಯ ನಗ್ನ ದೇಹವನ್ನು ರಸ್ತೆಯ ಮಧ್ಯೆ ಬಿಟ್ಟು ಪರಾರಿಯಾಗಿದ್ದ ಪ್ರಕರಣ, ದೇಶದ ಅಂತಃಸತ್ವವನ್ನೇ ಅಲುಗಾಡಿಸಿದೆ.

ಆಗಾಗ್ಗೆ ಇಂಥ ಘಟನೆಗಳು ನಡೆಯುತ್ತಲೇ ಇದ್ದರೂ, ಎಲ್ಲೋ ಅಲ್ಲೊಮ್ಮೆ ಇಲ್ಲೊಮ್ಮೆ ಮಾತ್ರ ಅವು ಸಾರ್ವಜನಿಕ ವಲಯಕ್ಕೆ ಬರುವುದು. ಅಪರಾಧ ದಾಖಲಾತಿ ಪ್ರಾಧಿಕಾರ ನೀಡುವ ಅಂಕಿ–ಅಂಶಗಳನ್ನು ಗಮನಿಸಿದಾಗಲೇ ತಿಳಿಯುತ್ತದೆ, ಮಹಿಳಾ ವಿರೋಧಿ ದೌರ್ಜನ್ಯಗಳನ್ನು ಎಸಗಿ ಶಿಕ್ಷೆಗೆ ಒಳಗಾದವರಿಗಿಂತ ತಪ್ಪಿಸಿಕೊಂಡವರೇ ಹೆಚ್ಚು ಎಂಬುದು. ಇವುಗಳೆಲ್ಲ ಎತ್ತುವ ಗಂಭೀರ ಪ್ರಶ್ನೆಯೆಂದರೆ ನ್ಯಾಯ ಎಲ್ಲ ಹೆಣ್ಣು ಮಕ್ಕಳಿಗೂ ಸಮಾನ ರೀತಿಯಲ್ಲಿ ಅನ್ವಯಿಸುತ್ತಿದೆಯೇ ಎಂದು? ಎಲ್ಲರಿಗೂ ಸುರಕ್ಷಿತ ಜೀವನಾವಕಾಶಗಳನ್ನು ನೀಡಬೇಕೆಂಬುದು ಸಂವಿಧಾನದ ಆಶಯ, ಆದರೆ ಮಹಿಳೆಯರಿಗೆ ಅವರ ದೇಹ, ಮನಸ್ಸು ಮತ್ತು ಬದುಕಿನ ಮೇಲೆ ನಿಯಂತ್ರಣವನ್ನು ಪಡೆಯುವ ಅವಕಾಶಗಳೇ ಇಲ್ಲದಿದ್ದಾಗ ಎಲ್ಲಿದೆ ಕಾನೂನಾತ್ಮಕ ಸಮಾನತೆ?

ಸಂವಿಧಾನದ 15ನೇ ವಿಧಿ ಹೆಣ್ಣಿನ ಜೈವಿಕತೆಯ ಆಧಾರದ ಮೇಲೆ ಯಾವುದೇ ಬಗೆಯ ತಾರತಮ್ಯ ನಿಷಿದ್ಧ ಎಂದು ಸ್ಪಷ್ಟಪಡಿಸುವ ಮೂಲಕ ಲಿಂಗ ಸಮಾನತೆಯ ಆಶಯವನ್ನು ಮತ್ತಷ್ಟು ಗಟ್ಟಿಗೊಳಿಸಿತು. ಹಿಂದೆಂದಿಗಿಂತ ಇಂದು ಹೆಣ್ಣು ಮಕ್ಕಳಿಗೆ ಎಲ್ಲ ಕ್ಷೇತ್ರಗಳಲ್ಲೂ ಅವಕಾಶಗಳು ತೆರೆದುಕೊಳ್ಳುತ್ತಿವೆ ಎನ್ನುವುದು ನಿಜ. ಆದಾಗ್ಯೂ ಸಮಾಜದ ವಿವಿಧ ಪದರಗಳಲ್ಲಿ ಬೇರು ಬಿಟ್ಟಿರುವ ಪುರುಷಪ್ರಧಾನ ಮೌಲ್ಯಾಚರಣೆಗಳು ಅನೇಕಕಡೆಗಳಲ್ಲಿ ಹೆಣ್ಣನ್ನು ಸಮಾನ ಅವಕಾಶಗಳಿಂದ ವಂಚಿಸುತ್ತಿವೆ. ಲಿಂಗ ಪೂರ್ವಾಗ್ರಹಗಳನ್ನು ಜೀವಂತವಾಗಿಟ್ಟಿರುವ ಕುಟುಂಬ, ಶಿಕ್ಷಣ, ಉದ್ಯೋಗ, ಮನರಂಜನೆ–ಒಟ್ಟಿನಲ್ಲಿ ಎಲ್ಲ ಸಂಸ್ಥೆಗಳಲ್ಲೂ ಲಿಂಗ ಅಸಮಾನತೆಯ ಕುರುಹುಗಳು ಜೀವಂತವಾಗಿವೆ.

ಸಂವಿಧಾನ ಸಮಾನ ಅವಕಾಶಗಳನ್ನು ಮಹಿಳೆಯರಿಗೆ ನೀಡಿದ್ದರೂ ಅವುಗಳ ಬಳಕೆಯಲ್ಲಿ ಸಮಾನತೆ ಇಲ್ಲ ಎಂಬುದು ಒಂದು ಸಾಮಾಜಿಕ ವಾಸ್ತವ. ಶತಮಾನಗಳ ಇತಿಹಾಸವನ್ನು ಹೊಂದಿರುವ ಯಾವುದೇ ಬಗೆಯ ತಾರತಮ್ಯವನ್ನು ಕೆಲವೇ ದಶಕಗಳ ಸಮಾನತಾ ಪ್ರಯತ್ನಗಳಿಂದ ತೊಡೆದು ಹಾಕಲಾಗುವುದಿಲ್ಲ. ಏಕೆಂದರೆ ಈಗಾಗಲೇ ಜಾತಿ, ಲಿಂಗ ಅಥವಾ ವರ್ಗದ ಆಧಾರದ ಮೇಲೆ ಸಮಾಜದ ಸಂಪನ್ಮೂಲಗಳನ್ನು ತಮ್ಮದಾಗಿಸಿಕೊಂಡಿರುವ ಗುಂಪುಗಳು ಸಹಜ ವಾಗಿಯೇ ಅಭಿವೃದ್ಧಿಯ ಅನುಕೂಲಗಳನ್ನು ಪಡೆಯುವ ಹೋರಾಟದಲ್ಲಿ ಸಿಂಹಪಾಲನ್ನು ಪಡೆಯುತ್ತಾರೆ. ಮಹಿಳೆಯರು ಈ ಹೋರಾಟದಲ್ಲಿ ಮತ್ತಷ್ಟು ಹಿಂಚಲನೆಯನ್ನು ಅನುಭವಿಸುತ್ತಾರೆ. ಇದನ್ನು ಮನಗಂಡೇ ಸಂವಿಧಾನದಲ್ಲಿ ಅವರಿಗೆ ವಿಶೇಷ ಅವಕಾಶಗಳನ್ನು ನೀಡಲು 15 (3)ನೇ ವಿಧಿ ಅನುವು ಮಾಡಿಕೊಟ್ಟಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ನೀಡಿರುವ ಮೀಸಲಾತಿ ಇದಕ್ಕೆ ಒಂದು ಉದಾಹರಣೆ. ಆದರೆ ಇದುವರೆಗೂ ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಅವರಿಗೆ ಶೇ.33ರಷ್ಟು ಮೀಸಲಾತಿಯನ್ನೂ ನೀಡದಿರುವುದು, ವಿಶೇಷ ಅವಕಾಶವನ್ನು ನೀಡಲು ಸಂವಿಧಾನಾತ್ಮಕ ಸ್ವೀಕೃತಿ ಇದ್ದರೂ ಅಧಿಕಾರದ ಮರು–ಹಂಚಿಕೆಯ ಪ್ರಕ್ರಿಯೆಯನ್ನು ಒಪ್ಪಿಕೊಳ್ಳಲಾಗದ ಪುರುಷ ಮನಸ್ಥಿತಿಗಳು ಸ್ತ್ರೀ ಸಮಾನತಾ ಹೋರಾಟಗಳಿಗೆ ಅಡ್ಡಿಯನ್ನು ಒಡ್ಡುತ್ತವೆ ಎಂಬುದಕ್ಕೆ ನಿದರ್ಶನ. 73 ಮತ್ತು 74ನೇ ಸಂವಿಧಾನಾತ್ಮಕ ತಿದ್ದುಪಡಿಗಳು ಆಡಳಿತಾತ್ಮಕ ನಿರ್ಧಾರಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಮಹಿಳೆಯರಿಗೆ ನ್ಯಾಯಯುತ ಹಕ್ಕನ್ನು ನೀಡಿ ಇಡೀ ವಿಶ್ವಕ್ಕೇ ಒಂದು ಮಾದರಿಯಾಗಿದ್ದರೂ ಇಂದಿಗೂ ಪುರುಷಪ್ರಧಾನ ಅಭ್ಯಾಸಗಳು ಬಹುತೇಕ ಸ್ಥಳೀಯ ಸರ್ಕಾರಗಳನ್ನು ತಮ್ಮ ಬಿಗಿ ಮುಷ್ಟಿಯಿಂದ ವಿಮುಕ್ತಿಗೊಳಿಸಿಲ್ಲ ಎಂಬ ಸತ್ಯ ನಮಗೆ ತಿಳಿದೇ ಇದೆ.

ಈ ಮೇಲೆ ಪ್ರಸ್ತಾಪಿಸಿರುವ ಮೂರು ಮೂಲಭೂತ ವಿಧಿಗಳೇ ಅಲ್ಲದೆ ಸಂವಿಧಾನ ಮಹಿಳಾ ಸಮಾನತೆಯನ್ನು ಸಾಧಿಸಲು ಇನ್ನೂ ಅನೇಕ ಮಾರ್ಗಗಳನ್ನು ತೆರೆದಿಟ್ಟಿದೆ. ಸಾರ್ವಜನಿಕ ಉದ್ಯೋಗಗಳಲ್ಲಿ ಸಮಾನ ಅವಕಾಶವನ್ನು ನೀಡುವ 16ನೇ ವಿಧಿ, ಮಾನವ ಸಾಗಾಣಿಕೆ ಮತ್ತು ಬಲಾತ್ಕಾರದ ದುಡಿಮೆಯನ್ನು ತಡೆಗಟ್ಟುವ 23ನೇ ವಿಧಿ, ದೇಶದ ಎಲ್ಲ ಪ್ರಜೆಗಳಿಗೆ ಜೀವನಾಧಾರಗಳನ್ನು ಪಡೆಯುವ ಹಕ್ಕನ್ನು ನೀಡುವ 39ನೇ ವಿಧಿ, ಸಮಾನ ಕೆಲಸಕ್ಕೆ ಸಮಾನ ಸಂಬಳವನ್ನು ನಿಗದಿ ಪಡಿಸುವ ವಿಧಿ 39 (ಜ), ಮಾನವೀಯ ವೃತ್ತಿ ಪರಿಸರವನ್ನು ಒದಗಿಸಬೇಕೆಂಬ ನಿಯಮವನ್ನು ಎತ್ತಿ ಹಿಡಿಯುವ 42ನೇ ವಿಧಿ, ಮಹಿಳೆಯರಿಗೆ ಆಸ್ತಿ ಹಕ್ಕನ್ನು ನೀಡುವ 300ನೇ ವಿಧಿ ಮತ್ತು ಮಹಿಳೆಯರ ಘನತೆಗೆ ಅಡ್ಡಿಯನ್ನುಂಟು ಮಾಡುವ ಎಲ್ಲ ಪರಿಸ್ಥಿತಿಗಳನ್ನು ತೊಡೆದು ಹಾಕಬೇಕೆಂದು ಸ್ಪಷ್ಟಪಡಿಸಿರುವ **51 A (e)** ವಿಧಿ–ಇವುಗಳೆಲ್ಲ ಭಾರತೀಯ ಸಂವಿಧಾನದ ಮಹಿಳಾಪರ ಕಾಳಜಿಗಳಿಗೆ ಜ್ವಲಂತ ಸಾಕ್ಷಿಗಳಾಗಿವೆ. ಲಿಂಗ ಸಮಾನತೆಯ ಹೋರಾಟಕ್ಕೆ ನಿಜವಾದ ಶಕ್ತಿಯನ್ನು ನೀಡಿರುವುದು ನಮ್ಮ ಸಂವಿಧಾನವೇ, ಆದರೆ ಸಮಾನತೆಯ ಎಲ್ಲ ಸಂವಿಧಾನಾತ್ಮಕ ಆಶಯಗಳು ಸಮತೆಯ ರೂಪವನ್ನು ತಳೆದು ಸಾರ್ವತ್ರಿಕ ಅನ್ವಯಿಸುವಿಕೆಯನ್ನು ಪಡೆಯುವಂತಾಗಲಿ ಎನ್ನುವುದೇ ನಮ್ಮ ಇಂದಿನ ಆಶಯ.

ರಾಜ್ಯದಲ್ಲಿ 59 ಯೋಜನೆಗಳಲ್ಲಿ 3,455.39 ಕೋಟಿ ಹೂಡಿಕೆ; 18,567 ಮಂದಿಗೆ ಉದ್ಯೋಗ

ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಮಾಹಿತಿ



ಬೆಂಗಳೂರು, ಜ.25– (ಕೆಎಂಶಿ)ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮತ್ತು ಉದ್ಯೋಗ ಸೃಜನೆಗೆ ಮತ್ತಷ್ಟು ಗಮನಹರಿಸಿರುವ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ 59 ೦ಯೋಜನೆಗಳಲ್ಲಿ 3,455.39 ಕೋಟಿ ರೂ. ಬಂಡವಾಳ ಹೂಡಿಕೆಗೆ ಅನುಮೋದನೆ ನೀಡಿದೆ.

ಕರ್ನಾಟಕ ಉದ್ಯೋಗ ಮಿತ್ರ ಕಚೇರಿ೦ಯಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ಆರ್ ನಿರಾಣಿ ಅವರ ಅಧ್ಯಕ್ಷತೆ೦ಯಲ್ಲಿ ನಡೆದ 137ನೇ ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿ ಸಭೆ೦ಯಲ್ಲಿ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ. ಒಟ್ಟು 59 ೦ಯೋಜನೆಗಳಿಂದ 3,455.39 ಕೋಟಿ ರೂ. ಬಂಡವಾಳ ಹೂಡಿಕೆ೦ಯಾಗಲಿದ್ದು, 18,567 ಜನರಿಗೆ ಉದ್ಯೋಗ ಅವಕಾಶಗಳು ಲಭಿಸಲಿದೆ ಎಂದು ಕೈಗಾರಿಕೆ ಸಚಿವ ಮುರುಗೇಶ ಆರ್.ನಿರಾಣಿ ತಿಳಿಸಿದ್ದಾರೆ. ಅನುಮೋದನೆ ನೀಡಿರುವ ಪ್ರಸ್ತಾವ ನೆಗಳಲ್ಲಿ 50 ಕೋಟಿ ರೂ. ಗೂ ಅಧಿಕ ಬಂಡವಾಳ ಹೂಡಿಕೆ೦ಯ 11 ಪ್ರಮುಖ ಬೃಹತ್ ಮತ್ತು ಮಧ್ಯಮ ೦ಯೋಜನೆಗಳಿಗೆ ಸಮಿತಿ೦ಯು ಅನುಮೋದನೆ ನೀಡಿದೆ. ಇದರಿಂದ 2186.70 ಕೋಟಿ ರೂ. ಬಂಡವಾಳ ಹೂಡಿಕೆ೦ಯಾಗಿ 10,559 ಜನರಿಗೆ ಉದ್ಯೋಗ ಲಭಿಸಲಿದೆ ಎಂದು ಹೇಳಿದ್ದಾರೆ.

15 ಕೋಟಿ ರೂ. ಯಿಂದ 50 ಕೋಟಿ ರೂ. ಒಳಗಿನ ಬಂಡವಾಳ ಹೂಡಿಕೆ೦ಯ 46 ಹೊಸ ೦ಯೋಜನೆಗಳಿಗೆ ಸಮಿತಿ ಹಸಿರು ನಿಶಾನೆ ತೋರಿದೆ. ಒಟ್ಟು 1049.19 ಕೋಟಿ ರೂ. ಬಂಡವಾಳ ಹೂಡಿಕೆ೦ಯಾಗಿ ಅಂದಾಜು 8,008 ಜನರಿಗೆ ಉದ್ಯೋಗ ಸೃಜನೆ೦ಯಾಗಲಿದೆ. ಹೆಚ್ಚುವರಿ ಬಂಡವಾಳ ಹೂಡಿಕೆ೦ಯ ಎರಡು ೦ಯೋಜನೆಗಳಿಗೆ ಏಕಗವಾಕ್ಷಿ ಸಮಿತಿ೦ಯು ಅನುಮೋದಿಸಿದ್ದು, 219.50 ಕೋಟಿ ರೂ. ಹೂಡಿಕೆ೦ಯಾಗಲಿದೆ.

ಅನುಮೋದನೆ ನೀಡಿರುವ ಪ್ರಸ್ತಾವನೆಗಳು: ಮೈಸೂರ್ ಸ್ಟೀಲ್ಸ್ ಲಿಮಿಟೆಡ್– ಸ್ಥಳ: ಮೇಟಗಾನಹಳ್ಳಿ, ಮೈಸೂರು–ಹೂಡಿಕೆ 405.43 ಕೋಟಿ ರೂ, ಉದ್ಯೋಗ 200, ಎನ್.ಐ.ಡಿ.ಸಿ ಇಂಡಸ್ಟ್ರೀ೦ಯಲ್ ಆಟೋಮೋಷನ್ ಇಂಡಿ೦ಯಾ ಲಿಮಿಟೆಡ್– ಸ್ಥಳ: ಕೋಟುರ್ ಬೇಲೂರ್ ಇಎಂಸಿ ಕೈಗಾರಿಕಾ ಪ್ರದೇಶ– ಹೂಡಿಕೆ 350 ಕೋಟಿ ರೂ, ಉದ್ಯೋಗ 730, ಸಿಲಾನ್ ಬಿವೇರೇಜ್ ಲಿಮಿಟೆಡ್– ಸ್ಥಳ: ಎಫ್ಎಮ್‌ಸಿ ಜಿಕ್ಲಸ್ಟರ್ ಧಾರವಾಡ– ಹೂಡಿಕೆ 256.3 ಕೋಟಿ ರೂ, ಉದ್ಯೋಗ 200. ಬಾಲಾಜಿ ವೇರರ್ಸ್ ಪ್ರೈ ಲಿಮಿಟೆಡ್ –ಸ್ಥಳ: ಕಣಗಲ್ ಕೈಗಾರಿಕಾ ಪ್ರದೇಶ ಬೆಳಗಾವಿ ಜಿಲ್ಲೆ– ಹೂಡಿಕೆ 251.25 ಕೋಟಿ ರೂ, ಉದ್ಯೋಗ 500. ಮಂಜುಶ್ರೀ ಟೆಕ್ನೋಪಾರ್ಕ್ ಲಿಮಿಟೆಡ್–ಸ್ಥಳ: ಬಡಗುಪ್ಪೆ, ಕೆಲ್ಲಂಬಳ್ಳಿ, ಕೈಗಾರಿಕಾ ಪ್ರದೇಶ ಚಾಮರಾಜನಗರ– ಹೂಡಿಕೆ 253 ಕೋಟಿ ರೂ., ಉದ್ಯೋಗ 500. ಕ್ರಿಸೋಡ ಇಂಡಿ೦ಯಾ ಪ್ರೈ ಲಿಮೆಟೆಡ್–ಸ್ಥಳ: ಶಿರಾ ಕೈಗಾರಿಕಾ ಪ್ರದೇಶ ತುಮಕೂರು – ಹೂಡಿಕೆ 138 ಕೋಟಿ ರೂ, ಉದ್ಯೋಗ 160. ಮಹಾಮಾನವ್ ಇನ್‌ಸ್ಪಾಟ್ ಪ್ರೈ ಲಿಮಿಟೆಡ್–ಸ್ಥಳ: ಬೆಳಗಲ್ ಗ್ರಾಮ, ಬಳ್ಳಾರಿ – ಹೂಡಿಕೆ 90 ಕೋಟಿ ರೂ, ಉದ್ಯೋಗ 90. ಎ.ಸಿ.ಆರ್ ಪ್ರಾಜೆಕ್ಟ್–ಸ್ಥಳ: ನೆಲಮಂಗಲ ತಾಲೂಕು, ಬೆಂಗಳೂರು ಗ್ರಾಮಾಂತರ, – ಹೂಡಿಕೆ 85 ಕೋಟಿ ರೂ, ಉದ್ಯೋಗ 350. ನಿ೦ಯೋಬಿ ಸಲ್ಯೂಷನ್ ಪ್ರೈ ಲಿಮಿಟೆಡ್– ಸ್ಥಳ: ಎಎಲ್‌ಜಿಸಿ ಕ್ಲಸ್ಟರ್, ಮಮ್ಮಿಗಟ್ಟಿ ಕೈಗಾರಿಕಾ ಪ್ರದೇಶ, ಧಾರವಾಡ, ಹೂಡಿಕೆ –50 ಕೋಟಿ ರೂ, ಉದ್ಯೋಗ 563. ಅಭ೦ಯ್ ಆಗ್ರೋ ಫುಡ್ ಪ್ರೈಲಿಮಿಟೆಡ್– ಸ್ಥಳ:– ಗಬಾರ ಗ್ರಾಮ, ಕೊಪ್ಪಳ ಜಿಲ್ಲೆ– ಹೂಡಿಕೆ 32.65 ಕೋಟಿ ರೂ, ಉದ್ಯೋಗ–35.

ಫೆ.10 ವಿಧಾನಮಂಡಲ ಜಂಟಿ ಅಧಿವೇಶನ: ಫೆ.17ಕ್ಕೆ ಬಜೆಟ್ ಮಂಡನೆ

ಬೆಂಗಳೂರು: ರಾಜ್ಯ ವಿಧಾನ ಮಂಡಲದ ಜಂಟಿ ಅಧಿವೇಶನ ಫೆ. 10ರಿಂದ 24ರ ವರೆಗೆ ನಡೆ೦ಯಲಿದೆ. ಅಂದು ಬೆಳಗ್ಗೆ 11 ಗಂಟೆಗೆ ರಾಜ್ಯಪಾಲ ಥಾವರ್ ಚಂದ ಗೆಹ್ಲೋಟ್ ಅವರು ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ವರ್ಷದ ಮೊದಲ ಅಧಿವೇಶನ ಇದಾಗಿದೆ. ಅವರು ರಾಜ್ಯ ಸರ್ಕಾರದ ಸಾಧನೆಗಳನ್ನು ಪ್ರಸ್ತಾಪಿಸಲಿದ್ದಾರೆ. ಜೊತೆಗೆ ಈ ವರ್ಷದ ಸರ್ಕಾರದ ಮುನ್ನೋಟದ ಬಗ್ಗೆ ಭಾಷಣದಲ್ಲಿ ಪ್ರಸ್ತಾಪ ಮಾಡುವುದು ರೂಢಿ೦ಯಲ್ಲಿದೆ.

ಸಿಎಂ ಬಸವರಾಜ ಬೊಮ್ಮಾಯಿ ಬಜೆಟ್ ಮಂಡನೆ: ಫೆ.17 ರಂದು ಸಿಎಂ ಬಸವರಾಜ ಬೊಮ್ಮಾಯಿ ಬಜೆಟ್ ಮಂಡನೆ ಮಾಡಲಿದ್ದಾರೆ. ಚುನಾವಣಾ ವರ್ಷವಾಗಿರುವುದರಿಂದ ಸಿಎಂ ಬೊಮ್ಮಾಯಿ ಜನಪ್ರಿಯ ಕಾ೦ರ್ಯಕ್ರಮ ಮತ್ತು ೦ಯೋಜನೆಗಳನ್ನು ಘೋಷಣೆ ಮಾಡುವ ಸಾಧ್ಯತೆ ಹೆಚ್ಚಿದೆ ಎನ್ನಲಾಗುತ್ತಿದೆ. ಬಳಿಕ ಉಭ೦ಯ ಸದನಗಳಲ್ಲಿ ಬಜೆಟ್ ಮೇಲೆ ಸುದೀರ್ಘ ಚರ್ಚೆ ನಡೆ೦ಯಲಿದೆ. ಬಳಿಕ ಸರ್ಕಾರ ಶಾಸಕರು ಮಾಡಿದ ಚರ್ಚೆಗೆ ಉತ್ತರ ನೀಡಲಿದ್ದಾರೆ. ಆ ನಂತರ ಉಭ೦ಯ ಸದನಗಳಲ್ಲಿ ಮುಂಗಡ ಪತ್ರಕ್ಕೆ ಅನುಮೋದನೆ ಪಡೆ೦ಯುವುದು ವಾಡಿಕೆ.

ಚುನಾವಣಾ ವರ್ಷದಲ್ಲಿ ಪೂರ್ಣ ಪ್ರಮಾಣದ ಆ೦ಯವ್ಯ೦ಯ ಮಂಡಿಸದೇ ಜೂನ್ ಅಂತ್ಯದವರೆಗೆ ಲೇಖಾನುದಾನ ಪಡೆ೦ಯುವ ಸಂಪ್ರದಾ೦ಯವಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಪೂರ್ಣ ಪ್ರಮಾಣದ ಬಜೆಟ್ ಮಂಡಿಸಲಾಗುತ್ತಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.


ಝಾನ್ಸಿಲಕ್ಷ್ಮೀಬಾಯಿ ರಸ್ತೆ, ಮೈಸೂರು–570005

ಸಂಖ್ಯೆ:ಮೈನಪ್ರಾ:ನಯೋಶಾ:ಭೂಉಬ:ನಯೋ–3:2022–23 — ದಿನಾಂಕ: 24.01.2023


ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮ ಯೋಜನಾ ಕಾಯ್ದೆ 1961ರ ಪ್ರಕರಣ 14(ಎ) & 69(2), (3) ರನ್ವಯ

ಮೈಸೂರು ತಾಲ್ಲೋಕು, ಕಸಬಾ ಹೋಬಳಿ, ಹೆಬ್ಬಾಳು ಗ್ರಾಮದ ಸರ್ವೆ ನಂ. 322ರ 05 ಎಕರೆ 24 ಗುಂಟೆ ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು ಕೆ.ಟಿ.ಸಿ.ಪಿ ಕಾಯ್ದೆ 1961ರ ಪ್ರಕರಣ 69(2)ರನ್ವಯ ಉದ್ಯಾನವನ ವಲಯದಿಂದ ವಾಣಿಜ್ಯ ವಲಯಕ್ಕೆ ಮತ್ತು ಸ.ನಂ. 324/1ರ 01 ಎಕರೆ 28 ಗುಂಟೆ ಹಾಗೂ ಸ.ನಂ. 324/2ರ 02 ಎಕರೆ 03 ಗುಂಟೆ ವಿಸ್ತೀರ್ಣದ ಜಮೀನಿನ ಭೂ ಉಪಯೋಗವನ್ನು ಕೆ.ಟಿ.ಸಿ.ಪಿ. ಕಾಯ್ದೆ 1961ರ ಪ್ರಕರಣ 14(ಎ) ರನ್ವಯ ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವಂತೆ ಶ್ರೀಮತಿ ಶೈಲಜಾ ಸಿ, ಶ್ರೀ ಮಧು ರಾಘವೇಂದ್ರ ಶ್ರೀ ಚಲುವೇಗೌಡ ಮತ್ತು ಇತರರು ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯಿಂದ "ಈ ಜಮೀನುಗಳಲ್ಲಿ ವಾಣಿಜ್ಯ ಚಟುವಟಿಕೆಯನ್ನು ಪ್ರಾರಂಭಿಸುವುದರಿಂದ ಸ್ಥಳೀಯರಿಗೆ ಉದ್ಯೋಗ ದೊರಕುವಂತಾಗುತ್ತದೆ. ವಾಣಿಜ್ಯ ಚಟುವಟಿಕೆ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರ ಉದ್ಯೋಗ ದೊರೆಯುತ್ತದೆ" ಎಂದು ಸಾರ್ವಜನಿಕ ಹಿತಾಸಕ್ತಿ ಕುರಿತು ಮನವಿಯಲ್ಲಿ ತಿಳಿಸಿರುತ್ತಾರೆ. ಸದರಿ ಜಮೀನಿನ ಭೂ ಉಪಯೋಗದ ಬದಲಾವಣೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಈ ಪ್ರಕಟಣೆಯ ಪತ್ರಿಕೆಯಲ್ಲಿ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು–570 005 ಇವರಿಗೆ ಮುದ್ದಾಂ ಅಥವಾ ನೋಂದಾಯಿತ ಅಂಚೆ ಮೂಲಕ ತಲುಪಿಸಬಹುದಾಗಿದೆ.



ಸಹಿ/– ನಗರ ಯೋಜಕ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು



ಆತ್ಮವಿಶ್ವಾಸವಿದ್ದರೆ ಅರ್ಧ ಗೆದ್ದಂತೆ

ಪರೀಕ್ಷಾರ್ಥಿಗಳಿಗೆ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಕಿವಿಮಾತು



ಮೈಸೂರು, ಜ.25(ಎಂಕೆ)– ನಗರದ ಲಕ್ಷ್ಮಿಪುರಂನಲ್ಲಿರುವ ಜ್ಞಾನಬುತ್ತಿ ಸಂಸ್ಥೆಯಲ್ಲಿ ಪಿಸಿ ಮತ್ತು ಪಿಎಸ್ಐ ಪರೀಕ್ಷಾರ್ಥಿಗಳ ಅಧ್ಯಯನ ಪುಸ್ತಕವನ್ನು ನಗರಪಾಲಿಕೆ ಆಯುಕ್ತಲಕ್ಷ್ಮಿಕಾಂತರೆಡ್ಡಿ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ನಿಮ್ಮಲ್ಲಿ ಆತ್ಮವಿಶ್ವಾಸವಿದ್ದರೆ ಶೇ.50 ರಷ್ಟು ಗೆದ್ದ ಹಾಗೆ. ಉಳಿದಂತೆ ಕಠಿಣ ಪರಿಶ್ರಮ ಮತ್ತು ನಿರಂತರ ಬದ್ಧತೆಯಿಂದ ಕೆಲಸ ಮಾಡಿದರೆ ಯಶಸ್ಸು ನಿಮ್ಮತ್ತ ಧಾವಿಸಿ ಬರಲಿದೆ. ನನ್ನಿಂದಾಗದು ಎಂಬ ಪದ ನಿಮ್ಮಲ್ಲಿ ಸುಳಿಯಲೇಬಾರದು. ಉನ್ನತ ಹುದ್ದೆಗಳನ್ನು ಅಲಂಕರಿಸಿದವರ ಪಟ್ಟಿಯನ್ನೊಮ್ಮೆ ಅವಲೋಕಿಸಿದರೆ ಅವರೆಲ್ಲಾ ದೂರದ ಗ್ರಾಮೀಣ ಪ್ರದೇಶಗಳಿಂದ ಬಂದವರೇ ಆಗಿರುತ್ತಾರೆ. ಕುಂಟುನೆಪ ಹೇಳದೆ ಬದ್ಧತೆಯಿಂದ ಕಠಿಣ ಪರಿಶ್ರಮ ಹಾಕಿದರೆ ಯಶಸ್ಸು ಕಟ್ಟಿಟ್ಟಬುತ್ತಿ ಎಂದರು.

ಡಿಸಿಪಿ ಗೀತಾ ಪ್ರಸನ್ನ ಮಾತನಾಡಿ, ತ್ಯಾಗವಿಲ್ಲದೆ ಯಾವುದೇ ಯಶಸ್ಸು ಸಾಧ್ಯವಿಲ್ಲ. ತಾತ್ಕಾಲಿಕ ಸುಖಕ್ಕೆ ಮನಸೋಲದೆ ಒಂದೆರಡು ವರ್ಷ ಕಠಿಣ ತಪಸ್ಸು ಮಾಡಿದರೆ ಜೀವನ ಪರ್ಯಂತ ಸುಖವಾಗಿರಬಹುದು. ಸರ್ಕಾರದ ಎಲ್ಲಾ ಇಲಾಖೆಗಳಿಗಿಂತಲೂ ಪೊಲೀಸ್ ಇಲಾಖೆ ಹೆಚ್ಚು ಶ್ರೇಷ್ಠವಾದುದು. ಜನಸಾಮಾನ್ಯರ ಕಷ್ಟಕಾರ್ಪಣ್ಯಗಳಿಗೆ ನೇರವಾಗಿ ಸಹಾಯ ಮಾಡಬಹುದು. ಜನ ಏನೇ ಕಷ್ಟ ಬಂದರೂ ಮೊದಲು ಪೊಲೀಸ್ ಇಲಾಖೆಯ ನೆರವನ್ನು ಕೋರುತ್ತಾರೆ. ಅತೀ ಹೆಚ್ಚಿನ ಬೆಲೆಯ ಯಾವುದೇ ವಸ್ತ್ರವನ್ನು ಧರಿಸಿದರೂ ಸಿಕ್ಕದ ಖುಷಿ ಮತ್ತು ಸಂತೋಷ ಖಾಕಿ ಸಮವಸ್ತ್ರ ಧರಿಸಿದರೆ ಸಿಗುತ್ತದೆ. ಪೊಲೀಸ್ ಇಲಾಖೆಯಲ್ಲಿ ಈಗ ಹೆಚ್ಚಿನ ಹುದ್ದೆಗಳ ನೇಮಕಾತಿ ನಡೆಯುತ್ತಿದೆ ಎಂದರು.

ಮೈಸೂರು ಪ್ರಾದೇಶಿಕ ಕಚೇರಿಯ ಹೆಚ್ಚುವರಿ ಆಯುಕ್ತ ಶಿವರಾಜು, ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ, ಜಿಲ್ಲಾಧಿಕಾರಿ ಕಚೇರಿಯ ಯೋಜನಾ ನಿರ್ದೇಶಕ ಆಶಾದ್ ರೆಹಮಾನ್ ಶರೀಫ್, ಜ್ಞಾನಬುತ್ತಿ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಜೈನಹಳ್ಳಿ ಸತ್ಯನಾರಾಯಣಗೌಡ, ಕೃಪ. ಗಣೇಶ್, ಹೆಚ್. ಬಾಲಕೃಷ್ಣ, ರಾ.ರಾಮ ಕೃಷ್ಣ, ಕೆವೈನಾಗೇಂದ್ರ, ಡಾ.ಎನ್.ಮಹದೇವಸ್ವಾಮಿ, ಡಾ. ಪಳನಿಸ್ವಾಮಿ, ಡಾ. ಉಮೇಶ್ ಬೇವಿನಹಳ್ಳಿ, ಎಸ್. ಗಣೇಶ, ಡಾ. ಈ ಶಿವಪ್ರಸಾದ್, ಯು.ಎಂ. ಶರದ್ ರಾವ್ ಉಪಸ್ಥಿತರಿದ್ದರು.

ಒಂದು ಮತಕ್ಕೆ 6 ಸಾವಿರ ರೂ. ಆಮಿಷ: ಶಾಸಕ, ಸಿಎಂ, ಜೆಪಿ ನಡ್ಡಾ ವಿರುದ್ಧ ಕಾಂಗ್ರೆಸ್‌ನಿಂದ ದೂರು



ಬೆಂಗಳೂರು, ಜ.25– ರಾಜ್ಯ ವಿಧಾನಸಭಾ ಚುನಾವಣೆ ಸನಿಹದಲ್ಲಿ ಮತದಾರರನ್ನು ಸೆಳೆಯುವ ಉದ್ದೇಶದಿಂದ ಲಂಚದ ಆಮಿಷವೊಡ್ಡಿರುವ ಆರೋಪದ ಮೇಲೆ ಶಾಸಕ ರಮೇಶ್ ಜಾರಕಿಹೊಳಿ, ಬಿಜೆಪಿ ರಾಷ್ಟ್ರಾಧ್ಯಕ್ಷ, ಜೆ.ಪಿ.ನಡ್ಡಾ ಸಿಎಂ ಬಸವರಾಜ ಬೊಮ್ಮಾಯಿ ವಿರುದ್ಧ ಕಾಂಗ್ರೆಸ್ ಪಕ್ಷ ಪೊಲೀಸರಿಗೆ ದೂರು ನೀಡಿದೆ. ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಡಿಕೆ ಶಿವ ಕುಮಾರ್ ಹಾಗೂ ವಿಪಕ್ಷ ನಾಯಕ ಸಿದ್ದರಾಮಯ್ಯ, ದೂರಿನ ಪತ್ರಕ್ಕೆ ಸಹಿ ಹಾಕಿದ್ದು, ತಮ್ಮ ದೂರಿನ ಆಧಾರದಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳುವಂತೆ ಮನವಿ ಮಾಡಿದ್ದಾರೆ.

ಈಗ ಇತ್ತೀಚೆಗೆ ಬೆಳಗಾವಿಯಲ್ಲಿ ನಡೆದ ರ್‍ಯಾಲಿಯಲ್ಲಿ ಭಾಗವಹಿಸಿ ಮಾತನಾಡಿದ್ದ ಶಾಸಕ ರಮೇಶ್ ಜಾರಕಿಹೊಳಿ, ಹಾಲಿ ಕಾಂಗ್ರೆಸ್ ಶಾಸಕಿ 3,000 ರೂಪಾಯಿ ಮೌಲ್ಯದ ಉಡುಗೊರೆ ಹಾಗೂ ನಗದುಗಳನ್ನು ನೀಡಿದರೆ, ನಾನು ಮತದಾರರಿಗೆ 6,000 ರೂಪಾಯಿ ಮೌಲ್ಯದ ಉಡುಗೊರೆಗಳನ್ನು ನೀಡುತ್ತೇನೆ ಎಂದು ಹೇಳಿದ್ದರು.

ಜಾರಕಿಹೊಳಿ ಅವರ ಈ ಹೇಳಿಕೆಯಿಂದ ಬಿಜೆಪಿಯೇನೋ ಅಂತರ ಕಾಯ್ದುಕೊಂಡಿದೆ, ಆದರೆ ಕಾಂಗ್ರೆಸ್ ಜಾರಕಿಹೊಳಿ ಸೇರಿದಂತೆ ಬಿಜೆಪಿ ನಾಯಕರ ವಿರುದ್ಧ ಪ್ರಕರಣ ದಾಖಲಿಸಿದೆ. 2023ರ ಜ.22ರಂದು ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ, ಬೆಳಗಾವಿಯಲ್ಲಿ ಮಾತನಾಡಿ, ಕರ್ನಾಟಕದ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಪ್ರತಿ ಮತಕ್ಕೆ 6,000 ರೂ.ನೀಡಲಿದೆ ಎಂಬ ಹೇಳಿಕೆ ನೀಡಿದ್ದರು. ಈ ಹೇಳಿಕೆ ಕ್ಯಾಮರಾದಲ್ಲೂ ಸೆರೆಯಾಗಿದೆ ಎಂದು ಹೈ ಗ್ರೌಂಡ್ಸ್ ಪೊಲೀಸ್ ಠಾಣೆಗೆ ಸಲ್ಲಿಸಿರುವ ದೂರಿನಲ್ಲಿ ಕಾಂಗ್ರೆಸ್ ಹೇಳಿದೆ. ಇದು ಬಿಜೆಪಿ ವರಿಷ್ಠರೇ ರೂಪಿಸಿರುವ ಪಿತೂರಿಯಾಗಿದ್ದು, ಸಿಎಂ, ಬಿಜೆಪಿ ರಾಷ್ಟ್ರಾಧ್ಯಕ್ಷ ನಡ್ಡಾ ಹಾಗೂ ಪಕ್ಷದ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್ ಅವರೂ ಈ ಪಿತೂರಿಯಲ್ಲಿ ಭಾಗಿಯಾಗಿದ್ದಾರೆ ಎಂದು ಕಾಂಗ್ರೆಸ್ ತಿಳಿಸಿದೆ.

ಈ ಹೇಳಿಕೆಯ ಹಿಂದೆ ಬಿಜೆಪಿ ಹೈಕಮಾಂಡ್ ನಾಯಕರೇ ಇದ್ದು, ಇದು ಮತದಾರರನ್ನು ಭ್ರಷ್ಟಗೊಳಿಸುವ ಸಂಘಟಿತ ಸಂಚು ಎಂದು ಕಾಂಗ್ರೆಸ್ ಆರೋಪಿಸಿದೆ. ರಾಜ್ಯದಲ್ಲಿ 5 ಕೋಟಿ ಮತದಾರರಿದ್ದು ಬಿಜೆಪಿ ನಾಯಕರು 30,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಮೂಲಕ ಈ ಚುನಾವಣೆ ಗೆಲ್ಲಲು ಬಿಜೆಪಿ ನಾಯಕರು ಯತ್ನಿಸುತ್ತಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಹೊಸಮನೆಗೆ ಆರ್‌ಆರ್ ನಂಬರ್ ನೀಡಲು 50 ಸಾವಿರ ಲಂಚ ಸ್ವೀಕಾರ

ಚೆಸ್ಕಾಂನ ಇಬ್ಬರು ಇಂಜಿನಿಯರ್‌ಗಳು ಲೋಕಾಯುಕ್ತ ಬಲೆಗೆ



ಮೈಸೂರು, ಜ.25(ಎಂಕೆ)– ಹೊಸದಾಗಿ ನಿರ್ಮಿಸಿರುವ ಕಟ್ಟಡಕ್ಕೆ ಆರ್.ಆರ್.ನಂಬರ್ ನೀಡಲು ಎಲೆಕ್ಟ್ರಿಕ್ ಕಂಟ್ರಾಕ್ಟರ್ ಬಳಿ 50 ಸಾವಿರ ರೂ. ಲಂಚ ಪಡೆಯುತ್ತಿದ್ದ ಚೆಸ್ಕಾಂನ ಇಬ್ಬರು ಇಂಜಿನಿಯರ್‌ಗಳು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಚೆಸ್ಕಾಂನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರಾಜು, ಸಹಾಯಕ ಇಂಜಿನಿಯರ್ ಲೋಕೇಶ್ ಎಲೆಕ್ಟ್ರಿಕ್ ಕಂಟ್ರಾಕ್ಟರ್ ಸೈಯದ್ ಮುಜಾಹಿದ್ದೀನ್ ಅವರ ಬಳಿ ಹೊಸದಾಗಿ ನಿರ್ಮಿಸಿರುವ ಕಟ್ಟಡಕ್ಕೆ ಆರ್.ಆರ್.ನಂಬರ್ ನೀಡಲು ಲಂಚ ಪಡೆಯುವ ವೇಳೆ ಸಿಕ್ಕಿಬಿದ್ದಿದ್ದಾರೆ. ಮೊದಲು 1.50 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದ ಈ ಇಬ್ಬರು ಇಂಜಿನಿಯರ್‌ಗಳು, ಕೊನೆಗೆ 70 ಸಾವಿರ ನೀಡುವಂತೆ ತೀರ್ಮಾನಿಸಿದ್ದಾರೆ. ಅದರಂತೆ ಬುಧವಾರ ಕಚೇರಿಯಲ್ಲೇ 50 ಸಾವಿರ ರೂ.ಲಂಚ ಪಡೆಯುವಾಗ ರೆಡ್‌ಹ್ಯಾಂಡ್ ಆಗಿ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಲೋಕಾಯುಕ್ತ ಅಪರ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್, ಪೊಲೀಸ್ ಮಹಾನಿರೀಕ್ಷಕ ಸುಬ್ರಹ್ಮಣ್ಯೇಶ್ವರ ರಾವ್ ಅವರ ಮಾರ್ಗದರ್ಶನದಲ್ಲಿ ಪೊಲೀಸ್ ಅಧೀಕ್ಷಕ ಸುರೇಶ್ ಬಾಬು, ಡಿವೈಎಸ್ಪಿ ಕೃಷ್ಣಯ್ಯ, ಮಾಲತೀಶ್ ನೇತೃತ್ವದಲ್ಲಿ ಮೈಸೂರು ಲೋಕಾಯುಕ್ತ ಠಾಣೆ ಇನ್ಸ್‌ಪೆಕ್ಟರ್‌ಗಳಾದ ಉಮೇಶ್, ರೂಪಶ್ರೀ, ಲೋಕೇಶ್ ಹಾಗೂ ಸಿಬ್ಬಂದಿಗಳಾದ ಜಗದೀಶ್, ರಂಗಲಕ್ಷ್ಮಿ, ಲೋಕೇಶ್, ಪ್ರಕಾಶ್, ಕಾಂತರಾಜ್, ಪ್ರತೀಪ್, ಲೋಕೇಶ್, ಮೋಹನ್, ಪರಶುರಾಮ್, ಸುಂದರೇಶ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಸುಧಾಕರ್ ನೇತೃತ್ವದಲ್ಲಿ 3 ಸಾವಿರ ಕೋಟಿ ರೂ. ಅಕ್ರಮ: ಸಿದ್ದರಾಮಯ್ಯ ಚಾರ್ಜ್‌ಶೀಟ್

ಬೆಂಗಳೂರು, ಜ.25– ಸಚಿವ ಡಾ. ಕೆ.ಸುಧಾಕರ್ ಅಲಿಬಾಬಾ ಮತ್ತು ಕಳ್ಳರ ಜೊತೆ ಸೇರಿಕೊಂಡಿದ್ದಾನೆ. ಕೋವಿಡ್ ಸಂದರ್ಭದಲ್ಲಿ ಸುಧಾಕರ್ ನೇತೃತ್ವದಲ್ಲಿ 3 ಸಾವಿರ ಕೋಟಿ ರೂ. ಅಕ್ರಮ ಆಗಿದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದ್ದಾರೆ.

ಬೆಂಗಳೂರಿನಲ್ಲಿ ಮಾತನಾಡಿದ ಅವರು, ಹೆಚ್.ಕೆ. ಪಾಟೀಲ್ ಅವರ ನೇತೃತ್ವದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಆರೋಗ್ಯ ಇಲಾಖೆಯಲ್ಲಿ ಕೋವಿಡ್ ವೇಳೆ ಲೋಪ ಆಗಿರುವ ಬಗ್ಗೆ ವರದಿ ಕೊಟ್ಟಿದೆ. ಆದರೆ ಸ್ಪೀಕರ್ ಇನ್ನೂ ನಾನು ಆರ್‌ಎಸ್‌ಎಸ್ ಅಂದ್ಕೊಂಡು ಬಿಟ್ಟಿದ್ದಾರೆ. ಅದಕ್ಕೆ ಹೆಚ್.ಕೆ. ಪಾಟೀಲ್ ಸಮಿತಿ ಕೊಟ್ಟ ವರದಿಯನ್ನು ಸದನದಲ್ಲಿ ಮಂಡನೆ ಮಾಡಿಲ್ಲ, ಇಟ್ಕೊಂಡು ಕುಳಿತಿದ್ದಾರೆ ಎಂದು ಆರೋಪಿಸಿದರು. ಸಿಎಜಿ ವರದಿ ರೀ ಕನ್ಸಿಲೇಶನ್ ಅಂತೇಳಿದೆ. ಖರ್ಚು, ವೆಚ್ಚ ತಾಳೆ ಆಗುತ್ತಿಲ್ಲ, ಅದನ್ನು ರೀ ಕನ್ಸಿಲೇಶನ್ ಮಾಡಿ ಎಂದು ಹೇಳಿದ್ದಾರೆ. ಆದರೆ 35 ಸಾವಿರ ಕೋಟಿ ರೂ. ಅಕ್ರಮ ಎಂದು ಹೇಳಿದ್ದಾರೆ. ಇದು ಸುಳ್ಳು. ಇವರಿಗೆ ಸಿಎಜಿ ವರದಿ ಅರ್ಥ ಆಗಿಲ್ಲ ಎಂದು ವಾಗ್ದಾಳಿ ನಡೆಸಿದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ 50% ರೀ ಕನ್ಸಿಲೇಶನ್, ತಾಳೆ ಆಗ್ತಿರಲಿಲ್ಲ. ಆದರೆ ನಮ್ಮ ಸರ್ಕಾರದ ಅವಧಿಯಲ್ಲಿ 19% ಮಾತ್ರ ರೀ ಕನ್ಸಿಲೇಶನ್, ತಾಳೆ ಆಗುತ್ತಿರಲಿಲ್ಲ. ಆದರೆ ಆರ್‌ಎಸ್‌ಎಸ್ ಅವರು ಸುಮ್ನೆ ಗೂಬೆ ಕೂರಿಸ್ತಾರೆ ಎಂದು ಗುಡುಗಿದರು.

ಇದೇ ವೇಳೆ ಸಿಎಂ ವಿರುದ್ಧವೂ ಕಿಡಿಕಾರಿದ ಅವರು, ಈ ಬಸವರಾಜ ಬೊಮ್ಮಾಯಿ ಆರ್‌ಎಸ್‌ಎಸ್‌ನ ಕೈಗೊಂಬೆ. ಸಿಎಜಿ ವರದಿಯಲ್ಲಿ ರೀ ಕನ್ಸಿಲೇಶನ್ ಅನ್ನು ಭ್ರಷ್ಟಾಚಾರ ಅಂತಾ ಕರೆಯಲ್ಲ. ಇದು ಹಣಕಾಸಿನ ಅಶಿಸ್ತು ಎಂದು ಹೇಳುತ್ತೇನೆ.

ಎಸ್.ಎಂ. ಕೃಷ್ಣ ಪದ್ಮವಿಭೂಷಣ: ದಿನೇಶ್ ಗೂಳಿಗೌಡ ಅಭಿನಂದನೆ



ಎಸ್.ಎಂ. ಕೃಷ್ಣ



ದಿನೇಶ್ ಗೂಳಿಗೌಡ

ಬೆಂಗಳೂರು, ಜ.25– ಮಂಡ್ಯ ಜಿಲ್ಲೆಯ ಸುಪುತ್ರರು, ಈ ರಾಷ್ಟ್ರದ ಪ್ರಜಾಪ್ರಭುತ್ವ ಆಡಳಿತದ ನಾಲ್ಕು ಸದನಗಳಾದ ವಿಧಾನಸಭೆ, ವಿಧಾನಪರಿಷತ್, ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ದಕ್ಷತೆ ಹಾಗೂ ಪ್ರಾಮಾಣಿಕೆಯಿಂದ ಕೆಲಸ ಮಾಡಿದ ಅನುಭವಿ ರಾಜಕಾರಣಿ ಎಸ್.ಎಂ. ಕೃಷ್ಣ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಪದ್ಮ ವಿಭೂಷಣ' ದೊರೆತಿರುವುದು ಅತ್ಯಂತ ಸಂತಸದ ಸಂಗತಿ. ಅವರನ್ನು ಮನಃಪೂರ್ವಕವಾಗಿ ಅಭಿನಂದಿಸುವುದಾಗಿ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳೀಗೌಡ ತಿಳಿಸಿದ್ದಾರೆ.

ಬೆಂಗಳೂರಿನತ್ತ ವಿಶ್ವವೇ ತಿರುಗಿ ನೋಡುವಂತೆ ಐಟಿಬಿಟಿ ನಗರಿಯನ್ನಾಗಿ ಮಾಡಿ ಕರ್ನಾಟಕದ ಆರ್ಥಿಕತೆಗೆ ಬಹು ದೊಡ್ಡ ಕೊಡುಗೆ ನೀಡುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದ ಎಸ್.ಎಂ. ಕೃಷ್ಣ ಅವರು ರಾಷ್ಟ್ರಮಟ್ಟದಲ್ಲಿಯೂ ಸೇವೆ ಸಲ್ಲಿಸಿ ಕರ್ನಾಟಕದ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಇವರ ಸುದೀರ್ಘ ಸೇವೆ ಹಾಗೂ ಸಾಧನೆಯನ್ನು ಗುರುತಿಸಿ ಕೇಂದ್ರ ಸರ್ಕಾರವು ಪದ್ಮವಿಭೂಷಣ ಪ್ರಶಸ್ತಿಗೆ ಆಯ್ಕೆ ಮಾಡಿದೆ.

ಮಂಡ್ಯ ಜಿಲ್ಲೆಯ ಕೀರ್ತಿಯನ್ನು ಇಡೀ ವಿಶ್ವಕ್ಕೆ ಪಸರಿಸಿದಂತಹ ಕೃಷ್ಣರಿಗೆ ಪದ್ಮ ವಿಭೂಷಣ ಪ್ರಶಸ್ತಿ ಸಿಕ್ಕಿರುವುದು ಜಿಲ್ಲೆಯ ಜನರಿಗೆ ಅಭಿಮಾನ ಹಾಗೂ ಕೀರ್ತಿಯೇ ಸರಿ. ಮಂಡ್ಯ ಜಿಲ್ಲೆಯ ಜನತೆಯ ಪರವಾಗಿ ಮತ್ತೊಮ್ಮೆ ಅವರನ್ನು ಅಭಿನಂದಿಸುವುದಾಗಿ ತಿಳಿಸಿದ್ದಾರೆ.

ಮೈಸೂರು ಸಮಾಜಶಾಸ್ತ್ರ ಹಿರಿಯ ವಿದ್ಯಾರ್ಥಿಗಳ 'ಸ್ನೇಹ ಸಮ್ಮಿಲನ'

ಮೈಸೂರು, ಜ.25(ಎಂಕೆ)– ಮೈಸೂರು ವಿವಿ ಸಮಾಜಶಾಸ್ತ್ರ ಅಧ್ಯಯನ ವಿಭಾಗದ ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ 'ಸ್ನೇಹ ಮಿಲನ' ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತಿದೆ. ಮೈಸೂರು ವಿವಿ ಮಾನಸ ಗಂಗೋತ್ರಿಯ ಸಮಾಜಶಾಸ್ತ್ರ ವಿಭಾಗದಲ್ಲಿ ಪದವಿ ಪಡೆದು, ವಿವಿ ವ್ಯಾಪ್ತಿಯ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿರುವ ವಿಭಾಗಗಳು, ಪದವಿ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಸಮಾಜಶಾಸ್ತ್ರ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಹಾಗೂ ಇತರ ಇಲಾಖೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ವೃತ್ತಿ ಬಾಂಧವರನ್ನು ಗೌರವಿಸಲು ಹಾಗೂ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ನಡುವೆ ಬಾಂಧವ್ಯವನ್ನು ಬೆಸೆಯಲು ಫೆಬ್ರವರಿ ತಿಂಗಳ ಮೂರನೇ ಅಥವಾ ನಾಲ್ಕನೇ ವಾರದಲ್ಲಿ 'ಸ್ನೇಹ ಮಿಲನ' ಕಾರ್ಯಕ್ರಮವನ್ನು ಏರ್ಪಡಿಸುತ್ತಿದೆ. ಈ ಸಮಾರಂಭದಲ್ಲಿ ಭಾಗವಹಿಸಲು ಆಸಕ್ತಿ ಇರುವ ಮಿತ್ರರನ್ನು ಸಂಘ ಹೃತ್ಪೂರ್ವಕವಾಗಿ ಆಹ್ವಾನಿಸುತ್ತಿದೆ. ಈಗಾಗಲೇ ಸಾಮಾಜಿಕ ಜಾಲತಾಣಗಳ ಮೂಲಕ ವೃತ್ತಿ ಬಾಂಧವರನ್ನು ಸಂಪರ್ಕಿಸಲು ಪ್ರಯತ್ನ ನಡೆದಿದ್ದು, ವಿಷಯ ತಲುಪದಿದ್ದಲ್ಲಿ ಇದನ್ನು ವೈಯಕ್ತಿಕ ಆಹ್ವಾನವೆಂದು ಪರಿಗಣಿಸಿ ಹಾಗೆಯೇ ಹೆಚ್ಚಿನ ಮಾಹಿತಿಗಾಗಿ ಸಂಘಟನಾ ಕಾರ್ಯದರ್ಶಿಗಳಾದ ಎಮ್ ರಾಫೆಲ್ (9448738979) ಅಥವಾ ಸಂಘದ ಕಾರ್ಯದರ್ಶಿ ಎಮ್.ಎಸ್.ಶ್ರೀನಿವಾಸನ್ (9482072180) ಅವರನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.



ಕೋವಿಡ್ ಸಾಂಕ್ರಾಮಿಕ ದೇಶದ ಆರ್ಥಿಕತೆಯನ್ನೇ ಅಲುಗಾಡಿಸಿದೆ

ದೇಶವನ್ನು ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಚೊಚ್ಚಲ ಭಾಷಣ

ನವದೆಹಲಿ: 74ನೇ ಗಣರಾಜ್ಯೋತ್ಸವದ ಮುನ್ನಾದಿನ ದೇಶವನ್ನು ಉದ್ದೇಶಿಸಿ ಮಾತನಾಡಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಕೋವಿಡ್ ಸಾಂಕ್ರಾಮಿಕ ದೇಶದ ಆರ್ಥಿಕತೆಯನ್ನೇ ಅಲುಗಾಡಿಸಿದೆ ಎಂದು ಬುಧವಾರ ಹೇಳಿದ್ದಾರೆ.

ರಾಷ್ಟ್ರಪತಿಗಳಾಗಿ ಇಂದು ಮೊದಲ ಬಾರಿಗೆ ದೇಶ ಉದ್ದೇಶಿಸಿ ಭಾಷಣ ಮಾಡಿದ ದ್ರೌಪದಿ ಮುರ್ಮು ಅವರು, ನಾವು ಗಣರಾಜ್ಯೋತ್ಸವ ವನ್ನು ಆಚರಿಸಿದಾಗ, ಸಾಧಿಸಿದ್ದನ್ನು ಒಟ್ಟಾಗಿ, ರಾಷ್ಟ್ರವಾಗಿ ಸಂಭ್ರಮಿಸುತ್ತೇವೆ ಎಂದು ಹೇಳಿದರು.

ಸಂವಿಧಾನದ ಕರಡು ಸಮಿತಿಯ ನೇತೃತ್ವ ವಹಿಸಿ, ಅದಕ್ಕೆ ಅಂತಿಮ ರೂಪ ನೀಡುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಭಾರತ ಸದಾ ಕೃತಜ್ಞತೆ ಸಲ್ಲಿಸುತ್ತದೆ ಎಂದು ರಾಷ್ಟ್ರಪತಿಗಳು ತಿಳಿಸಿದರು. ಆರಂಭಿಕ ಕರಡು ಸಿದ್ಧಪಡಿಸಿದ ನ್ಯಾಯಶಾಸ್ತ್ರಜ್ಞ ಬಿ.ಎನ್.ರಾವ್ ಮತ್ತು ಸಂವಿಧಾನ ರಚನೆಯಲ್ಲಿ ಸಹಾಯ ಮಾಡಿದ ಇತರ ತಜ್ಞರು, ಅಧಿಕಾರಿಗಳ ಪಾತ್ರವನ್ನು ನಾವು ನೆನಪಿಸಿಕೊಳ್ಳಬೇಕು. ಆ ಅಸೆಂಬ್ಲಿಯ ಸದಸ್ಯರು ಭಾರತದ ಎಲ್ಲಾ ಪ್ರದೇಶಗಳು ಮತ್ತು ಸಮುದಾಯಗಳನ್ನು ಪ್ರತಿನಿಧಿಸಿದ್ದರು ಮತ್ತು ಅದರಲ್ಲಿ 15 ಮಹಿಳೆಯರೂ ಇದ್ದರು ಎಂಬ ಅಂಶದ ಬಗ್ಗೆ ನಾವು ಹೆಮ್ಮೆಪಡುತ್ತೇವೆ ಎಂದಿದ್ದಾರೆ. ಕೋವಿಡ್ ಸಾಂಕ್ರಾಮಿಕದಿಂದ ಹಲವು ವಲಯಗಳು ನಷ್ಟ ಅನುಭವಿಸಿವೆ. ಆದರೆ ಸರ್ಕಾರದ ಸಮಯೋಚಿತ ಮತ್ತು ಪೂರ್ವಭಾವಿ ಕ್ರಮಗಳು ಭಾರತವನ್ನು ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಗಳಲ್ಲಿ ಒಂದನ್ನಾಗಿ ಮಾಡಿದೆ ಎಂದು ರಾಷ್ಟ್ರಪತಿ ಮುರ್ಮು ಹೇಳಿದ್ದಾರೆ.



ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್ ಹಾಕಿ ಮೈದಾನದಲ್ಲಿ ಕರ್ನಾಟಕ ರಾಜ್ಯ ವಾಲಿಬಾಲ್ ಸಂಸ್ಥೆ ವತಿಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಹೊನಲು ಬೆಳಕಿನ ಅಂತರ ಜಿಲ್ಲಾ ವಾಲಿಬಾಲ್ ಪಂದ್ಯಾವಳಿಗೆ ಶಾಸಕ ಎಲ್.ನಾಗೇಂದ್ರ ಬುಧವಾರ ಚಾಲನೆ ನೀಡಿದರು. ಮೇಯರ್ ಶಿವಕುಮಾರ್, ಮುಡಾ ಅಧ್ಯಕ್ಷ ಯಶಸ್ವಿ ಎಸ್. ಸೋಮಶೇಖರ್, ವಾಲಿಬಾಲ್ ಕೋಚ್ ಸುದರ್ಶನ್ ಮತ್ತಿತರರಿದ್ದರು.

23ನೇ ವರ್ಷದ ಸವಿನೆನಪು



ಶ್ರೀಮತಿ ಜಯಮ್ಮನವರು
ನಿಧನ: 27-01-2000

ನೀವು ನಮ್ಮನಗಲಿ ಇಂದಿಗೆ 23 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು
ಮಗ ಶಿವಣ್ಣ,
ಸೊಸೆ: ಜ್ಯೋತಿ,
ಎಸ್. ಸ್ವರೂಪ್ ಗೌಡ,
ಎಸ್.ಶ್ವೇತ, ಹಾಗೂ ಕುಟುಂಬದವರು,
ಯರಗನಹಳ್ಳಿ

ಹಸಿರು ನಮ್ಮ ಉಸಿರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಐಟಂ-1, 2, 3 ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು ವಾಣಿವಿಲಾಸ ಮೊಹಲ್ಲಾ, ಗೋಕುಲಂ 3ನೇ ಹಂತ, ಕಾಂಟೂರ್ ರಸ್ತೆ, ಮನೆ ನಂಬರ್ 1134/ಇ ರ ನಿವಾಸಿಯಾದ ಶ್ರೀ ಎಮ್.ಎನ್. ಲಕ್ಷ್ಮಿಕಾಂತನ್ ಬಿನ್ ಲೇಟ್ ಎಮ್.ಎನ್. ನಾರಾಯಣಪ್ಪ ಮತ್ತು ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಏಳು (07) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು, ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಐಟಂ-1

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಹುಳಿಮಾವು ಗ್ರಾಮದ ಸರ್ವೆ ನಂಬರ್, 58/2ಬಿ ರಲ್ಲಿನ ಇಪ್ಪತ್ತೊಂಬತ್ತು ಗುಂಟೆ (0.29.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ – ಪೂರ್ವಕ್ಕೆ: ವರುಣ ನಾಲೆ ; ಪಶ್ಚಿಮಕ್ಕೆ: ಸರ್ವೆ ನಂಬರ್: 59/4 ಮತ್ತು 59/2ಬಿ ; ಉತ್ತರಕ್ಕೆ: ಸರ್ವೆ ನಂಬರ್ 58/2ಎ ; ದಕ್ಷಿಣಕ್ಕೆ: ಸರ್ವೆ ನಂಬರ್ 56

ಐಟಂ-2

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಹುಳಿಮಾವು ಗ್ರಾಮದ ಸರ್ವೆ ನಂಬರ್ 59/3 ರಲ್ಲಿನ ಹದಿನೇಳು ಗುಂಟೆ (0.17.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ – ಪೂರ್ವಕ್ಕೆ: ಸರ್ವೆ ನಂಬರ್ 59/4 ; ಪಶ್ಚಿಮಕ್ಕೆ: ಸರ್ವೆ ನಂಬರ್ 60 ; ಉತ್ತರಕ್ಕೆ: ಸರ್ವೆ ನಂಬರ್ 59/1 ; ದಕ್ಷಿಣಕ್ಕೆ: ಸರ್ವೆ ನಂಬರ್ 59/2ಎ.

ಐಟಂ-3

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಹುಳಿಮಾವು ಗ್ರಾಮದ ಸರ್ವೆ ನಂಬರ್, 59/4 ರಲ್ಲಿನ ಹದಿನಾರು ಗುಂಟೆ (0.16.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ – ಪೂರ್ವಕ್ಕೆ: ಸರ್ವೆ ನಂಬರ್ 58/2ಬಿ ; ಪಶ್ಚಿಮಕ್ಕೆ: ಸರ್ವೆ ನಂಬರ್ 59/3 ; ಉತ್ತರಕ್ಕೆ: ಸರ್ವೆ ನಂಬರ್ 59/1 ; ದಕ್ಷಿಣಕ್ಕೆ: ಸರ್ವೆ ನಂಬರ್ 59/2ಬಿ.

Sd/- M.N. Prakash Kalappa, KAR-1996-2000
Advocate & Legal Consultant, No. 2 & 3, 1st Floor, P.R.I. Complex, #67/7A, New Sayyaji Rao Road, Fort Mohalla, Mysuru-570 004
email: mnprakashkalappa@gmail.com
ಮೈಸೂರು: 25-01-2023 Mob: 9343112535

ಏನು ಮಾಡುತ್ತಿರೋ ನಂಗೊತ್ತಿಲ್ಲ ಚಿರತೆ ಹಾವಳಿಗೆ ಅಂತ್ಯ ಹಾಡಬೇಕಷ್ಟೆ...!

- ಮೈಸೂರು ಜಿಲ್ಲಾಡಳಿತಕ್ಕೆ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಾಕೀತು
- ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ತುರ್ತುಸಭೆ, ಸುದೀರ್ಘ ಚರ್ಚೆ, ಸಲಹೆ ಸ್ವೀಕಾರ



ಮೈಸೂರು, ಜ.25(ಎಂಕೆ)– ಟಿ.ನರಸೀಪುರ ತಾಲೂಕು ವ್ಯಾಪ್ತಿಯಲ್ಲಿ ತೀವ್ರ ಆತಂಕ ಸೃಷ್ಟಿಸಿರುವ ಚಿರತೆ ಹಾವಳಿಗೆ ಅಂತ್ಯವಾಡಲು ಎಲ್ಲಾ ಬಗೆಯ ಕ್ರಮ ಕೈಗೊಳ್ಳುವ ಮೂಲಕ ಜನತೆಯಲ್ಲಿ ಆವರಿಸಿರುವ ಭಯ ದೂರಮಾಡುವಂತೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಅರಣ್ಯ ಇಲಾಖೆ ಹಾಗೂ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಜಿಪಂ ಸಭಾಂಗಣದಲ್ಲಿ ಬುಧವಾರ ಟಿ.ನರಸೀಪುರ ತಾಲೂಕು ವ್ಯಾಪ್ತಿಯಲ್ಲಿ ಚಿರತೆ ಹಾವಳಿ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಕೈಗೊಂಡಿರುವ ಕ್ರಮಗಳ ಕುರಿತು ಅರಣ್ಯ ಇಲಾಖೆ, ಜಿಲ್ಲಾ ಮಟ್ಟದ ಅಧಿಕಾರಿಗಳು, ಟಿ.ನರಸೀಪುರ ವ್ಯಾಪ್ತಿಯ ಗ್ರಾಪಂ ಅಧ್ಯಕ್ಷರು ಹಾಗೂ ಪಿಡಿಓ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ ಚಿರತೆ ಸೆರೆಗೆ ಕೈಗೊಳ್ಳಬೇಕಾದ ಕ್ರಮಗಳು, ಅಗತ್ಯ ಸಲಕರಣೆಗಳು, ಕಬ್ಬು ಕಟಾವು, ವಿದ್ಯುತ್ ಪೂರೈಕೆ, ಶಾಲಾ ಮಕ್ಕಳಿಗೆ ಬಸ್ ಸೇವೆ, ಆಸ್ಪತ್ರೆ ಸೌಲಭ್ಯ, ಪರಿಹಾರ ಕುರಿತು ಗಂಭೀರವಾಗಿ ಚರ್ಚಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಚಿರತೆ ಹಾವಳಿಯನ್ನು ಕಂಟ್ರೋಲ್ ಮಾಡುತ್ತೀರೋ, ಶಾರ್ಪ್ ಶೂಟರ್ ಕರೆಸಿ ಶೂಟ್ ಮಾಡಿಸುತ್ತೀರೋ, ಇಲ್ಲವೇ ಹೆಚ್ಚಿನ ಬೋನ್ ಇಟ್ಟು ಸೆರೆ ಹಿಡಿಯುತ್ತೀರೊ ಒಟ್ಟಾರೆ ನಿಮ್ಮ ಕೆಲಸದಿಂದ ಭಯಭೀತರಾಗಿರುವ ಟಿ.ನರಸೀಪುರ ತಾಲೂಕಿನಲ್ಲಿ ಸಾರ್ವಜನಿಕರು, ವಿದ್ಯಾರ್ಥಿಗಳು, ಪೋಷಕರಲ್ಲಿ ಧೈರ್ಯ ತುಂಬುವ ಕೆಲಸ ಮಾಡಬೇಕು ಎಂದು ಸೂಚಿಸಿದರು.

ಚಿರತೆ ಸೆರೆಗೆ ಟಾಸ್ಕ್‌ಫೋರ್ಸ್: ಟಿ.ನರಸೀಪುರ ತಾಲೂಕಿನಲ್ಲಿ ಇರುವ ಚಿರತೆ ಹಾವಳಿ ಹತ್ತಿಕ್ಕಲು ಟಾಸ್ಕ್‌ಫೋರ್ಸ್ ತಂಡಗಳ ರಚನೆ ಮಾಡಲಾಗಿದೆ. ಗ್ರಾಮಗಳ ಸುತ್ತ ಬಯಲಲ್ಲಿ ವ್ಯಾಪಕವಾಗಿ ಬೆಳೆದಿರುವ ಗೀಡ–ಗಂಟಿಗಳ ಕಟಾವು ಆಗಬೇಕು. ಬೀದಿದೀಪಗಳು ರಾತ್ರಿ ವೇಳೆ ಕಡ್ಡಾಯವಾಗಿ ಆನ್ ಆಗಿರಬೇಕು. ಸದರಿ ಹಳ್ಳಿಗಳಿಗೆ ಕಡ್ಡಾಯವಾಗಿ ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಹೆಚ್ಚಿನ ಬಸ್ ವ್ಯವಸ್ಥೆಯನ್ನೂ ಮಾಡಬೇಕು ಎಂದರಲ್ಲದೆ ಚಿರತೆ ಸೆರೆಗೆ ಕ್ರಮ ಕೈಗೊಂಡು ಜನರಲ್ಲಿ ಭರವಸೆ ಮೂಡಿಸಬೇಕು. ಸರ್ಕಾರದಿಂದ ಎಲ್ಲಾ ರೀತಿಯ ಅಗತ್ಯ ನೆರವು ನೀಡಲಾಗುವುದು ಎಂದು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ತ್ವರಿತ ಕಾರ್ಯಾಚರಣೆ: ಮೈಸೂರು ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮಹೇಶ್ ಮಾತನಾಡಿ, ಜನವರಿ ತಿಂಗಳಿನಲ್ಲಿ 3 ಚಿರತೆಗಳು ಹಾಗೂ 5 ಚಿರತೆ ಮರಿಗಳನ್ನು ಸೆರೆ ಹಿಡಿಯಲಾಗಿದೆ. ಕಳೆದ ಮೂರು ವರ್ಷಗಳಲ್ಲಿ 63 ಚಿರತೆ ಹಾಗೂ ಇಡೀ ರಾಜ್ಯದಲ್ಲಿ ಕಳೆದ ಮೂರು ವರ್ಷದಲ್ಲಿ 73 ಚಿರತೆಗಳನ್ನು ಸೆರೆ ಹಿಡಿಯಲಾಗಿದೆ. ಟಿ.ನರಸೀಪುರ ತಾಲೂಕಿನಲ್ಲಿ ಚಿರತೆ ಹಾವಳಿಯಿಂದ 2022ರ ಅ.30, ಡಿ.1 ಹಾಗೂ ಜ.21 ಮತ್ತು 22 ರಂದು ಬಾಲಕ ಸೇರಿ ನಾಲ್ಕು ಮಂದಿ ಮೃತಪಟ್ಟಿದ್ದಾರೆ. ತೀವ್ರ ಆತಂಕ ಸೃಷ್ಟಿಸಿರುವ ಚಿರತೆ ಸೆರೆಗೆ ತ್ವರಿತ ಕಾರ್ಯಾಚರಣೆ ನಡೆಸುತ್ತಿದ್ದೇವೆ. 19 ಬೋನ್, 80 ಕ್ಯಾಮರಾ, ಥರ್ಮಲ್ ಡ್ರೋಣ್ ಬಳಕೆ ಮಾಡಿದ್ದೇವೆ. ಕೊಟ್ಟಿಗೆ ರೀತಿ ಕಾಣುವ ಬೋನ್ ಅಳವಡಿಸಲಾಗಿದೆ. 158 ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ವಿವಿಧ ತಂಡಗಳಲ್ಲಿ ನಿಯೋಜಿಸಲಾಗಿದೆ. ರಾತ್ರಿ ವೇಳೆ ತಂಡಗಳು ಗಸ್ತು ತಿರುಗುತ್ತಿದ್ದಾರೆ. ಕೂಂಬಿಂಗ್ ಟೀಂ ಕೆಲಸ ಮಾಡುತ್ತಿದೆ. ರಾಜ್ಯಮಟ್ಟದಲ್ಲಿ ಅರಣ್ಯ ಇಲಾಖೆ ಸಹಾಯವಾಣಿ ಬಳಕೆ ಮಾಡಿಕೊಂಡಿದ್ದು, ತಾಲೂಕಿನ 21 ಗ್ರಾಮಗಳಲ್ಲಿಯೂ ಚಿರತೆ ದಾಳಿ ಕುರಿತು ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ವನ್ಯಜೀವಿ ಸಂಘರ್ಷ ಪ್ರದೇಶ ಹೆಚ್ಚಾಗಿದೆ: ಟಿ.ನರಸೀಪುರ ತಾಲೂಕು ವ್ಯಾಪ್ತಿಯಲ್ಲಿ ಅರಣ್ಯ ಪ್ರದೇಶ ಕಡಿಮೆ. ಸುಮಾರು 58,879 ಹೆಕ್ಟೇರ್ ಪ್ರದೇಶದಲ್ಲಿ ಸುಮಾರು 1000 ಹೆಕ್ಟೇರ್ ಪ್ರದೇಶವಷ್ಟೇ ಕಠಿಣ ಪ್ರದೇಶವಿದೆ. ಮುಖ್ಯವಾಗಿ ತಲಕಾಡಿನಲ್ಲಿ ಹಾಗೂ ಮಲ್ಲಿಕಾರ್ಜುನ ಬೆಟ್ಟದಲ್ಲಿ ಒಂದಷ್ಟು ಅರಣ್ಯ ಪ್ರದೇಶವಿದೆ. ಅಲ್ಲದೆ ಈ ಪ್ರದೇಶದಲ್ಲಿರುವ ಕಾಡಿನೊಳಗೆ ಯಾವುದೇ ತರಹದ ಪ್ರಾಣಿಗಳು ಇರುವುದು ಕಂಡುಬಂದಿಲ್ಲ. ಆದರೆ ವನ್ಯಜೀವಿಗಳೊಂದಿಗಿನ ಸಂಘರ್ಷದ ಪ್ರದೇಶ ಸುಮಾರು 1500 ಹೆಕ್ಟೇರ್‌ನಷ್ಟು ಹೆಚ್ಚಾಗಿದ್ದು, ಸುಮಾರು 21 ಗ್ರಾಮಗಳು ಈ ಪ್ರದೇಶದಲ್ಲಿ ಬರಲಿವೆ ಎಂದು ತಿಳಿಸಿದರಲ್ಲದೆ ಸರ್ಕಾರದ ಸೂಚನೆ ಮೇರೆಗೆ ಹತ್ಯೆಯಾದ ದಿನವೇ 15 ಲಕ್ಷ ರೂ. ಪರಿಹಾರ ನೀಡಲು ಕ್ರಮಕೈಗೊಳ್ಳಲಾಗಿದೆ ಎಂದರು.

ಶಾರ್ಪ್ ಶೂಟರ್‌ಗಳನ್ನು ನೇಮಕ ಮಾಡಿಕೊಳ್ಳಿ: ಟಿ.ನರಸೀಪುರ ವಿಧಾನ ಸಭಾ ಕ್ಷೇತ್ರದ ಶಾಸಕ ಅಶ್ವಿನ್ ಕುಮಾರ್ ಮಾತನಾಡಿ, ಚಿರತೆ ದಾಳಿಯಿಂದ ಜನರು ಭಯಭೀತರಾಗಿದ್ದಾರೆ. ಬೇಗ ಚಿರತೆ ಹಿಡಿಯಲು ಕ್ರಮ ಕೈಗೊಳ್ಳಿ. ತಾಲೂಕಿನಲ್ಲಿ ಹೆಚ್ಚಿನ ಚಿರತೆ ಹಾಗೂ ಮರಿಗಳು ಬೀಡು ಬಿಟ್ಟಿವೆ. ಸ್ಪೆಷಲ್ ಶಾರ್ಪ್ ಶೂಟರ್‌ಗಳನ್ನು ಬಳಸಿಕೊಂಡು ಚಿರತೆ ಹಾವಳಿ ತಪ್ಪಿಸುವಂತೆ ಮನವಿ ಮಾಡಿದರು.

ಕಬ್ಬು ಕಟಾವು ಆಗಬೇಕು: ತಾಲೂಕಿನಲ್ಲಿ ಇನ್ನೂ ಸುಮಾರು 800 ಎಕರೆ ಕಬ್ಬು ಕಟಾವು ಆಗಬೇಕಿದ್ದು, 10 ತಿಂಗಳ ಅವಧಿಯ ಕಬ್ಬನ್ನು ಕಟಾವು ಮಾಡುವಂತೆ ರೈತರಿಗೆ ತಿಳಿಸುವುದಲ್ಲದೆ, ಸಕ್ಕರೆ ಕಾರ್ಖಾನೆಗಳು ಖರೀದಿಸುವಂತೆ ಸೂಚನೆ ನೀಡಿ ಎಂದು ಕೃಷಿ ಇಲಾಖೆ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ತಿಳಿಸಿದರಲ್ಲದೆ ಜಿಲ್ಲೆಯಲ್ಲಿ 4 ಜನರು ಚಿರತೆ ದಾಳಿಗೆ ಬಲಿಯಾಗಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ಚಿರತೆ ಟಾಸ್ಕ್‌ಫೋರ್ಸ್ ರಚನೆ ಮಾಡಲು ಮುಖ್ಯಮಂತ್ರಿಗಳು ಅನುಮತಿ ನೀಡಿದ್ದಾರೆ. ಕೃಷಿ ಉದ್ದೇಶಕ್ಕೆ ಎಂದು ಜಾಗವನ್ನು ಖರೀದಿಸಿ ಬಹಳ ವರ್ಷಗಳಿಂದ ಬೀಳು ಬಿಟ್ಟಿರುವವರಲ್ಲಿ ಮೂರು ವರ್ಷಗಳಿಗಿಂತ ಹೆಚ್ಚು ಬೀಳು ಬಿಟ್ಟಿದ್ದರೆ ಅಂಥವರಿಗೆ ಗಿಡ–ಗಂಟಿಗಳನ್ನು ಸ್ವಚ್ಛಗೊಳಿಸುವಂತೆ ನೋಟೀಸ್ ನೀಡಿ. ಚಿಕನ್–ಮಟನ್ ಸ್ಟಾಲ್‌ಗಳಿಂದ ಬರುವ ವೇಸ್ಟ್ ಅನ್ನು ಹಳ್ಳಿಗಳಲ್ಲಿ ಹಾಕದಂತೆ ನೋಡಿಕೊಳ್ಳಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.


ಎಲಿಫೆಂಟ್ ಟಾಸ್ಕ್‌ಫೋರ್ಸ್‌ಗೆ ಮನವಿ ಸಲ್ಲಿಸಿ: ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ರಾಜ್ಯದಲ್ಲಿ ಕೊಡಗು ಜಿಲ್ಲೆಯಲ್ಲಿ ಎಲಿಫೆಂಟ್ ಟಾಸ್ಕ್‌ಫೋರ್ಸ್ ಇದೆ. ಆದರೆ ವನ್ಯಜೀವಿ ಸಂಘರ್ಷ ಹೆಚ್ಚಾಗಿರುವ ಮೈಸೂರು ಜಿಲ್ಲೆಯಲ್ಲೂ ಎಲಿಫೆಂಟ್ ಟಾಸ್ಕ್‌ಫೋರ್ಸ್ ರಚನೆಗೆ ಸರ್ಕಾರಕ್ಕೆ ಮನವಿ ಸಲ್ಲಿಸಿಲ್ಲವೇಕೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳನ್ನು ಪ್ರಶ್ನಿಸಿ ದರು. ಹುಲಿ–ಚಿರತೆ ಹಾವಳಿ ಹೆಚ್ಚಾಗಿ ರುವ ಪ್ರದೇಶಗಳಲ್ಲಿ ಕೂಂಬಿಂಗ್ ಕಾರ್ಯಾಚರಣೆ ನಡೆಸಲು ಆನೆ ಕಾರ್ಯಪಡೆ ಅತ್ಯಂತ ಅಗತ್ಯವಾಗಿದೆ. ಆದ್ದರಿಂದ ಸರ್ಕಾರಕ್ಕೆ ಮನವಿ ಸಲ್ಲಿಸುವಂತೆ ತಾಕೀತು ಮಾಡಿದರು. ಸಭೆಯಲ್ಲಿ ಜಿಪಂ ಸಿಇಓ ಪೂರ್ಣಿಮಾ, ಎಸ್‌ಪಿ ಸೀಮಾ ಲಾಟ್ಕರ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಬಸ್ ವ್ಯವಸ್ಥೆ ಕಲ್ಪಿಸಲು ಸೂಚನೆ...

ಚಿರತೆ ಹಾವಳಿಯಿಂದಾಗಿ ಶಾಲಾ–ಕಾಲೇಜು ವಿದ್ಯಾರ್ಥಿಗಳು ಭಯಭೀತರಾಗಿ ಮನೆಯಲ್ಲೇ ಉಳಿಯುವಂತಾಗಿದೆ. ಆದ್ದರಿಂದ ಬೆಳಗ್ಗೆ ಮತ್ತು ಸಂಜೆ ತಾಲೂಕಿನಾದ್ಯಂತ ಬಸ್ ಸಂಚಾರ ವ್ಯವಸ್ಥೆ ಮಾಡಬೇಕು. ಇದಕ್ಕೆ ಕೆಎಸ್‌ಆರ್‌ಟಿಸಿ ಮೈಸೂರು, ಮಂಡ್ಯ, ಚಾಮರಾಜನಗರ ವಿಭಾಗದ ನಿಯಂತ್ರಣಾಧಿಕಾರಿಗಳು ಚರ್ಚಿಸಿ ಎಷ್ಟು ಬಸ್‌ಗಳನ್ನು ವ್ಯವಸ್ಥೆ ಮಾಡಬೇಕು ಎಂಬುದನ್ನು ನಿರ್ಧರಿಸಿ. ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿ ಭಯ ಕಡಿಮೆಯಾಗುವವರೆಗೂ ಅಂದರೆ ಸುಮಾರು 3–4 ತಿಂಗಳವರೆಗೂ ಬಸ್ ಸಂಚಾರ ವ್ಯವಸ್ಥೆಯಲ್ಲಿ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಿ ಎಂದು ಸಭೆಯಲ್ಲಿ ಸೂಚಿಸಲಾಯಿತು. ಅಲ್ಲದೆ ಕಾಂಪೌಂಡ್ ಇಲ್ಲದ ಕೂಡ್ಲೂರು ಗ್ರಾಮದ ಸಮಾಜ ಕಲ್ಯಾಣ ಇಲಾಖೆಯ ವಸತಿ ಶಾಲೆ ವಿದ್ಯಾರ್ಥಿಗಳಿಗೆ ಬೇರೆ ಕಡೆ ವ್ಯವಸ್ಥೆ ಮಾಡುವಂತೆ ತಿಳಿಸಲಾಯಿತು.

ಹಾಸನದಲ್ಲಿ ಭವಾನಿ ರೇವಣ್ಣ ಸ್ಪರ್ಧೆಗೆ ಅವಕಾಶ ಇಲ್ಲ

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಸ್ಪಷ್ಟನೆ



ಕುಮಾರಸ್ವಾಮಿ



ಭವಾನಿ ರೇವಣ್ಣ

ಬೆಂಗಳೂರು, ಜ.25(ಕೆಎಂಶಿ)– ಹಾಸನ ವಿಧಾನಸಭಾ ಕ್ಷೇತ್ರದಲ್ಲಿ ಭವಾನಿ ರೇವಣ್ಣ ಅವರ ಸ್ಪರ್ಧೆ ಇಲ್ಲ ಎಂದು ಜೆಡಿಎಸ್‌ನ ಹಿರಿಯ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ.

ಭವಾನಿ ರೇವಣ್ಣ ನಿನ್ನೆಯಷ್ಟೇ ತಾವು ಹಾಸನದಿಂದ ಸ್ಪರ್ಧಿಸುವುದಾಗಿ ಹೇಳಿಕೆ ನೀಡಿದ ಬೆನ್ನಲ್ಲೇ ಕುಮಾರಸ್ವಾಮಿ ಇಂತಹ ಹೇಳಿಕೆ ನೀಡಿರುವುದು ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಪಂಚರತ್ನಯಾತ್ರೆ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತಿಯೊಬ್ಬರಿಗೂ ಚುನಾವಣೆಗೆ ನಿಲ್ಲಬೇಕು ಎನ್ನುವ ಆಕಾಂಕ್ಷೆ ಇರುವುದು ಸಹಜ. ಭವಾನಿ ರೇವಣ್ಣ ಅವರ ಅನಿವಾರ್ಯತೆ ಆ ಕ್ಷೇತ್ರದಲ್ಲಿ ಇದ್ದಿದ್ದರೆ ನಾನೇ ಸ್ಪರ್ಧೆ ಮಾಡುವಂತೆ ಹೇಳುತ್ತಿದ್ದೆ. ಅವರು ಅಭ್ಯರ್ಥಿ ಆಗಬೇಕು ಎನ್ನುವ ಅನಿವಾರ್ಯತೆ ಇದ್ದಿದ್ದರೆ ನಾನೇ ನಿಲ್ಲಿಸುತ್ತಿದ್ದೆ.

ಆದರೆ, ಹಾಸನದಲ್ಲಿ ಇವತ್ತು ಅಂತಹ ಅನಿವಾರ್ಯತೆ ಇಲ್ಲ ಎನ್ನುವುದರ ಮೂಲಕ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಟಿಕೆಟ್ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. 2008ರ ಉಪ ಚುನಾವಣೆಯಲ್ಲಿ ಮಧುಗಿರಿಯಿಂದ ಇಂದಿನ ಶಾಸಕರಾದ ವೀರಭದ್ರಯ್ಯ ಅವರನ್ನು ಕಣಕ್ಕಿಳಿಸಲು ಮಾಜಿ ಪ್ರಧಾನಿ ದೇವೇಗೌಡರು ಅಭ್ಯರ್ಥಿ ಮಾಡಿದ್ದರು. ಆದರೆ, ಆಗ ಸರಕಾರಿ ನೌಕರಿಯಲ್ಲಿ ಇದ್ದ ವೀರಭದ್ರಯ್ಯ ಅವರು ಸ್ವಯಂ ನಿವೃತ್ತಿಗೆ ಅರ್ಜಿ ಸಲ್ಲಿಸಿದ್ದರು. ಅವರ ಅರ್ಜಿಗೆ ಸರಕಾರದ ಮಟ್ಟದಲ್ಲಿ ಒಪ್ಪಿಗೆ ಸಿಕ್ಕಿರಲಿಲ್ಲ. ಆಗ ಮಧುಗಿರಿಯಲ್ಲಿ ಜೆಡಿಎಸ್ ಪಕ್ಷಕ್ಕೆ ಅಭ್ಯರ್ಥಿ ಇರಲಿಲ್ಲ. ಬಿಜೆಪಿ, ಎಂಟು ಕ್ಷೇತ್ರಗಳಲ್ಲಿ ಆಪರೇಶನ್ ಕಮಲ ನಡೆಸಿತ್ತು ಬಿಜೆಪಿ ಕೆಲವು ಕ್ಷೇತ್ರಗಳನ್ನು ಗೆಲ್ಲಬೇಕಾದ ಅನಿವಾರ್ಯತೆ ನಮಗೆ ಇತ್ತು, ಆ ಕಾರಣಕ್ಕೆ ನಾನು ಅನಿತಾ ಕುಮಾರಸ್ವಾಮಿ ಅವರನ್ನು ಚುನಾವಣೆಗೆ ನಿಲ್ಲಿಸಿದ್ದೆ. 2013ರಲ್ಲಿ ಅನಿತಾ ಕುಮಾರಸ್ವಾಮಿ ಅವರು ಮಧುಗಿರಿ ಶಾಸಕರಾಗಿದ್ದರೂ, ಅವರ ಬದಲಾಗಿ ವೀರಭದ್ರಯ್ಯ ಅವರಿಗೆ ಟಿಕೆಟ್ ಕೊಡಲಾಗಿತ್ತು.












ನವ ಭಾರತಕ್ಕಾಗಿ
ನವ ಕರ್ನಾಟಕ

ಸಮಸ್ತ ಜನತೆಗೆ 74ನೇ ಗಣರಾಜ್ಯೋತ್ಸವದ ಶುಭಾಶಯಗಳು



"ಎಲ್ಲಿಯ ತನಕ ನೀವು ಸಾಮಾಜಿಕ ಸ್ವಾತಂತ್ರ್ಯವನ್ನು ಸಾಧಿಸುವುದಿಲ್ಲವೋ, ಅಲ್ಲಿಯ ತನಕ ಕಾನೂನು ಒದಗಿಸುವ ಯಾವುದೇ ಸ್ವಾತಂತ್ರ್ಯವನ್ನು ಪಡೆದರೂ ಅದರ ಪ್ರಯೋಜನ ಬರುವುದಿಲ್ಲ".


- ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು




ಶ್ರೀ ಥಾವರ್ ಚಂದ್ ಗೆಹ್ಲೋಟ್
ಸನ್ಮಾನ್ಯ ರಾಜ್ಯಪಾಲರು




ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಶಕ್ತಿಶಾಲಿ ಭಾರತಕ್ಕಾಗಿ ಸದೃಢ ಕರ್ನಾಟಕ ನಿರ್ಮಿಸಲು ಸಂಕಲ್ಪ







ಅಭಿವೃದ್ಧಿ-ಜನ ಕಲ್ಯಾಣಕ್ಕಾಗಿ ಹಲವಾರು ವಿಶೇಷ ಯೋಜನೆಗಳ ಅನುಷ್ಠಾನ


- **ಮುಖ್ಯಮಂತ್ರಿ ರೈತ ವಿದ್ಯಾನಿಧಿ ಯೋಜನೆ: 10 ಲಕ್ಷಕ್ಕೂ** ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಯೋಜನ. ಈವರೆಗೆ **ರೂ.483.62 ಕೋಟಿ** ಮೊತ್ತದ ವಿದ್ಯಾರ್ಥಿವೇತನ ವಿತರಣೆ
- ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳ **ಪಿಂಚಣಿ ಮೊತ್ತದಲ್ಲಿ ಹೆಚ್ಚಳ. 75 ಲಕ್ಷಕ್ಕೂ ಹೆಚ್ಚಿನ ಜನರಿಗೆ ಪ್ರಯೋಜನ**
- **ವಸತಿ ಯೋಜನೆ:** ಮೂರು ವರ್ಷಗಳಲ್ಲಿ ಸುಮಾರು **5 ಲಕ್ಷ ಮನೆಗಳ** ನಿರ್ಮಾಣ.
- **ಆರೋಗ್ಯ: ರೂ.1,000 ಕೋಟಿ** ವೆಚ್ಚದಲ್ಲಿ **ಸಮುದಾಯ ಆರೋಗ್ಯ ಕೇಂದ್ರಗಳಾಗಿ 100** ಪ್ರಾಥಮಿಕ ಆರೋಗ್ಯ ಕೇಂದ್ರಗಳ ಉನ್ನತೀಕರಣ
- **ರಾಜ್ಯದ ವಿವಿಧೆಡೆ 438 'ನಮ್ಮ ಕ್ಲಿನಿಕ್'ಗಳ ಆರಂಭ**
- **ಯಶಸ್ವಿನಿ ಯೋಜನೆಯ** ಪುನರ್ ಪ್ರಾರಂಭ
- **ಸ್ತ್ರೀ ಸಾಮರ್ಥ್ಯ** ಯೋಜನೆಯಡಿ **33,333 ಮಹಿಳಾ ಸ್ವಸಹಾಯ ಗುಂಪುಗಳಿಗೆ ತಲಾ ರೂ.1.5 ಲಕ್ಷ ಮೂಲಧನ.** ಇದರಿಂದ **3.9 ಲಕ್ಷ ಮಹಿಳೆಯರಿಗೆ** ಸಹಾಯವಾಗಲಿದೆ.
- **ಕೊಳಚೆ ಪ್ರದೇಶಗಳ 3.36 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ** ನೀಡಲು ಐತಿಹಾಸಿಕ ನಿರ್ಧಾರ. **1.14 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ** ನೀಡಲಾಗಿದೆ.
- **ವಿದ್ಯುನ್ಮಾನ ಆಡಳಿತ ಉಪಕ್ರಮಗಳಾದ ಗ್ರಾಮ ಒನ್, ಜನಸೇವಕ್, ಸಾರಿಗೆ ಇಲಾಖೆಯಲ್ಲಿ ಆನ್‌ಲೈನ್ ಸೇವೆ, ಇತ್ಯಾದಿ ಸೇವೆಗಳ ಆರಂಭ.**
- ಇಡೀ ದೇಶದಲ್ಲಿಯೇ **ರಾಷ್ಟ್ರೀಯ ಶಿಕ್ಷಣ ನೀತಿ 2020** ಅನ್ನು ಅನುಷ್ಠಾನ ಮಾಡಿದ ಮೊದಲ ರಾಜ್ಯ ಕರ್ನಾಟಕ.
- **15,000 ಶಾಲಾ ಶಿಕ್ಷಕರ** ನೇಮಕಾತಿ, **8,101 ಶಾಲಾ ಕೊಠಡಿಗಳ** ನಿರ್ಮಾಣ, ಎಲ್ಲಾ ಶಾಲೆಗಳಲ್ಲಿ ಶೌಚಾಲಯಗಳ ನಿರ್ಮಾಣ
- ನಗರ ಹಾಗೂ ಗ್ರಾಮೀಣ ಮಟ್ಟದಲ್ಲಿ ಮೂಲಭೂತ ಸೌಕರ್ಯಗಳನ್ನು ಉತ್ತಮಪಡಿಸುವ ಉದ್ದೇಶದಿಂದ **75ನೇ ಸ್ವಾತಂತ್ರ್ಯ ದಿನಾಚರಣೆಯ ಸ್ಮರಣೆಯಾಗಿ ಅಮೃತ್ ಯೋಜನೆಗಳಿಗೆ ಚಾಲನೆ.**

  ದುರ್ಬಲ ವರ್ಗಗಳ ಜನರನ್ನು ಮೇಲೆತ್ತುವುದು, ಸ್ವಸಹಾಯ ಗುಂಪುಗಳಿಗೆ ಮೂಲಧನ ನೀಡುವುದು, **ಎಸ್.ಸಿ./ಎಸ್.ಟಿ,** ಇತರೆ ಹಿಂದುಳಿದ ಯುವಕರ ಹಾಗೂ **ಮಹಿಳಾ ಉದ್ಯಮಿಗಳ ನವೋದ್ಯಮಗಳಿಗೆ ಪ್ರೋತ್ಸಾಹ** ನೀಡುವುದು ಸಹ ಈ ಯೋಜನೆಗಳ ಉದ್ದೇಶ
- ಹಿಂದುಳಿದ ವರ್ಗಗಳ ಕಲ್ಯಾಣ, ಸಮಾಜ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣಗಳ ಇಲಾಖೆಗಳಡಿ ಬರುವ **19** ವಿವಿಧ **ನಿಗಮಗಳಿಗೆ ರೂ.857.75 ಕೋಟಿ ಹೆಚ್ಚುವರಿ** ಅನುದಾನ.
- ಗ್ರಾಮೀಣ ಪ್ರದೇಶಗಳಲ್ಲಿ ಕಿರು ಉದ್ಯಮಗಳಿಗೆ ಬೆಂಬಲ ನೀಡಲು **ಸ್ವಾಮಿ ವಿವೇಕಾನಂದ ಯುವಶಕ್ತಿ ಸಂಘ** ಯೋಜನೆ. **5 ಲಕ್ಷ** ಯುವಕರಿಗೆ ಪ್ರಯೋಜನದ ನಿರೀಕ್ಷೆ.
- **ಪರಿಶಿಷ್ಟ ಜಾತಿ/ವರ್ಗಗಳಿಗೆ ಮೀಸಲಾತಿಯನ್ನು ಕ್ರಮವಾಗಿ ಶೇ.15 ರಿಂದ ಶೇ.17ರವರೆಗೆ ಹಾಗೂ ಶೇ.3 ರಿಂದ ಶೇ.7ರವರೆಗೆ ಹೆಚ್ಚಿಸಲಾಗಿದೆ.**
- **ದಾಖಲೆ ರಹಿತ 1,475 ಜನವಸತಿಗಳನ್ನು ಕಂದಾಯ ಗ್ರಾಮಗಳಾಗಿ ಘೋಷಣೆ. ದಾಖಲೆಯ 52,000 ಜನರಿಗೆ ಹಕ್ಕುಪತ್ರ ವಿತರಣೆ**

ಕೇಂದ್ರ ಸರ್ಕಾರದ ಯೋಜನೆಗಳ ಯಶಸ್ವಿ ಅನುಷ್ಠಾನ

- **ಪಿಎಂ-ಕಿಸಾನ್ ಯೋಜನೆಯಡಿ** ರಾಜ್ಯದ **53.83 ಲಕ್ಷ ರೈತರಿಗೆ** ಪ್ರಯೋಜನ. ಈವರೆಗೆ ಕೇಂದ್ರದಿಂದ **ರೂ.9,982.15 ಕೋಟಿ** ವಿತರಣೆ.
- ಪ್ರಧಾನಮಂತ್ರಿ ಉಜ್ವಲ ಯೋಜನೆಯಿಂದ **34.66 ಲಕ್ಷ** ಕುಟುಂಬಗಳಿಗೆ ಪ್ರಯೋಜನ.
- ಪಿಎಂ ಸ್ವನಿಧಿ ಯೋಜನೆಯಡಿ **2.39** ಲಕ್ಷ ಬೀದಿ ವ್ಯಾಪಾರಿಗಳಿಗೆ ಸಾಲ ಮಂಜೂರು.
- ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯಡಿ ರಾಜ್ಯದ **4.50 ಲಕ್ಷ ಫಲಾನುಭವಿಗಳಿಗೆ** ಪ್ರಯೋಜನ.
- ಜಲಜೀವನ್ ಮಿಷನ್ ಅಡಿ **6.51 ಲಕ್ಷ** ಗ್ರಾಮೀಣ ಮನೆಗಳಿಗೆ ನಳ ಸಂಪರ್ಕ.
- **ಬೆಟ್ಟಕುರುಬ ಸಮುದಾಯವನ್ನು ಪರಿಶಿಷ್ಟ ವರ್ಗಗಳಡಿ ಭಾರತ ಸರ್ಕಾರ ಸೇರಿಸಿದೆ.**

ದೆಹಲಿಯ ಗಣರಾಜ್ಯೋತ್ಸವ ಪರೇಡ್‌ನಲ್ಲಿ ರಾಜ್ಯದಿಂದ ಪಾಲ್ಗೊಳ್ಳುತ್ತಿರುವ 'ನಾರಿ ಶಕ್ತಿ' ವಿಷಯಾಧಾರಿತ ಸ್ತಬ್ಧ ಚಿತ್ರ.



ಹೂಡಿಕೆಯಲ್ಲಿ ರಾಜ್ಯ ದೇಶದಲ್ಲೇ ಅಗ್ರಸ್ಥಾನದಲ್ಲಿ

- **2022ರಲ್ಲಿ ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆ ಸಭೆಯಲ್ಲಿ ರೂ.52,000 ಕೋಟಿ ಮೊತ್ತದ ಬಂಡವಾಳ ಹೂಡಿಕೆ ಒಪ್ಪಂದಗಳಿಗೆ ಸಹಿ.**
- **2022ರ ನವೆಂಬರ್‌ನಲ್ಲಿ ರಾಜ್ಯದಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ರೂ.9.8 ಲಕ್ಷ ಕೋಟಿ ಮೊತ್ತದ ಹೂಡಿಕೆ ಒಪ್ಪಂದಗಳಿಗೆ ಸಹಿ. ಇದರಿಂದ 6 ಲಕ್ಷ ಉದ್ಯೋಗ ಅವಕಾಶಗಳ ಸೃಷ್ಟಿ. ಈ ಬಂಡವಾಳ ಹೂಡಿಕೆಯ ಶೇ. 90ರಷ್ಟು ಭಾಗ ಬೆಂಗಳೂರಿಂದ ಹೊರಗೆ ರಾಜ್ಯದ ವಿವಿಧೆಡೆಗಳಲ್ಲಿ ಹೂಡಿಕೆಯಾಗುತ್ತದೆ.**
- **ನೀತಿ ಆಯೋಗದ ಇಂಡಿಯಾ ಇನ್ನೋವೇಷನ್ ಇಂಡೆಕ್ಸ್, 2022ರಲ್ಲಿ ಕರ್ನಾಟಕ ಮೊದಲ ಸ್ಥಾನ ಗಳಿಸಿದೆ.**

ಮೂಲಭೂತ ಸೌಕರ್ಯ

- **ಮೈಸೂರು-ಬೆಂಗಳೂರು-ಚೆನ್ನೈಗೆ ತ್ವರಿತ ಸಂಪರ್ಕ ಕಲ್ಪಿಸುವ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಚಾಲನೆ**
- **ಮೈಸೂರು ವಿಮಾನ ನಿಲ್ದಾಣದ ವಿಸ್ತರಣೆ, ಹಾಸನ ವಿಮಾನ ನಿಲ್ದಾಣದ ಕಾಮಗಾರಿಗಳು ಪ್ರಗತಿಯಲ್ಲಿ, ಶಿವಮೊಗ್ಗ ವಿಮಾನ ನಿಲ್ದಾಣ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿ**
- **ಮೈಸೂರಿನ ನಾಗನಹಳ್ಳಿಯಲ್ಲಿ ಹೊಸ ಕೋಚಿಂಗ್ ಕಾಂಪ್ಲೆಕ್ಸ್. ಇದರಿಂದ ಕಡಿಮೆ ದೂರದ ರೈಲುಗಳನ್ನು ಆರಂಭಿಸಲು ಅನುಕೂಲ.**
- **ರೂ.2 ಲಕ್ಷ ಕೋಟಿ ವೆಚ್ಚದಲ್ಲಿ ವಿವಿಧ ರಾಷ್ಟ್ರೀಯ ಹೆದ್ದಾರಿಗಳ ಅಭಿವೃದ್ಧಿ**

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

IMMEDIATE REQUIREMENT
Non Banking Financial Company Role:- Sales Manager and Telecallers, Location:- Mysore, Experience:- Freshers & Experienced Both, Candidates:- Male & Female Both, Education:- PUC, Any Degree. Pls Contact:
7975669266

ಜಮೀನುಗಳು ಮಾರಾಟಕ್ಕಿವೆ
ಮೈಸೂರು ಮತ್ತು ನಂಜನಗೂಡು ತಾಲ್ಲೂಕಿನಲ್ಲಿ ಮುಡಾ ಮತ್ತು ಡಿ.ಸಿ ಕನ್ವೆರ್ಷನ್ ಸೈಟುಗಳು ಮತ್ತು ಉತ್ತಮವಾದ ತೋಟ ಮಾಡಲು ಒಳ್ಳೆಯ ಜಮೀನುಗಳು & ನಿವೇಶನ ಮಾಡಲು ಜಮೀನುಗಳು ಮಾರಾಟಕ್ಕಿವೆ.
9611320189

ತಕ್ಷಣ ಬೇಕಾಗಿದ್ದಾರೆ
ಡ್ರೈವರ್‌ಗಳು, ಅಶೋಕ ಲೈಲ್ಯಾಂಡ್ (D.st) ಉಚಿತ ವಸತಿ ಸೌಲಭ್ಯವಿರುತ್ತದೆ.
8884666543

WANTED
1) Senior Accountant 10 to 15 years Experience.
2) Production Supervisor
8548880010

HOUSE FOR SALE
20x40 North West Corner, 1st Floor, 2BHK, 2nd Floor 3BHK Kaveri Layout, Near Roopanagar.
9886245930
9844167889

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
23/2:– ದೆಹಲಿ, ವೈಷ್ಣೋದೇವಿ, ಅಮೃತಸರ್, ಧರ್ಮಶಾಲಾ, ಶಕ್ತಿಪೀಠ ಇತ್ಯಾದಿ.
8/2:– ಕಾಶಿ, ಗಂಯಾ, ಬುದ್ಧ ಗಂಯಾ, ಪ್ರಯಾಗ್‌ರಾಜ್, ಅಯೋಧ್ಯೆ.
11/2:– ಪುರಿ ಜಗನ್ನಾಥ, ಕೋನಾರ್ಕ್ ಸೂರ್ಯ ದೇವಸ್ಥಾನ, ಭುವನೇಶ್ವರ, ಚಂದ್ರಭಾಗ ಬೀಚ್.
9/3:– ನೇಪಾಳ ಮುಕ್ತಿ ನಾಥ್, ಪಶುಪತಿನಾಥ.
9591017782
9964527782

FIRST TIME IN MYSORE
BRITISH COUNCIL AUDIO LAB FOR COACHING IELTS/OET/CBT EXAMS
Individualized Workstations supported by Study Material with lots of Mock Tests. Faculty with vast experience.
FEW SEATS LEFT
Website: https://transworldbusiness.in
Mob: 7892561264, 9880355619, 0821-4065156

ಶ್ರೀ ನಿಧಿ ಹಾಲಿಡೇಸ್ (Since 2005)
01–04–23 ರಿಂದ 14 ದಿನಗಳ, ವೈಷ್ಣೋದೇವಿ, ಅಮೃತಸರ್, ಹರಿದ್ವಾರ್, ಅಯೋಧ್ಯ, ಕಾಶಿ ಡೆಲ್ಲಿ, ಆಗ್ರಾ, ಮಥುರಾ ಇತ್ಯಾದಿ.
17–04–23 ರಿಂದ 14 ದಿನಗಳ ಕಾಶಿ, ಪ್ರಯಾಗ್‌ರಾಜ್, ಅಯೋಧ್ಯ, ಹರಿದ್ವಾರ್, ಡೆಲ್ಲಿ, ಆಗ್ರಾ, ವೈಷ್ಣೋದೇವಿ, ಅಮೃತಸರ್ ಇತ್ಯಾದಿ.
09–05–23 ರಿಂದ 12 ದಿನಗಳ ಚಾರ್‌ದಾಮ್ ಯಾತ್ರೆ, ಕೇದರ್‌ನಾಥ್, ಭದ್ರಿನಾಥ್, ಯಮುನೋತ್ರಿ ಗಂಗೋತ್ರಿ ಇತ್ಯಾದಿ.
23–5–23 ರಿಂದ 23 ದಿನಗಳ ಉಜ್ಜೈನಿ, ಶಿರಡಿ, ಡೆಲ್ಲಿ, ಹರಿದ್ವಾರ್, ಕಾಶಿ, ಗಯಾ, ಪೂರಿಜಗನಾಥ್, ಭದ್ರಾಚಲಂ, ವಿಜಯವಾಡಿ ಇತ್ಯಾದಿ., ವಿಮಾನ / ರೈಲು/ 2+2+ ಬಸ್ / ಊಟ / ಇಬ್ಬರಿಗೆ ಒಂದು (ರೂಂ) ಸೇರಿದೆ.
9740776666 / 7557553777

WANTED
ACCOUNTANT with Knowledge of Tally must to work at Hinkal & Industrial Suburb, Mysore
9480155900

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು / ಮಹಿಳೆಯರು ಬೇಕಾಗಿದ್ದಾರೆ. ಸಂಬಳ: 8,000 ದಿಂದ 10,000 ವರೆಗೆ (ಅನುಭವದ ಆಧಾರದ ಮೇಲೆ) ಸಮಯ ಬೆಳಿಗ್ಗೆ 09.30 ರಿಂದ 9.00 ರವರೆಗೆ. ಸ್ಥಳ: ಹೆಬ್ಬಾಳ್ ಹಾಗೂ ಅಗ್ರಹಾರ. ಸಂಪರ್ಕಿಸಿ:
9986322444
9986311444

DIRECT EXAM
NTT
SSLC/ PUC pass or Fail / any Degree (Recognized by Govt of Karnataka)
ನೇರ ಪರೀಕ್ಷೆ
8310306882 / 9964790442

ಹೆಸರು ಬದಲಾವಣೆ
ಅನಿತಾ ಆದ ನಾನು ನಂ.49, ಹೊಸ ಆನಂದೂರು ಗ್ರಾಮ, ಬೆಳಗೊಳ ಹೋಬಳಿ & ಪೋಸ್ಟ್, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ ಇಲ್ಲಿ ವಾಸವಿದ್ದು, ನನ್ನ ಹೆಸರನ್ನು ಸರೋಜಮ್ಮ ಎಂದು ನನ್ನ ಸ್ವ ಇಚ್ಛೆಯಿಂದ ನೋಟರಿ ಎಲ್.ಎಸ್.ರಾಜೇಂದ್ರನ್ ಇವರ ಎದುರು ಪ್ರಮಾಣೀಕರಿಸುತ್ತೇನೆ ಮತ್ತು ಇನ್ನು ಮುಂದೆ ಸರೋಜಮ್ಮ ಎಂದು ಎಲ್ಲಾ ದಾಖಲಾತಿಯಲ್ಲಿಯೂ ಹಾಗೂ ವ್ಯವಹಾರವನ್ನು ಮಾಡಲು ಇಚ್ಛಿಸಿರುತ್ತೇನೆ.
ಸಹಿ/– ಸರೋಜಮ್ಮ

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ನಿವೇಶನ ಮಾರಾಟಕ್ಕಿದೆ
ಪೊಲೀಸ್ ಲೇಔಟ್ 3ನೇ ಹಂತ, 49x65 = 3186 Sq.feet ಪೂರ್ವ ದಿಕ್ಕು
9739826533

ಬೇಕಾಗಿದ್ದಾರೆ
ಅನುಭವವಿರುವ / ಇಲ್ಲದಿರುವ ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ನಮ್ಮ ಸಂಸ್ಥೆಯಲ್ಲಿ ಉಳಿದುಕೊಂಡು ಕೆಲಸ ಮಾಡುವವರು ತಕ್ಷಣವೇ ಸಂಪರ್ಕಿಸಿ:
7483960098 / 9035113222

ಬೇಕಾಗಿದ್ದಾರೆ
ಮೈಸೂರು ಕೂರಗಳ್ಳಿ ಕೈಗಾರಿಕಾ ಪ್ರದೇಶ ಇಲ್ಲಿ ಉನ್ನತ ಕಂಪನಿ, ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಪುರುಷರು / ಮಹಿಳೆಯರು (ESI, PF) ಸೌಲಭ್ಯ, SSLC, PUC Any Degree (ITI, Diploma) Mechanical Machine Operator, Helper, Security House Keeping) ಕೆಲಸ ಮಾಡಲು ಬೇಕಾಗಿದ್ದಾರೆ. Networking Field Officer ಫೀಲ್ಡ್ ಆಫೀಸರ್ (ಪುರುಷರು / ಮಹಿಳೆಯರು) ಬೇಕಾಗಿದ್ದಾರೆ. ITI, Fitter, Welder (Exp.). Sal: 20,000 to 30,000.
7892713020 / 7204810152 / 8296280922

Wanted Immediately
Quality Executive (Qualification B.Sc. in Food Science) Male Exp: 0 to 1 year. Stores Executive (Qualification any Degree) Male Exp: Min. 1 to 2 years. Age below 30 years.
Address: THE AKSHAYAPATRA FOUNDATION, MYSORE No. 31, 18th Cross, Jayanagar, Mysore.
Mob: 9964451366

NUETECH SOLAR WATER HEATER

ಬಿಸಿ ನೀರಿನ ಸಮಸ್ಯೆಗೆ ಹಾಗೂ ದೀರ್ಘ ಕಾಲದ ಬಾಳಿಕೆಗಾಗಿ ಹಾಗೂ 10 ವರ್ಷ ವಾರಂಟಿ.
Company Super Stockist USHA KIRAN AGENCY
9844069190

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL @ Srirampura & Gokulam
Call: 7829937469, 9901803394
ONLINE TRAINING AVAILABLE

SITES FOR SALE
just 3km jp nagar ringroad
KESHAVAMURTHY LAYOUT
Mysore Airport Backside, Dadadahalli Main road, Near KSOU ACADEMIC BHAVAN (Covid Center), Mysore.
30x40, 30x50 MUDA APPROVED
Sq.feet 2800/-
SK DEVELOPER & PROPERTIES, Office: JP nagar Ringroad, Mysore.
8453531221

ಬೇಕಾಗಿದ್ದಾರೆ
ಕಂಪ್ಯೂಟರ್ ಟೈಪಿಂಗ್ ಮಾಡಲು ಬರುವಂತಹ ಅಭ್ಯರ್ಥಿಗಳು ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ: 9945911118
ARTHOR SERVICES PVT. LTD
ನಂ. L-89, 2nd Floor, 'M' Block, Opp - Karuna Hospital, Kuvempunagar, Mysore - 570023

ಶಿರಿಡಿ ವಿಮಾನ ಪ್ರವಾಸ
09–02–2023 ಶಿರಿಡಿ ಪ್ರವಾಸ 3 ಜ್ಯೋತಿರ್ಲಿಂಗದೊಂದಿಗೆ, ಶನಿಸಿಂಗನಪೂರ, ಗೃಷ್ಣೇಶ್ವರ, ಜ್ಯೋತಿರ್ಲಿಂಗ, ಎಲ್ಲೋರ, ನಾಸಿಕ್, ತ್ರಯಂಬಕೇಶ್ವರ ಜ್ಯೋತಿರ್ಲಿಂಗ, ಭೀಮಾಶಂಕರ ಜ್ಯೋತಿರ್ಲಿಂಗ, ಬುಕ್ಕಿಂಗ್ ಕೊನೆಯ ದಿನಾಂಕ: 31/01/2023
8660756131
9482421499

ಬೇಕಾಗಿದ್ದಾರೆ
ಶ್ರೀ ಸಂಜೀವಿನಿ ಗೋಲ್ಡ್ ಕಂಪನಿಯಲ್ಲಿ ಕೆಲಸ ಮಾಡಲು ಟೆಲಿಕಾಲರ್ ಹುಡುಗಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ & ಇನ್‌ಸೆಂಟಿವ್ ಕೂಡ ಇರುತ್ತದೆ. ಸಂಪರ್ಕಿಸಿ:
9148436811
6362895985

ಸಂಪು
ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
Mob: 9108566022

WANTED
30 Lakhs Loan at 1.5% Rate of Interest per month against Registered Mortgage of MUDA Site worth more than 90 Lakhs
6360231221

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

LOANS
ಮನೆ ಸಾಲ – ನಿವೇಶನ ಸಾಲ
11ಎ ಮತ್ತು 11ಬಿ, ಮನೆ ಸಾಲ ಹಾಗೂ ಪ್ರಾಪರ್ಟಿ ಸಾಲ, ವ್ಯಾಪಾರ ಸಾಲ ಮಾಡಿಕೊಡಿಸಲಾಗುವುದು. ಬ್ಯಾಂಕ್‌ನಿಂದ ಮತ್ತೊಂದು ಬ್ಯಾಂಕಿಗೆ ವರ್ಗಾವಣೆ ಮಾಡಿಸಲಾಗುವುದು.
7975453083 / 7259784408

ಬೇಕಾಗಿದ್ದಾರೆ
ಶ್ರೀ ವಿದ್ಯಾ ಸೆಕ್ಯೂರಿಟಿ ಏಜೆನ್ಸಿ ಮತ್ತು ಲೇಬರ್ ಕಂಟ್ರಾಕ್ಟರ್
ಹೋಮ್ ನರ್ಸ್ ಸಿಬ್ಬಂದಿಗಳು ಬೇಕಾಗಿದ್ದಾರೆ. 24/7 hours ವಯಸ್ಸು ಆದವರನ್ನು ನೋಡಿಕೊಳ್ಳಲು ಬೇಕಾಗಿದ್ದಾರೆ. ಸೆಕ್ಯೂರಿಟಿಗಳು ಬೇಕಾಗಿದ್ದಾರೆ. ಫ್ಯಾಕ್ಟರಿಗಳಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಪಾಪು ನೋಡಿಕೊಳ್ಳಲು ಬೇಕಾಗಿದ್ದಾರೆ. Ravikumar
9110455297

IMMEDIATE REQUIREMENTS
We electrical india Pvt. Ltd. SSLC Pass, PUC Pass, ITI Pass or fail person and any Diploma pass or fail
7676928664
7795790081

ಮನೆ ಬಾಡಿಗೆಗೆ ಇದೆ
2BHK House, Ground Floor 30x40 ರ MUDA MIG ಮನೆ Jyothi School Road, 2nd Stage, Kuvempunagara. Contact:
9886022794

Document Lost
I, Sagaya Mary. A, No. 634, 1st Stage, Rajivnagar, Mysuru City-570019, have lost my allotment letter of EWS 3357, N.R. Mohalla, Devanur Badavane, Mysore City, while house shifting.
Finders please contact:
Mob: 9900349438

ಕಳೆದಿದೆ
ರುಮಾನ ತಬುಸ್ಸುಂ, ನಂ. 332, ಬನ್ನಿಮಂಟಪ ಲೇಔಟ್, ಮೈಸೂರು, ನನಗೆ ಸೇರಿದ ಕಲ್ಯಾಣಗಿರಿ ನಗರ ಮನೆ ನಂ. 809, ಎಂಐಜಿ 1ಎ ರ ಮನೆಯ ಮೂಲ ಸ್ವಾಧೀನ ಪತ್ರ ಹಾಗೂ ಮಂಜೂರಾತಿ ಪತ್ರ ಮತ್ತು ಖಾತ ದಾಖಲಾತಿಗಳು ದಿನಾಂಕ 13–1–2023 ರಂದು ಬನ್ನಿಮಂಟಪ ಹುಡ್ಕೋ ಮುಖ್ಯ ರಸ್ತೆಯಲ್ಲಿ ಜೆರಾಕ್ಸ್ ಮಾಡಿಸುವಾಗ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9972723236

ಶಿರಡಿ ಯಾತ್ರೆ
ಟ್ರೈನಿನಲ್ಲಿ (ಎಸಿ & ನಾನ್ ಎಸಿ) ಶಿರಡಿ ಯಾತ್ರೆ, ನಿಮಗೆ ಹೊಂದಿಕೆಯಾಗುವ ದಿನದಲ್ಲಿ. ಶನಿ ಸಿಂಗನಾಪುರ, ಊಟ, ವಿಐಪಿ ದರ್ಶನ ಸೇರಿರುತ್ತದೆ.
*ಷರತ್ತುಗಳು ಅನ್ವಯಿಸುತ್ತದೆ.
Call: 9448410393

JOB VACANCY
1) Counselor: Graduate, Communication skills, Digital Marketing.
2) Faculty / Teaching: BE Civil / Arch, knowledge of Design Software must.
Location: CADDCENTRE V.V. Mohalla, Gokulam Road, Mysore-570 002
0821-4006323 / 9880908444

AVAILABLE FOR RENT
Corner commercial complex, ground, 1st, 2nd, 3rd Floor, Irwin Road, K.T. Street, Mysuru. Contact:
9845273767, 9731990488

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನಲ್ಲಿರುವ ಅಡಕನಹಳ್ಳಿ ಮತ್ತು ಕಡಕೊಳ ಇಂಡಸ್ಟ್ರಿಗಳಿಗೆ ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
9740324112 / 9035269781
0821-4852002 / 2303459

CERAMIC FIELD
ಮಾರ್ಕೆಟಿಂಗ್ ಕೆಲಸಕ್ಕೆ ಹುಡುಗರು ತಕ್ಷಣ ಬೇಕಾಗಿದ್ದಾರೆ. ಸ್ಥಳ: ಬನ್ನಿಮಂಟಪ.
7795662367
0821-2598024

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160

Used Laptops
available (With warranty)
74835 93989
(saraswathipuram)

ಶ್ರೀ ರಾಘವೇಂದ್ರ ಕೊಳ್ಳೇಗಾಲ ಜ್ಯೋತಿಷ್ಯರು
ಜ್ಯೋತಿಷ್ಯ ರತ್ನ ಮೋಡಿ ಮಾಂತ್ರಿಕ ಪಂ॥ ಎಸ್.ಕೆ. ಪ್ರಶಾಂತ್ ಆಚಾರ್ಯ
ಮೊ: 9740947045
ಸ್ತ್ರೀ ಪುರುಷ ಪ್ರೇಮ, ಸಂತಾನ, ವಿವಾಹ, ದಾಂಪತ್ಯ ಸಮಸ್ಯೆ, ನಾಗದೋಷ, ಕುಜದೋಷ, ದುಷ್ಟಶಕ್ತಿ, ಪ್ರೇತಭಾಧೆ, ಸಾಲ ಬಾಧೆ, ವ್ಯಾಪಾರದಲ್ಲಿ ತೊಂದರೆ ತನ್ನವರೆ ತನಗೆ ಶತ್ರು ನಿಮ್ಮ ಯಾವುದೇ ಗುಪ್ತ ಹಾಗೂ ಕಠಿಣವಾದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಮಾಡುತ್ತಾರೆ. ಸ್ಥಳ: ಹೋಟೆಲ್ ಗೋವರ್ಧನ, ಡಾ॥ ರಾಜ್‌ಕುಮಾರ್ ಪಾರ್ಕ್ ಹತ್ತಿರ, ಶ್ರೀ ಹರ್ಷ ರಸ್ತೆ (ಹೋಟೆಲ್ ಪಾರ್ಕ್‌ಲೇನ್ ರಸ್ತೆ), ಮೈಸೂರು.

ಸಂಪು
ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
9845799677

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾದೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಸಿದ್ಧ. ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ನಿವೇಶನ ಮಾರಾಟಕ್ಕಿದೆ
W/F 2444/- Sq.ft. (40x60+)
ನಿವೇಶನವು ಬ್ಯಾಂಕ್ & ಪಬ್ಲಿಕ್ ಸೆಕ್ಟರ್ ಎಂಪ್ಲಾಯೀಸ್ ವೆಲ್ ಫೇರ್ ಅಸೋಸಿಯೇಷನ್, ಹಳೇ ಆರ್.ಟಿ.ನಗರ, ದಟ್ಟಗಳ್ಳಿ ರಿಂಗ್ ರೋಡ್ ಸಮೀಪ ಇದೆ. ದಾಖಲೆಗಳು ಸರಿಯಾಗಿದೆ ತಕ್ಷಣ ನೋಂದಣಿ ಮಾಡಿಕೊಳ್ಳುವವರು ಸಂಪರ್ಕಿಸಿ. ಮಧ್ಯವರ್ತಿಗಳು ಕ್ಷಮಿಸಿ
9343289398

ಬೇಕಾಗಿದ್ದಾರೆ
ಕೆಲಸಕ್ಕೆ ಹುಡುಗ ಮತ್ತು ಹುಡುಗಿಯರು ಬೇಕಾಗಿದ್ದಾರೆ. SSLC / PUC / Degree Pass / Fail.
ಸಂಪರ್ಕಿಸಿ: S.G.Agencies, CH-15, 1st Floor, Kunchitigara Street above Sukrutham Dental Clinic, Chamaraja Double Road, Mysore
9342256526

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾದೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾದೇ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ದಾರ್ಥನಗರ, ಮೈಸೂರು.

ಬೇಕಾಗಿದ್ದಾರೆ
ಗ್ರಾಫಿಕ್ ಡಿಸೈನರ್
Corel Draw & Photoshop ಕಲಿತಿರಬೇಕು
ಅನುಭವ ಇರುವವರಿಗೆ ಆದ್ಯತೆ
ಆಕರ್ಷಕ ಸಂಬಳ
ಅಶೋಕ ರೋಡ್, ಮೈಸೂರು
Call: 0821-4267800

ಸಂಪು
ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು ವರರು ವಿಧುರರು, ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ. ನಿಮ್ಮ ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ.
ಡಾ.ಗುರೂಜಿ
9448229184
7899625268

ಬೇಕಾಗಿದ್ದಾರೆ
ದೇವಿಶ್ರೀ ಹೋಟೆಲ್
ಕೆ.ಟಿ.ಸ್ಟ್ರೀಟ್, ಮಹಾವೀರ್ ಶೋರೂಂ ಹಿಂಭಾಗ, ಮೈಸೂರು.
ಹೋಟೆಲ್ ಕೆಲಸಕ್ಕೆ ಸಪ್ಲೈಯರ್, ಮಾಂಸಾಹಾರಿ ಅಡುಗೆ ಭಟ್ಟರು ಹಾಗೂ ಕಿಚನ್ ಅಸಿಸ್ಟೆಂಟ್ ಬೇಕಾಗಿದ್ದಾರೆ. ಫುಲ್‌ಟೈಮ್ ಕೆಲಸಗಾರರು ಬೇಕಾಗಿದ್ದಾರೆ.
8970856325 / 7892176372

GODOWN FOR RENT
Site No - 13, APMC Office Main Road, B-Block, Bandipalya, Mysore
9480169436
9448720969

ವಾಟರ್ ಪ್ರೂಫ್, ಮನೆ ರಿಪೇರಿ, 2D, 3D, Plan ಮತ್ತು ಸೆಂಟ್ರಿಂಗ್ ಮಾಡಿಕೊಡಲಾಗುತ್ತದೆ.
ಸಂಪರ್ಕಿಸಿ: ಶಿವು
8660845597

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಬೇಕಾಗಿದ್ದಾರೆ
ಡಿ.ಜಿ.ಎಫ್ ಗೋಲ್ಡ್ ಮತ್ತು ಡೈಮಂಡ್ ಜ್ಯುಯಲ್ಲರಿಗೆ, ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
10,000/- Basic Salary + 10,000/- Incentive
8884171888

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

WANTED SITES
@ Bramin's Layout, Bogadi Vijayanagar, Yelwala & Mysore Surroundings. Quick Regn.
9342125252

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.
9740733021 / 9535028750

LAND FOR SALE
Adjecent to Ring Road, Opp. to University Layout, Alienated 11,000 Sq.ft. Owner:
9880209039

ವಧು ಬೇಕಾಗಿದೆ
47, ವರ್ಷದ ವರನಿಗೆ ಮದುವೆಯಾಗಲು ಹುಡುಗಿ ಅಥವಾ ವಿಧವೆಯಾದರೂ ಪರವಾಗಿಲ್ಲ ವಧು ಬೇಕಾಗಿದೆ.
9740635082

ಬೇಕಾಗಿದ್ದಾರೆ
ವಯಸ್ಸಾದ ವೃದ್ಧರು ಮತ್ತು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲಿ ಉಳಿದುಕೊಳ್ಳುವಂತಹ ಸೇವಾ ಮನೋಭಾವವುಳ್ಳ ಯುವಕ / ಯುವತಿಯರು, ವಿಧವೆ / ವಿಚ್ಛೇದಿತರು ಹೋಂ ಕೇರ್ ಕೆಲಸಕ್ಕೆ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. ಉಚಿತ ಊಟ, ವಸತಿಯೊಂದಿಗೆ, ಸಂಬಳ: 10,000 ರಿಂದ 15,000. ಕೂಡಲೇ ಸಂಪರ್ಕಿಸಿ.
9035324777 / 7259306665

SITE FOR SALE
20x30 @ University Layout, Mysore. Brokers Excuse
9964179057
8762789136

ಮನೆ ಬಾಡಿಗೆಗೆ
N/F, 20x37, G/F, 1 Room, Varanda, Navilu Road, 9th Cross, No.98, Kuvempunagar, Mysore.
7829226226

ಸ್ವರ ಭವಿಷ್ಯ ಶ್ರೀ ಸಿಗಂದೂರು ಚೌಡೇಶ್ವರಿ ಜ್ಯೋತಿಷ್ಯಾಲಯ
ದಾಂಪತ್ಯ ಸಮಸ್ಯೆ ಸಾಲದ ಭಾದೆ, ಮನೆಯಲ್ಲಿ ನೆಮ್ಮದಿ ಇಲ್ಲವೇ ಓಟು ಕೇಸ್ ಬಗ್ಗೆ ಆರೋಗ್ಯ ಸಮಸ್ಯೆ ಪ್ರೀತಿಯಲ್ಲಿ ನಂಬಿಕೆ ಯಾವುದೇ ಸಮಸ್ಯೆಗಳಿಗೆ ದೈವ ಪೂಜೆಗಳಿಂದ ಪರಿಹಾರ ಮಾಡುತ್ತಾರೆ. ಕೊಳ್ಳೇಗಾಲದಿಂದ ಸಿಗಂದೂರು ಚೌಡೇಶ್ವರಿ ಆರಾಧಕರು ಪಂಡಿತ್ ವಿಷ್ಣುಕಾಂತ್ ಜೋಷಿ
8549998630
ಫೋನಿನ ಮೂಲಕ ಪರಿಹಾರ

MYSORE SUNDAY BAZZAR
OIX SECONDS ITEM OIX
ವಸ್ತು ಪ್ರದರ್ಶನ ಮತ್ತು ಮಾರಾಟ, ನಿಮ್ಮ ಮನೆಯ ಹಳೆಯ ವಸ್ತುಗಳನ್ನು ಮಾರಾಟ ಮಾಡಿ ಲಾಭಗೊಳಿಸಿ ಒಳ್ಳೆಯ ಅವಕಾಶವನ್ನು ಕೊಡಲಾಗುವುದು. ಫರ್ನಿಚರ್ಸ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ ಆಟೋಮೊಬೈಲ್ಸ್, Booking Open
9844446469
9880099929

AFFIDAVIT
I, Sujatha W/o B.S.Arunkumar residing at #2906/1, Apt. No.A2, Potomac Hill, Gokulam Main Road, Vani Vilas Mohalla, Mysuru - 570002 have changed my name from Sujatha to Sujatha Arun Bellur vide affidavit sworn before Notary Usha.D, Mysuru Date: 20-01-2023.
Sd/- Sujatha Arun Bellur

SITE FOR SALE
40x60 West facing Site for Sale at Kalyaninagar Layout, Mysore (Next to M S Ramaiah Layout). Pl Contact:
9886015687

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಆಯುರ್ವೇದಿಕ ಕಂಪನಿಯಲ್ಲಿ ಆಫೀಸ್ ಅಸಿಸ್ಟೆಂಟ್‌ಆಗಿ ಕೆಲಸ ಮಾಡಲು ಹುಡುಗ/ಹುಡುಗಿಯರು ಇಂಗ್ಲೀಷ್, ಹಿಂದಿ ಹಾಗೂ ತೆಲಗು ಮಾತನಾಡುವವರು
ತಕ್ಷಣ ಬೇಕಾಗಿದ್ದಾರೆ
9448415584
0821-3502246

ಮನೆ ಭೋಗ್ಯಕ್ಕೆ
ವಿಶಾಲವಾದ ಹಾಲ್, ಒಂದು ರೂಂ, ಡೈನಿಂಗ್ ಹಾಲ್, ಕಿಚನ್ ನಿಂದ ಕೂಡಿದ ಎಲ್ಲಾ ಸೌಲಭ್ಯಗಳೊಂದಿಗೆ ಒಂದನೇ ಮಹಡಿ (1st Floor) ಯ ಮನೆ 10ನೇ ಕ್ರಾಸ್, ಬಸವೇಶ್ವರ ರಸ್ತೆಯಲ್ಲಿ ಇದೆ. ಸಸ್ಯಹಾರಿಗಳಿಗೆ ಮಾತ್ರ, ಸಂಪರ್ಕಿಸಿ.:
8762962358

ಸೆಕ್ಯೂರಿಟಿ ಬೇಕಾಗಿದ್ದಾರೆ
ಮೈಸೂರುನಗರದ ಹೆಸರಾಂತ ಕಂಪನಿ, ಹೋಟೆಲ್‌ಗಳಲ್ಲಿ ಹೆಬ್ಬಾಳ್ ದೇವೇಗೌಡ ಸರ್ಕಲ್, ಬಲ್ಲಾಳ್ ಸರ್ಕಲ್, ಕೂರ್ಗಳ್ಳಿ ಇಂಡಸ್ಟ್ರೀಯಲ್, ಶ್ರೀರಂಗಪಟ್ಟಣ, ಏರಿಯಾಗಳಲ್ಲಿ ಕೆಲಸ ಮಾಡಲು ಅನುಭವವಿದ್ದು, SSLC ಪಾಸಾಗಿರುವ ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ಸಂಬಳ & ESI, PF ಇರುತ್ತದೆ. ಸಂಪರ್ಕಿಸಿ:
9035050656
9035050653

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. (ಕನ್ನಡ, ತೆಲುಗು, ಹಿಂದಿ) ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ. ಸಂಬಳ: 8,000/–
8150005111

ತಕ್ಷಣ ಬೇಕಾಗಿದ್ದಾರೆ
(AAL) ಹೂಟಗಳ್ಳಿ ಇಂಡಸ್ಟ್ರೀಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC and ITI (Any Trade) ಸೌಲಭ್ಯತೆ:– ತಿಂಡಿ, ಊಟ ಮತ್ತು ವಸತಿ ವ್ಯವಸ್ಥೆ.
7090309148
6362491336

JOB VACCANCY FOR GENTS / BOYS ONLY
At Reputed Hotel in Mysore
* Cashier
* Asst. Cook
* Waiter / Steward
* House Keeping
* Cleaner. Contact:
8217737552

40X60 SITE FOR SALE
in Vijayanagar 4th Stage, Near Ring Road.
7899214181

WANTED
Office boy with Two Wheeler & Basic Computer Knowledge to work for a company in Vijayanagar 1st Stage, Mysore. Contact:
9964661119

A1 Cabs Mysore
Mysore to Bangalore Airport Drop OR Pickup

Vehicle Type	BLR Airport / Pickup	BLR City Drop / Pickup
Etios / Dzire	2600/-	2300/-
Innova	4000/-	3800/-
Innova Crysta	4500/-	4300/-

Contact : 8951464518
Website : www.A1cabs.in

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ಮಾಜಿ ಶಾಸಕ ವಾಸು ಅವರ ಪುತ್ರರಾದ ಕವೀಶ್‌ಗೌಡ, ಹವೀಶ್‌ಗೌಡ ಬಿಜೆಪಿ ಸೇರ್ಪಡೆ



ಮೈಸೂರು, ಜ.25–ಕಳೆದ ನಾಲ್ಕೂವರೆ ದಶಕದಿಂದ ಕಾಂಗ್ರೆಸ್ ಪಕ್ಷದಲ್ಲಿರುವ ನಿಷ್ಠಾವಂತ ಕಾಂಗ್ರೆಸ್ ಮುಖಂಡ, ಮಾಜಿ ಶಾಸಕ ವಾಸು ಅವರ ಇಬ್ಬರು ಪುತ್ರರನ್ನು ಸೆಳೆಯುವಲ್ಲಿ ರಾಜ್ಯ ಬಿಜೆಪಿ ಯಶಸ್ವಿಯಾಗಿದೆ.

ವಾಸು ಅವರ ಪುತ್ರರಾದ ಕವೀಶ್‌ಗೌಡ ಮತ್ತು ಹವೀಶ್‌ಗೌಡ, ಬುಧವಾರ ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷರೂ ಆದ ಮೈಸೂರು ಜಿಲ್ಲಾ ಉಸ್ತುವಾರಿ ನಿರ್ಮಲ್‌ಕುಮಾರ್ ಸುರಾನ ಸಮ್ಮುಖದಲ್ಲಿ ಪಕ್ಷ ಸೇರ್ಪಡೆಯಾದರು.

ಹಳೇ ಮೈಸೂರು ಭಾಗದಲ್ಲಿ ಪಕ್ಷವನ್ನು ಬಲಪಡಿಸಲು ರಾಜ್ಯದ ಆಡಳಿತದ ಚುಕ್ಕಾಣಿ ಹಿಡಿಯುವ ನಿಟ್ಟಿನಲ್ಲಿ ಯುವಕರನ್ನು ಸೆಳೆಯಲು ವ್ಯೂಹ ರಚಿಸಿರುವ ಬಿಜೆಪಿ ನಾಯಕರು, ಒಕ್ಕಲಿಗ ಸಮುದಾಯದ ಪ್ರಭಾವಿ ನಾಯಕರೂ ಆಗಿರುವ ವಾಸು ಅವರ ಪುತ್ರರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಮೂಲಕ ಈ ಭಾಗದಲ್ಲಿ ಸಂಘಟನೆ ಚುರುಕುಗೊಳಿಸುವ ನಿಟ್ಟಿನಲ್ಲಿ ಹೆಜ್ಜೆ ಹಾಕಿದ್ದಾರೆ.

ಕವೀಶ್‌ಗೌಡ ಮತ್ತು ಹವೀಶ್‌ಗೌಡ ಅವರೊಂದಿಗೆ ಬಿಜೆಪಿ ನಾಯಕರು ಕೆಲವಾರು ತಿಂಗಳುಗಳಿಂದಲೇ ಸತತ ಸಂಪರ್ಕದಲ್ಲಿದ್ದರು. ಕವೀಶ್‌ಗೌಡ ಅವರು ಆರ್‌ಎಸ್‌ಎಸ್ ಕಾರ್ಯಕ್ರಮಗಳಲ್ಲಿ ಯುವ ಸಮೂಹವನ್ನು ಕೇಂದ್ರೀಕರಿಸುವ ವಿಷಯದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಇತ್ತೀಚೆಗೆ ನಡೆದ ಕೆಂಪೇಗೌಡ ಜಯಂತಿ, ಹನುಮ ಜಯಂತಿ ಕಾರ್ಯಕ್ರಮಗಳಲ್ಲೂ ಸಚಿವರಾದ ಡಾ.ಸಿ.ಕೆ.ಅಶ್ವತ್ಥನಾರಾಯಣ, ಕೆ.ಸಿ.ನಾರಾಯಣಗೌಡ, ಎಸ್.ಟಿ.ಸೋಮಶೇಖರ್ ಅವರೊಂದಿಗೆ ಕಾಣಿಸಿಕೊಂಡಿದ್ದರು. ಬಿಜೆಪಿ ಮುಖಂಡರು ಅವರೊಂದಿಗೆ 2 ಬಾರಿ ಮಾತುಕತೆ ನಡೆಸಿ, ಪಕ್ಷಕ್ಕೆ ಆಹ್ವಾನಿಸಿದ್ದರು. ಜೊತೆಗೆ ಆರ್‌ಎಸ್‌ಎಸ್ ಪ್ರಮುಖರೂ ಕೂಡ ಅವರನ್ನು ಬಿಜೆಪಿ ಸೇರುವಂತೆ ಸಲಹೆ ನೀಡಿದ್ದರು. ತಂದೆ ವಾಸು ನಿಷ್ಠಾವಂತ ಕಾಂಗ್ರೆಸ್ಸಿಗರಾಗಿದ್ದು, ಯಾವುದೇ ಕಾರಣಕ್ಕೂ ಪಕ್ಷ ಬಿಡುವುದಿಲ್ಲ ಎಂಬ ಕಠಿಣ ನಿಲುವು ಹೊಂದಿದ್ದರಿಂದ ಕವೀಶ್‌ಗೌಡ ಮತ್ತು ಹವೀಶ್‌ಗೌಡ ಬಿಜೆಪಿ ಸೇರ್ಪಡೆಯನ್ನು ಸ್ವಲ್ಪ ದಿನ ತಳ್ಳಿ ಹಾಕಿದ್ದರು ಎಂದು ಹೇಳಲಾಗಿದ್ದು, ಚುನಾವಣೆ ಹೊಸ್ತಿಲಲ್ಲಿ ಬಿಜೆಪಿ ಸೇರಿದ್ದಾರೆ. ಪುತ್ರರಿಬ್ಬರೂ ಬಿಜೆಪಿ ಸೇರುವುದರ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಂಡ ನಂತರವೇ ಈ ವಿಚಾರವನ್ನು ತಂದೆಗೆ ತಿಳಿಸಿದ್ದರು ಎಂದು ಹೇಳಲಾಗಿದೆ.

“ಬಿಜೆಪಿಯ ತತ್ವ ಸಿದ್ಧಾಂತಗಳನ್ನು ಒಪ್ಪಿ ನಾನು ಹಾಗೂ ಸಹೋದರ ಪಕ್ಷಕ್ಕೆ ಸೇರಿದ್ದೇವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅಭಿವೃದ್ಧಿ ಪರ ಯೋಜನೆಗಳನ್ನು ರೂಪಿಸಿಕೊಂಡು ಕೆಲಸ ಮಾಡುತ್ತಿವೆ ಎಂಬುದನ್ನು ಗಮನಿಸಿದ್ದೇವೆ. ಯುವಕರಾಗಿರುವ ನಾವು ದೇಶದ ಅಭಿವೃದ್ಧಿ ಬಗ್ಗೆ ಚಿಂತನೆ ನಡೆಸಬೇಕಾಗುತ್ತದೆ. ಮುಂದಿನ 25 ವರ್ಷಗಳಲ್ಲಿ ದೇಶದ ಅಭಿವೃದ್ಧಿ ಹೇಗಿರಬೇಕು ಎಂಬ ದೂರದೃಷ್ಟಿಯನ್ನಿಟ್ಟುಕೊಂಡು ತೀರ್ಮಾನಗಳನ್ನು ಕೈಗೊಳ್ಳಬೇಕಾಗುತ್ತದೆ. ಅದರಂತೆ ನಮ್ಮ ದೃಷ್ಟಿಯಲ್ಲಿ ಬಿಜೆಪಿ ಸೂಕ್ತ ಎಂದು ಈ ಪಕ್ಷಕ್ಕೆ ಸೇರಿದ್ದೇವೆ. ಸಾಮಾನ್ಯ ಕಾರ್ಯಕರ್ತನಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳುತ್ತೇನೆ. ಯಾವುದೇ ರೀತಿಯ ಷರತ್ತು ಅಥವಾ ಬೇಡಿಕೆ ಮುಂದಿಟ್ಟು ಪಕ್ಷಕ್ಕೆ ಸೇರಿಲ್ಲ. ಈಗ ಸಂಘಟನೆ ವಿಚಾರದಲ್ಲಿ ಮಾತ್ರ ಚರ್ಚೆ ನಡೆದಿದೆ. ಪಕ್ಷ ಬಲಹೀನವಾಗಿರುವ ಕ್ಷೇತ್ರಗಳಲ್ಲಿ ಸಂಘಟನೆ ಮಾಡುವಂತೆ ಪಕ್ಷದ ಮುಖಂಡರು ತಿಳಿಸಿದ್ದಾರೆ. ಅದರಂತೆ ಮಾಡುತ್ತೇವೆ. ಪಕ್ಷ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಿದರೆ ಖಂಡಿತವಾಗಿಯೂ ಸ್ಪರ್ಧಿಸುತ್ತೇನೆ. ತಂದೆ ವಾಸು ಅವರು ನಿಷ್ಠಾವಂತ ಕಾಂಗ್ರೆಸ್ಸಿಗರು. ಅವರು ಆ ಪಕ್ಷವನ್ನು ಬಿಡುವುದಿಲ್ಲ ಎಂಬುದೂ ಕೂಡ ನಮಗೆ ಗೊತ್ತಿದೆ.

–ಕವೀಶ್‌ಗೌಡ, ಮಾಜಿ ಶಾಸಕ ವಾಸು ಪುತ್ರ

“ನಾನು ನಿಷ್ಠಾವಂತ ಕಾಂಗ್ರೆಸ್ಸಿಗ. ಕಳೆದ 44 ವರ್ಷಗಳಿಂದ ಪಕ್ಷದಲ್ಲೇ ಇದ್ದೇನೆ. ಬೇರೆ ಪಕ್ಷಗಳು ಗೌರವಯುತವಾಗಿ ಆಹ್ವಾನಿಸಿದಾಗಲೂ ಕೂಡ ನಾನು ಕಾಂಗ್ರೆಸ್ ತೊರೆದಿಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಈ ಹಿಂದೆ ಕೆಲವೊಮ್ಮೆ ಹೊಸದಾಗಿ ಪಕ್ಷಕ್ಕೆ ಸೇರಿದವರಿಗೆ ಟಿಕೆಟ್ ಕೊಟ್ಟು ನನಗೆ ನಿರಾಕರಿಸಿದಾಗಲೂ ಕೂಡ ಬೇಸರಗೊಳ್ಳದೇ ಪಕ್ಷದಲ್ಲಿ ಮುಂದುವರೆದಿದ್ದೇನೆ. ಅಧಿಕಾರಕ್ಕಾಗಿ ನಾನು ರಾಜಕಾರಣ ಮಾಡುತ್ತಿಲ್ಲ. ಜನಸೇವೆಗಾಗಿ ಮಾಡುತ್ತಿದ್ದೇನೆ. ಹೀಗಾಗಿ ನಾನು ಕಾಂಗ್ರೆಸ್ ತೊರೆಯುವ ಪ್ರಶ್ನೆಯೇ ಇಲ್ಲ. ನನ್ನ ಮಕ್ಕಳು ಬಿಜೆಪಿಗೆ ಸೇರುವ ಬಗ್ಗೆ ಸ್ವತಂತ್ರವಾಗಿ ನಿರ್ಧಾರ ಕೈಗೊಂಡಿದ್ದಾರೆ. ಅವರ ನಿರ್ಧಾರ ಅಚಲವಾದ ನಂತರ ನನಗೆ ಮಾಹಿತಿ ನೀಡಿದ್ದಾರಷ್ಟೇ. ಅವರ ರಾಜಕೀಯ ನಿರ್ಧಾರದಲ್ಲಿ ನಾನು ಹಸ್ತಕ್ಷೇಪ ಮಾಡುವುದಿಲ್ಲ. ಅವರಿಗೆ ಒಳ್ಳೆಯದಾಗಲಿ ಎಂದು ಬಯಸುತ್ತೇನೆ.

–ವಾಸು, ಮಾಜಿ ಶಾಸಕ

ಒಂದನೇ ಪುಟದಿಂದ

ಎಸ್.ಎಂ.ಕೃಷ್ಣ 'ಪದ್ಮ ವಿಭೂಷಣ'

ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಈ ಸಾಲಿನಲ್ಲಿ ಕರ್ನಾಟಕಕ್ಕೆ ಒಟ್ಟು 8 ಪದ್ಮ ಪ್ರಶಸ್ತಿಗಳು ಲಭಿಸಿವೆ. 2023ನೇ ಸಾಲಿನಲ್ಲಿ ಆರು ಗಣ್ಯರಿಗೆ ಪದ್ಮವಿಭೂಷಣ, 9 ಗಣ್ಯರಿಗೆ ಪದ್ಮಭೂಷಣ ಮತ್ತು 91 ಗಣ್ಯರಿಗೆ ಪದ್ಮಶ್ರೀ ಪ್ರಶಸ್ತಿಗಳನ್ನು ಘೋಷಿಸಲಾಗಿದ್ದು, ಇದರಲ್ಲಿ ಕರ್ನಾಟಕಕ್ಕೆ 1 ಪದ್ಮವಿಭೂಷಣ, 2 ಪದ್ಮಭೂಷಣ ಮತ್ತು 5 ಪದ್ಮಶ್ರೀ ಪ್ರಶಸ್ತಿಗಳು ದಕ್ಕಿವೆ. 7 ಮಂದಿಗೆ ಮರಣೋತ್ತರವಾಗಿ ಪದ್ಮ ಪ್ರಶಸ್ತಿ ಘೋಷಿಸಲಾಗಿದ್ದು, 3 ಜಂಟಿ ಪ್ರಶಸ್ತಿಗಳು ನೀಡಲಾಗುತ್ತಿದೆ. ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ರಾಷ್ಟ್ರಪತಿಗಳು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಪ್ರಶಸ್ತಿ ಪುರಸ್ಕೃತರ ವಿವರ

ಪದ್ಮ ವಿಭೂಷಣ: ಎಸ್.ಎಂ.ಕೃಷ್ಣ-ಕರ್ನಾಟಕ, ಬಾಲಕೃಷ್ಣ ದ್ವೋಷಿ(ಮರಣೋತ್ತರ)-ಗುಜರಾತ್, ಜಾಕೀರ್ ಹುಸೇನ್-ಮಹಾರಾಷ್ಟ್ರ, ದಿಲೀಪ್ ಮಹಾಲನಾಬಿಸ್ (ಮರಣೋತ್ತರ)-ಪಶ್ಚಿಮ ಬಂಗಾಳ, ಶ್ರೀನಿವಾಸವರದನ್-ಯುಎಸ್‌ಎ, ಮುಲಾಯಂ ಸಿಂಗ್ ಯಾದವ್ (ಮರಣೋತ್ತರ)-ಉತ್ತರಪ್ರದೇಶ.

ಪದ್ಮಭೂಷಣ: ಖ್ಯಾತ ಕಾದಂಬರಿಕಾರ ಎಸ್.ಎಲ್.ಭೈರಪ್ಪ-ಕರ್ನಾಟಕ, ಇನ್‌ಫೋಸಿಸ್ ಸುಧಾಮೂರ್ತಿ-ಕರ್ನಾಟಕ, ಕುಮಾರ್ ಮಂಗಲಂ ಬಿರ್ಲಾ-ಮಹಾರಾಷ್ಟ್ರ, ದೀಪಕ್‌ಧಾರ್-ಮಹಾರಾಷ್ಟ್ರ, ಖ್ಯಾತ ಹಿನ್ನೆಲೆ ಗಾಯಕಿ ವಾಣಿಜಯರಾಂ-ತಮಿಳುನಾಡು, ಸ್ವಾಮಿ ಚಿನ್ನ ಜೀಯರ್-ತೆಲಂಗಾಣ, ಸುಮನ್ ಕಲ್ಯಾಣಪುರ್-ಮಹಾರಾಷ್ಟ್ರ, ಕಪಿಲ್ ಕಪೂರ್-ದೆಹಲಿ, ಕಮಲೇಶ್ ಡಿ.ಪಟೇಲ್-ತೆಲಂಗಾಣ.

ಪದ್ಮಶ್ರೀ: ಡಾ. ಸುಖಂ ಆಚಾರ್ಯ-ಹರ್ಯಾಣ, ಶ್ರೀಮತಿ ಜೋಧ್ಯಾಬಾಯ್ ಬೈಗಾ-ಮಧ್ಯಪ್ರದೇಶ್, ಪ್ರೇಮ್‌ಜಿತ್ ಬಿರ್ಲಾ-ದಾದರ್, ಶ್ರೀಮತಿ ಉಷಾ ಬಾರ್ಲೆ-ಛತ್ತೀಸ್‌ಗಢ, ಮುನೀಶ್ವರ್ ಚಾಂದರ್‌ಧಾರ್-ಮಧ್ಯಪ್ರದೇಶ್, ಹೇಮಂತ್ ಚೌಹಾಣ್-ಗುಜರಾತ್, ಬಾನೋಬಾಯ್ ಚಿತ್ರಾ-ಗುಜರಾತ್, ಶ್ರೀಮತಿ ಹೇಮೋಪ್ರೋವಾ ಚೌಟಿಯಾ-ಅಸ್ಸಾಂ, ನರೇಂದ್ರ ಚಂದ್ರ ದೆಬ್ಬಾರ್ಮಾ (ಮರಣೋತ್ತರ)-ತ್ರಿಪುರ, ಶ್ರೀಮತಿ ಸುಭದ್ರಾ ದೇವಿ-ಬಿಹಾರ್, ಖಾದರ್ ವಲ್ಲಿ ದುಡೆಕುಲಾ-ಕರ್ನಾಟಕ, ಹೇಮ್‌ಚಂದ್ರ ಗೋಸ್ವಾಮಿ-ಅಸ್ಸಾಂ, ಶ್ರೀಮತಿ ಪ್ರೀತಿಕನ್ನ ಗೋಸ್ವಾಮಿ-ಪಶ್ಚಿಮ ಬಂಗಾಳ, ರಾಧ ಚರಣ್ ಗುಪ್ತ-ಉತ್ತರ ಪ್ರದೇಶ್, ಮೊದ್ದುಗು ವಿಜಯಗುಪ್ತ-ತೆಲಂಗಾಣ, ಅಹಮದ್ ಹುಸೇನ್ ಮತ್ತು ಮಹಮದ್ ಹುಸೇನ್-ರಾಜಾಸ್ತಾನ್, ದಿಲ್‌ಷಾದ್ ಹುಸೇನ್-ಉತ್ತರ ಪ್ರದೇಶ್, ಭೈಕು ರಾಮ್‌ಜಿ ಐಡೇಟ್-ಸಿ.ಐ.ಐಸಕ್-ಕೇರಳ, ರತನ್ ಸಿಂಗ್ ಜಗ್ಗಿ-ಪಂಜಾಬ್, ಬಿಕ್ರಂ ಬಹದ್ದೂರ್ ಜಮತ್ಯಾ-ತ್ರಿಪುರ, ರಾಕೇಶ್ ರಾಧೇ ಶ್ಯಾಂ ಜುಂಜುವಾಲಾ (ಮರಣೋತ್ತರ)-ಮಹಾರಾಷ್ಟ್ರ, ರತನ್ ಚಂದ್ರಕಾಂತ್-ಅಂಡಮಾನ್ ನಿಕೋಬಾರ್, ಮಹಿಪತ್ ಕವಿ-ಗುಜರಾತ್, ಶ್ರೀಮತಿ ಎಂ.ಎಂ.ಕೀರವಾಣಿ-ಆಂಧ್ರಪ್ರದೇಶ್, ಆರೀಜ್ ಖಾಮ್‌ಭಟ್ಟ (ಮರಣೋತ್ತರ)-ಗುಜರಾತ್, ರಾಮಕುವೆಂಗೆ ಜಾನೆ-ಅಸ್ಸಾಂ, ಪರಶುರಾಂ ಕೋಮಾಜಿ ಖುನೆ-ಮಹಾರಾಷ್ಟ್ರ, ಗಣೇಶ್ ನಾಗಪ್ಪ ಕೃಷ್ಣರಾಜನಗರ-ಆಂಧ್ರಪ್ರದೇಶ್, ಮಗುನಿ ಚರಣ್ ಕುಮಾರ್-ಒಡಿಸ್ಸಾ, ಆನಂದ್ ಕುಮಾರ್-ಬಿಹಾರ್, ಅರವಿಂದ ಕುಮಾರ್-ಉತ್ತರಪ್ರದೇಶ್, ದೋಮರ್ ಸಿಂಗ್ ಕುನ್ವರ್-ಛತ್ತೀಸ್‌ಗಢ, ರಿಸಿಂಗ್‌ಬೋರ್ ಕುರ್ಕಲಂಗ್-ಮೇಘಾಲಯ, ಶ್ರೀಮತಿ ಹೀರಾಬಾಯ್ ಲೋಬಿ-ಗುಜರಾತ್, ಮೂಲ್‌ಚಂದ್ ಲೋಧಾ-ರಾಜಾಸ್ತಾನ್, ಶ್ರೀಮತಿ ರಾಣಿ ಮಾಚಯ್ಯ-ಕರ್ನಾಟಕ, ಅಜಯ್ ಕುಮಾರ್ ಮಾಂಡವಿ-ಛತ್ತೀಸ್‌ಗಢ, ಪ್ರಭಾಕರ್ ಬಿಹುಂದಾಸ್ ಮಂಡೆ-ಮಹಾರಾಷ್ಟ್ರ, ಗಜಾನನ್ ಜಗನ್ನಾಥ್ ಮಾನೆ-ಮಹಾರಾಷ್ಟ್ರ ಅಂತರ್ಯಾಮಿ ಮಿಶ್ರಾ-ಒಡಿಸ್ಸಾ, ನಾಡೋಜ ಪಿಂಡಿಪಾಪನ್ನ ಮುನಿ ವೆಂಕಪ್ಪ-ಕರ್ನಾಟಕ, ಪ್ರೊ.ಮಹೇಂದ್ರಪಾಲ್-ಗುಜರಾತ್, ಉಮಾಶಂಕರ್ ಪಾಂಡೆ-ಉತ್ತರಪ್ರದೇಶ್, ರಮೇಶ್ ಪರ್‌ಮಾರ್ ಮತ್ತು ಶ್ರೀಮತಿ ಶಾಂತಿ ಪರ್‌ಮಾರ್-ಮಧ್ಯಪ್ರದೇಶ್, ಶ್ರೀಮತಿ ನಳಿನಿ ಪಾರ್ಥಸಾರಥಿ-ಪಾಂಡಿಚೇರಿ, ಹನುಮಂತರಾವ್ ಪಸುಪುಲೇಟಿ-ತೆಲಂಗಾಣ, ರಮೇಶ್ ಪತಂಗೆ-ಮಹಾರಾಷ್ಟ್ರ, ಶ್ರೀಮತಿ ಕೃಷ್ಣ ಪಟೇಲ್-ಒಡಿಸ್ಸಾ, ಕೆ.ಕಲ್ಯಾಣಸುಂದರಂ ಪಿಳ್ಳೈ-ತಮಿಳುನಾಡು, ವಿ.ಪಿ.ಅಪ್ಪುಕುಟ್ಟನ್ ಪೊದುವಲ್-ಕೇರಳ, ಕಪಿಲ್ ದೇವ್ ಪ್ರಸಾದ್-ಬಿಹಾರ್, ಎಸ್.ಆರ್.ಡಿ.ಪ್ರಸಾದ್-ಕೇರಳ, ಶಾ ರಶೀದ್ ಅಹಮದ್ ಖಾದ್ರಿ-ಕರ್ನಾಟಕ, ಸಿ.ವಿ.ರಾಜು-ಆಂಧ್ರಪ್ರದೇಶ್, ಬಕ್ಷಿರಾಂ-ಹರಿಯಾಣ, ಚೆರುವಯಲ್ ಕೆ.ರಾಮನ್-ಕೇರಳ, ಶ್ರೀಮತಿ ಸುಜಾತಾ ರಾಮ್‌ದೊರೈ-ಕೆನಡಾ, ಅಬ್ಬರೆಡ್ಡಿ ನಾಗೇಶ್ವರ ರಾವ್-ಆಂಧ್ರಪ್ರದೇಶ್, ಪರೇಶ್ ಬಾಯ್ ರಥ್ವಾ-ಗುಜರಾತ್, ಬಿ.ರಾಮಕೃಷ್ಣರೆಡ್ಡಿ-ತೆಲಂಗಾಣ, ಮಂಗಳಕಾಂತ ರೈ-ಪಶ್ಚಿಮ ಬಂಗಾಳ, ಶ್ರೀಮತಿ ಕೆ.ಸಿ.ರನ್‌ರೇಮ್‌ಸಂಗಿ-ಮಿಜೋರಾಂ, ವಡಿವೇಲ್ ಗೋಪಾಲ್ ಮತ್ತು ಮಾಸಿ ಸದೈನ್-ತಮಿಳುನಾಡು, ಮನೋರಂಜನ್ ಸಾಹು-ಉತ್ತರಪ್ರದೇಶ್, ಪತಾಯತ್ ಸಾಹು-ಒಡಿಸ್ಸಾ, ಋತ್ವಿಕ್ ಸನ್ಯಾಲ್-ಉತ್ತರಪ್ರದೇಶ್, ಕೋಟಾ ಸಚ್ಚಿದಾನಂದ ಶಾಸ್ತ್ರಿ-ಆಂಧ್ರಪ್ರದೇಶ್, ಸಂಕುರಾತ್ರಿ ಚಂದ್ರಶೇಖರ್-ಆಂಧ್ರಪ್ರದೇಶ್, ಕೆ.ಶಾನತೋಬಿಯಾ ಶರ್ಮಾ-ಮಣಿಪುರ್, ನೆಕ್ರಾಂ ಶರ್ಮಾ-ಹಿಮಾಚಲಪ್ರದೇಶ್, ಗುರುಚರಣ್ ಸಿಂಗ್-ದೆಹಲಿ, ಲಕ್ಷ್ಮಣ್ ಸಿಂಗ್-ರಾಜಾಸ್ತಾನ್, ಮೋಹನ್ ಸಿಂಗ್-ಜಮ್ಮು-ಕಾಶ್ಮೀರ, ತೊಯುಂಜಾಮ್ ಛೋಬಾ ಸಿಂಗ್-ಮಣಿಪುರ್, ಪ್ರಕಾಶ್ ಚಂದ್ರಸೂದ್-ಆಂಧ್ರಪ್ರದೇಶ್, ಶ್ರೀಮತಿ ನೈಹುನೋ ಸೂರಿ-ನಾಗಾಲ್ಯಾಂಡ್, ಡಾ.ಜನುಮ್ ಸಿಂಗ್ ಸಾಯ್-ಜಾರ್ಖಂಡ್, ಕುಶ್ ಥಿಕ್ಸೆ ನವಾಂಗ್ ಚಂಬಾ ಸ್ಟಾಂಜಿನ್-ಲಡಾಕ್, ಎಸ್.ಸುಬ್ಬರಾಮನ್-ಕರ್ನಾಟಕ, ಮೊಯಾ ಸುಬಾಂಗ್-ನಾಗಾಲ್ಯಾಂಡ್, ಪಾಲಂ ಕಲ್ಯಾಣ ಸುಂದರಂ-ತಮಿಳುನಾಡು, ಶ್ರೀಮತಿ ರವೀನಾ ರವಿ ತಂಡನ್-ಮಹಾರಾಷ್ಟ್ರ, ವಿಶ್ವನಾಥ್ ಪ್ರಸಾದ್ ತಿವಾರಿ-ಉತ್ತರಪ್ರದೇಶ್, ದಾನಿರಾಮ್ ಟೋಟೋ-ಪಶ್ಚಿಮ ಬಂಗಾಳ, ತುಲಾರಾಂ ಉಪ್ರೇತಿ-ಸಿಕ್ಕಿಂ, ಡಾ. ಗೋಪಾಲಸ್ವಾಮಿ ವೇಲುಚಾಮಿ-ತಮಿಳುನಾಡು, ಡಾ. ಈಶ್ವರ್ ಚಂದರ್ ವರ್ಮಾ-ಡೆಲ್ಲಿ, ಡಾ. ಚೋಮಿ ನಾರಿಮನ್ ವಾಡಿಯಾ-ಮಹಾರಾಷ್ಟ್ರ, ವರಮ್ ವಂಗ್ಚು (ಮರಣೋತ್ತರ)-ಅರುಣಾಚಲ ಪ್ರದೇಶ್, ಗುಲಾಂ ಮುಹಮದ್ ಜಾಜ್-ಜಮ್ಮು-ಕಾಶ್ಮೀರ್ ಅವರು ಪದ್ಮ ಪ್ರಶಸ್ತಿಗೆ ಭಾಜನರಾಗಿದ್ದಾರೆ.



ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಬಿಹಾರದ ಮಾಜಿ ಮುಖ್ಯಮಂತ್ರಿ, ಹಿಂದುಳಿದ ವರ್ಗಗಳ ನೇತಾರ ಕರ್ಪೂರಿ ಠಾಕೂರ್ ಅವರ 99ನೇ ಜನ್ಮ ದಿನಾಚರಣೆಯನ್ನು ಮೈಸೂರು ಜಲದರ್ಶಿನಿ ಅತಿಥಿಗೃಹದಲ್ಲಿ ಆಚರಿಸಲಾಯಿತು. ಈ ವೇಳೆ ಸವಿತಾ ಸಮಾಜದ ಜಿಲ್ಲಾಧ್ಯಕ್ಷ ಎನ್.ಆರ್.ನಾಗೇಶ್, ಹರೀಶ್ ರೆಡ್ಡಿ, ನಗರಪಾಲಿಕೆ ಸದಸ್ಯ ಎಂ.ಚಿಕ್ಕವೆಂಕಟು, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಲೋಕೇಶ್ ನಾಗಪ್ಪ, ಮಡಿವಾಳ ಸಮಾಜದ ರವಿನಂದನ್, ಬನ್ನೂರು ಪುರಸಭೆ ಸದಸ್ಯರಾದ ಸೌಮ್ಯರಾಣಿ, ಮುರಳಿ, ಪುಟ್ಟರಾಜು, ಯೋಗೇಶ್ ಇತರರು ಉಪಸ್ಥಿತರಿದ್ದರು.

ಇಂದು ಮೈಸೂರಿನಲ್ಲಿ ಪ್ರಜಾಧ್ವನಿ ಸಮಾವೇಶ

ರಾರಾಜಿಸುತ್ತಿವೆ ಕಾಂಗ್ರೆಸ್ ಪಕ್ಷದ ನಾಯಕರ ಪ್ಲೆಕ್ಸ್, ಕಟೌಟ್, ಬಂಟಿಂಗ್ಸ್



ಜೆ.ಕೆ.ಮೈದಾನದಲ್ಲಿ ನಡೆಯುವ ಕಾಂಗ್ರೆಸ್ 'ಪ್ರಜಾಧ್ವನಿ' ಯಾತ್ರೆಯ ಬೃಹತ್ ಸಮಾವೇಶ ಸಿದ್ಧತೆಯನ್ನು ರಾಜ್ಯಸಭಾ ಸದಸ್ಯ ಹಾಗೂ ಪ್ರಜಾಧ್ವನಿ ಮೈಸೂರು ವಿಭಾಗದ ಉಸ್ತುವಾರಿ ಜಿ.ಸಿ.ಚಂದ್ರಶೇಖರ್ ಬುಧವಾರ ಸಂಜೆ ಪರಿಶೀಲಿಸಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಬಿ.ಜೆ.ವಿಜಯ್‌ಕುಮಾರ್ ಮತ್ತಿತರರಿದ್ದರು.

ಮೈಸೂರು, ಜ.25(ಎಂಕೆ)– ಮೈಸೂರಿನ ಜೆ.ಕೆ.ಮೈದಾನದಲ್ಲಿ ನಾಳೆ(ಜ.26) ಸಂಜೆ 4 ಗಂಟೆಗೆ ಕಾಂಗ್ರೆಸ್ 'ಪ್ರಜಾಧ್ವನಿ' ಯಾತ್ರೆಯ ಬೃಹತ್ ಸಮಾವೇಶ ನಡೆಯಲಿದೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಸುರ್ಜೆವಾಲಾ, ಕೆಪಿಸಿಸಿ ಅಧ್ಯಕ್ಷ ಡಿ ಕೆ ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಸೇರಿದಂತೆ ಮೈಸೂರು, ಚಾ.ನಗರ, ಮಂಡ್ಯ ಜಿಲ್ಲೆಯ ಕಾಂಗ್ರೆಸ್‌ನ ಹಾಲಿ ಶಾಸಕರು, ಮಾಜಿ ಶಾಸಕರು, ವಿಧಾನಪರಿಷತ್ ಸದಸ್ಯರು, ಮುಖಂಡರು, ಮೈಸೂರು ನಗರಪಾಲಿಕೆ ಹಾಲಿ ಹಾಗೂ ಮಾಜಿ ಸದಸ್ಯರು, ಎಲ್ಲಾ ಮುಂಚೂಣಿ ಘಟಕದ ಅಧ್ಯಕ್ಷರು ಉಪಸ್ಥಿತರಿರಲಿದ್ದಾರೆ.

ಜ.28ರವರೆಗೆ ನಡೆಯುವ ಪ್ರಜಾಧ್ವನಿ ಯಾತ್ರೆಯ ಸಮಾವೇಶ ನಾಳೆ(ಜ.26) ಬೆಳಗ್ಗೆ ಚಾಮರಾಜನಗರದಲ್ಲಿ ನಡೆಯಲಿದ್ದು, ಸಂಜೆ 4 ಗಂಟೆಗೆ ಮೈಸೂರಿನಲ್ಲಿ ಜರುಗಲಿದೆ. ಬೃಹತ್ ಸಮಾವೇಶಕ್ಕೆ ಸುಮಾರು 30 ಸಾವಿರಕ್ಕೂ ಹೆಚ್ಚು ಮಂದಿ ಸೇರುವ ನಿರೀಕ್ಷೆಯಿದ್ದು, ಅಗತ್ಯ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ.

ಪ್ರಜಾಧ್ವನಿ ಸಮಾವೇಶ ಹಿನ್ನೆಲೆಯಲ್ಲಿ ಮೈಸೂರು ನಗರದ ಪ್ರಮುಖ ರಸ್ತೆಗಳು ಹಾಗೂ ವೃತ್ತಗಳಲ್ಲಿ ಅದರಲ್ಲೂ ಜೆ.ಕೆ. ಮೈದಾನ, ಜೆಎಲ್‌ಬಿ ರಸ್ತೆಯಲ್ಲಿ ಕಾಂಗ್ರೆಸ್ ನಾಯಕರ ಪ್ಲೆಕ್ಸ್‌ಗಳು ರಾರಾಜಿಸುತ್ತಿವೆ.

ಜೆ.ಕೆ. ಮೈದಾನದಲ್ಲಿ ಕಾರ್ಯಕ್ರಮಕ್ಕಾಗಿ ಬೃಹತ್ ವೇದಿಕೆ ನಿರ್ಮಾಣಗೊಂಡಿದ್ದು, ಮೈದಾನದ ಉದ್ದಗಲಕ್ಕೂ ಆಸನಗಳ ವ್ಯವಸ್ಥೆಗಳನ್ನು ಮಾಡಲಾಗಿದೆ.

ಹಣ ಕಟ್ಟಿಸಿಕೊಂಡು ನಿವೇಶನ ನೀಡದೇ ವಂಚನೆ ಆರೋಪ: ಪೊಲೀಸ್ ಆಯುಕ್ತರಿಗೆ ದೂರು

ಮೈಸೂರು, ಜ.25–ಮೈಸೂರಿನ ಕೆಸರೆಯಲ್ಲಿ ಕಡಿಮೆ ವೆಚ್ಚದಲ್ಲಿ ನಿವೇಶನ ನೀಡುವುದಾಗಿ ಹಣ ಪಡೆದು ಶ್ರೀ ಜಯಕೃಷ್ಣ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ವಂಚಿಸಿದ್ದಾರೆ ಎಂದು ಆರೋಪಿಸಿ ನಿವೃತ್ತ ಸೈನಿಕ ಮೈಸೂರು ನಗರ ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಸಿದ್ದಾರೆ.

ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀ ಜಯಕೃಷ್ಣ ಬಿಲ್ಡರ್ಸ್ ಅಂಡ್ ಡೆವಲಪರ್ಸ್‌ನ ವ್ಯವಸ್ಥಾಪಕ ಪಾಲುದಾರರಾದ ಎಂ.ಎನ್.ದೊರೆಸ್ವಾಮಿ ಅವರು ಕೆಸರೆ, ಕಸಬಾ ಹೋಬಳಿ, ಮೈಸೂರು, ಕೆ.ಆರ್. ಮಿಲ್ ಹಿಂಭಾಗದಲ್ಲಿ ಬಡಾವಣೆ ಅಭಿವೃದ್ಧಿಪಡಿಸಿ ನಿವೇಶನ ನೀಡುವುದಾಗಿ 600ಕ್ಕೂ ಹೆಚ್ಚು ಮಂದಿಗೆ ವಂಚಿಸಿದ್ದಾರೆ ಎಂದು ಆರೋಪಿಸಿ ನಿವೃತ್ತ ಸೈನಿಕ ಪಿ.ಶೇಖರ್ ಅವರೊಡನೆ ಕೆಲವರು ದೂರು ನೀಡಿದ್ದು, ದೂರು ಸ್ವೀಕರಿಸಿದ ಆಯುಕ್ತರು ಸರಸ್ವತಿಪುರಂ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್‌ಗೆ ಕಾನೂನು ಬದ್ಧವಾಗಿ ದೂರು ದಾಖಲಿಸಿ, ತನಿಖೆ ಮಾಡುವಂತೆ ಸೂಚಿಸಿದ್ದಾರೆ.

ಪಿಎಚ್.ಡಿ ಪದವಿ



ಎನ್.ಸುರೇಶ್‌ಕುಮಾರ್

ಮೈಸೂರು,ಜ.25–ಡಾ.ಜಿ.ವೆಂಕಟೇಶ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಎನ್.ಸುರೇಶ್ ಕುಮಾರ್ ಅವರು ಮನೋವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ರವಿಶಂಕರ್ ಗುರೂಜಿ ಹೆಲಿಕಾಪ್ಟರ್ ತ.ನಾಡಿನಲ್ಲಿ ತುರ್ತು ಭೂಸ್ಪರ್ಶ

ಚೆನ್ನೈ, ಜ.25– ಆರ್ಟ್ ಆಫ್ ಲಿವಿಂಗ್ ಫೌಂಡೇಶನ್ ಸಂಸ್ಥಾಪಕ ಶ್ರೀ ರವಿ ಶಂಕರ್ ಗುರೂಜಿ ಇದ್ದ ಹೆಲಿಕಾಪ್ಟರ್ ಬುಧವಾರ ತಮಿಳುನಾಡಿನ ಈರೋಡ್'ನಲ್ಲಿ ತುರ್ತು ಭೂಸ್ಪರ್ಶ ಮಾಡಿದೆ.



ರವಿಶಂಕರ ಗುರೂಜಿ ಹಾಗೂ ಇತರ ಮೂವರಿದ್ದ ಹೆಲಿಕಾಪ್ಟರ್ ಈರೋಡ್ ಜಿಲ್ಲೆಯ ಸತ್ಯಮಂಗಲಂ ಹುಲಿ ಸಂರಕ್ಷಿತ ಪ್ರದೇಶದ ಬುಡಕಟ್ಟು ಕುಗ್ರಾಮ ಉಕಿನಿಯಂನಲ್ಲಿ ಬುಧವಾರ ತುರ್ತು ಭೂಸ್ಪರ್ಶ ಮಾಡಿದೆ. ಹವಾಮಾನ ವೈಪರಿತ್ಯದಿಂದಾಗಿ ಹೆಲಿಕಾಪ್ಟರ್ ಅನ್ನು ಪೈಲಟ್ ಸೇಫ್ ಆಗಿ ಲ್ಯಾಂಡ್ ಮಾಡಿದ್ದಾರೆಂದು ವರದಿಗಳು ತಿಳಿಸಿವೆ. ಹೆಲಿಕಾಪ್ಟರ್‌ನಲ್ಲಿ ಗುರೂಜಿ ಜೊತೆ ಇಬ್ಬರು ಆಪ್ತ ಸಹಾಯಕರು ಮತ್ತು ಒಬ್ಬ ಪೈಲಟ್ ಪ್ರಯಾಣಿಸುತ್ತಿದ್ದರು. ತಿರು ಪೂರ್‌ನಿಂದ ಗುರೂಜಿ ಬೆಂಗಳೂರಿಗೆ ಖಾಸಗಿ ಹೆಲಿಕಾಪ್ಟರ್‌ನಲ್ಲಿ 10.30ರ ಸುಮಾರಿಗೆ ಹಾರಾಟ ಆರಂಭಿಸಿದ್ದರು. ಹವಾಮಾನ ವೈಪರೀತ್ಯದಿಂದ ಪೈಲಟ್ ಹೆಲಿಕಾಪ್ಟರ್‌ನ್ನು ಉಕಿನಿಯಂನಲ್ಲಿ ತುರ್ತು ಭೂಸ್ಪರ್ಶ ಮಾಡಿದ್ದಾರೆ ಎಂದು ಕಡಂಬೂರು ಪೊಲೀಸ್ ಇನ್ಸ್‌ಪೆಕ್ಟರ್ ಸಿ.ವಡಿವೇಲ್ ಕುಮಾರ್ ಮಾಹಿತಿ ನೀಡಿದ್ದಾರೆ. ರವಿಶಂಕರ ಗುರೂಜಿಗಳು ಇಂದು 1000 ವರ್ಷಗಳಷ್ಟು ಹಳೆಯದಾದ ಪ್ರಹಲ್‌ನಾಯಕಿ ಅಂಬಿಗ ಸಮೇದ, ಕಬೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಬೇಕಿತ್ತು.

ರಾಜ್ಯದ 19 ಮಂದಿ ಪೊಲೀಸ್ ಅಧಿಕಾರಿಗಳಿಗೆ ರಾಷ್ಟ್ರಪತಿ ಪದಕ

ಬೆಂಗಳೂರು, ಜ. 25– ದೇಶದ 74ನೇ ಗಣ ರಾಜ್ಯೋತ್ಸವದ ಅಂಗವಾಗಿ ಗಣನೀಯ ಸೇವೆ ಸಲ್ಲಿಸಿದ 901 ಪೊಲೀಸರನ್ನು ರಾಷ್ಟ್ರಪತಿ ಪದಕಕ್ಕೆ ಆಯ್ಕೆ ಮಾಡಲಾಗಿದ್ದು, ಈ ಪೈಕಿ ಕರ್ನಾಟಕದ ಈ ಕೆಳಕಂಡ 19 ಪೊಲೀಸರು ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಎಡಿಜಿಪಿ ಶರತ್‌ಚಂದ್ರ ಅವರಿಗೆ ಗಣನೀಯ ಸೇವೆಗಾಗಿ ರಾಷ್ಟ್ರಪತಿ ಪದಕ ಘೋಷಿಸಲಾಗಿದೆ. ಹುಬ್ಬಳ್ಳಿ–ಧಾರವಾಡ ಪೊಲೀಸ್ ಕಮೀಷನರ್ ಲಂಬೂರಾಮ್, ಬೆಂಗಳೂರಿನ ಡಿವೈಎಸ್ಪಿಗಳಾದ ಎಸ್.ನಾಗರಾಜು, ಪದ್ಮರಾಜಯ್ಯ ವೀರೇಂದ್ರಕುಮಾರ್, ಬಿ.ಪ್ರಮೋದ್ ಕುಮಾರ್, ಸಿದ್ದಲಿಂಗಪ್ಪ ಬಿ.ಪಾಟೀಲ್, ವಿ.ಸಿ. ದೀಪಕ್, ಹೆಚ್.ವಿಜಯಾ, ಇನ್ಸ್‌ಪೆಕ್ಟರ್‌ಗಳಾದ ಬಿ.ಎಸ್.ಮಂಜನಾಥ್, ರಾವ್ ಗಣೇಶ್ ಜನಾರ್ಧನ್, ಆರ್.ಪಿ.ಅನಿಲ್, ಮನೋಜ್ ಎನ್. ಹೋವಳೆ, ಕೆಎಸ್‌ಆರ್‌ಪಿ ಸಹಾಯಕ ಸಬ್‌ಇನ್ಸ್‌ಪೆಕ್ಟರ್‌ಗಳಾದ ಟಿ.ಎ.ಸತ್ಯನಾರಾಯಣರಾವ್, ಎಸ್.ಎಸ್. ವೆಂಕಟರಮಣಗೌಡ, ಎಸ್.ಎಂ.ಪಾಟೀಲ್, ಸಿವಿಲ್ ಪೊಲೀಸ್ ಮುಖ್ಯ ಪೇದೆಗಳಾದ ಪೆಂಡಪ್ಪ ಪ್ರಸನ್ನಕುಮಾರ್, ಹೆಚ್.ಪ್ರಭಾಕರ, ಮೀಸಲು ಪಡೆಯ ಇನ್ಸ್‌ಪೆಕ್ಟರ್ ಬಿ.ಟಿ. ವರದರಾಜ, ಮಹಿಳಾ ಪೇದೆ. ಬಿ. ಸುಧಾ, ಬೆಂಗಳೂರು ಪೊಲೀಸ್ ಕಂಟ್ರೋಲ್ ರೂಂನ ಟಿ.ಆರ್.ರವಿಕುಮಾರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. 901 ಪೊಲೀಸ್ ಪದಕಗಳ ಪೈಕಿ 140 ಮಂದಿಗೆ 'ಶೌರ್ಯ ಪ್ರಶಸ್ತಿ', 90 ಮಂದಿಗೆ 'ಗಣನೀಯ ಸೇವಾ ಪ್ರಶಸ್ತಿ', 668 ಮಂದಿಗೆ ವಿಶಿಷ್ಟ ಸೇವಾ ಪ್ರಶಸ್ತಿ ಪ್ರಕಟಿಸಲಾಗಿದೆ. ಉತ್ತರ ಪ್ರದೇಶ–74, ಮಹಾರಾಷ್ಟ್ರ–39, ತಮಿಳುನಾಡು–21, ಪಶ್ಚಿಮ ಬಂಗಾಳ–20, ಕರ್ನಾಟಕ–19, ಬಿಹಾರ, ದೆಹಲಿ ತಲಾ 17 ಪ್ರಶಸ್ತಿ ಪಡೆಯುವ ಮೂಲಕ ಮುಂಚೂಣಿಯಲ್ಲಿದೆ.

ನಮ್ಮ ಟಾರ್ಗೆಟ್ ಡಿ.ಕೆ.ಶಿವಕುಮಾರ್

ರಮೇಶ್ ಜಾರಕಿಹೊಳಿ ಆಕ್ರೋಶ

ಬೆಳಗಾವಿ: ಕರ್ನಾಟಕ ಸಂಪುಟ ವಿಸ್ತರಣೆಯಲ್ಲಿ ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿರುವ ರಮೇಶ್ ಜಾರಕಿಹೊಳಿ ಚುನಾವಣೆ ಸಂದರ್ಭದಲ್ಲಿ ಸಚಿವ ಸ್ಥಾನ ಬೇಡ ಎಂದು ನಾನೇ ಹೇಳಿದ್ದೇನೆ. ಮುಂದೆ 2023ಕ್ಕೆ ಮತ್ತೆ ಆಗೋಣ, ಇನ್ನು 3 ತಿಂಗಳು ಮಾತ್ರ ಇದೆ. ಮೂರು ತಿಂಗಳಲ್ಲಿ ಸಚಿವ ಸ್ಥಾನ ನೀಡೋದರಲ್ಲಿ ಅರ್ಥ ಇಲ್ಲ ಎಂದರು. ಮಾಧ್ಯಮದವರೊಂದಿಗೆ ಮಾತನಾಡುತ್ತಾ, ಸಿಡಿ ವಿಚಾರವಾಗಿ ಕಾಂಗ್ರೆಸ್ ಮತ್ತು ಡಿ.ಕೆ.ಶಿವಕುಮಾರ್ ವಿರುದ್ಧ ಕಿಡಿಕಾರಿದ ರಮೇಶ್ ಜಾರಕಿಹೊಳಿ, ನೂರು ಸಿಡಿ ಬಂದರೂ ನಾನು ಹೆದರುವುದಿಲ್ಲ. ಮಹಾ ನಾಯಕನ ಎಲ್ಲ ಕುತಂತ್ರ ಬಗ್ಗೆ ಸಿಬಿಐ ತನಿಖೆಗೆ ನೀಡಬೇಕು ಎಂದು ಆಗ್ರಹಿಸಿದರು. ಈ ಬಗ್ಗೆ ಸಿಎಂಗೆ ಮನವಿ ಮಾಡಿದ್ದು ಕೇಂದ್ರ ಗೃಹಸಚಿವರಿಗೂ ಮನವಿ ಮಾಡುತ್ತೇನೆ. ಡಿಕೆಶಿಗೆ ನನ್ನ ಹೆದರಿಕೆ ಇದೆ. ನಾನು ಒಬ್ಬನೇ ಅವನನ್ನು ಎದುರಿಸೋನು. ಇಂತಹ ನೂರು ಸಿಡಿ ಬಂದರೂ ನಾನು ಹೆದರಲ್ಲ ಎಂದು ಏಕವಚನದಲ್ಲಿಯೇ ವಾಗ್ದಾಳಿ ನಡೆಸಿದರು. ಸಿಡಿ ಪ್ರಕರಣದಲ್ಲಿ ಸ್ಥಳೀಯ ನಾಯಕರ ಪಾತ್ರ ಇದೆಯಾ ಎಂದು ಮಾಧ್ಯಮಗಳ ಪ್ರಶ್ನೆಗೆ ಅವರೆಲ್ಲ ಏಜೆಂಟರು ಎಂದ ರಮೇಶ್ ಜಾರಕಿಹೊಳಿ, ನಮಗೇನಿದ್ದರೂ ಟಾರ್ಗೆಟ್ ಡಿ.ಕೆ.ಶಿವಕುಮಾರ್. ಸಿಬಿಐ ತನಿಖೆ ಆದರೆ ಎಲ್ಲ ಗೊತ್ತಾಗುತ್ತದೆ. ನನ್ನ ಹಾಗೆ ಬೇರೆಯವರು ಸಫರ್ ಆಗಬಾರದು ಎಂದರು.



ಅವನಿಗೆ ಪ್ಯಾಂಟ್ ಬಿಚ್ಚಲು ಹೇಳಿದ್ವಾ



ರಾಜ್ಯದಲ್ಲಿ ಸಿಡಿ ಪ್ರಕರಣ ಮತ್ತೆ ವ್ಯಾಪಕ ಚರ್ಚೆ ಹುಟ್ಟುಹಾಕಿದ್ದು, ರಮೇಶ್ ಜಾರಕಿಹೊಳಿ ಆರೋಪಗಳಿಗೆ ತಿರುಗೇಟು ನೀಡಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, 'ಅವನಿಗೆ ಪ್ಯಾಂಟ್ ಬಿಚ್ಚಲು ಹೇಳಿದ್ವಾ?' ಕಾಂಗ್ರೆಸ್ ಪಕ್ಷ ಹಾಳು ಮಾಡಿದ್ದೇ ಅವನು' ಎಂದು ಏಕವಚನದಲ್ಲಿಯೇ ವಾಗ್ದಾಳಿ ನಡೆಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಿಕೆಶಿವಕುಮಾರ್, 'ಅವನಿಗೆ ಪ್ಯಾಂಟ್ ಬಿಚ್ಚಲು ನಾನು ಹೇಳಿದ್ನಾ, ಲಂಚ ತೆಗೆದು ಕೊಳ್ಳಲು ನಾನು ಹೇಳಿದ್ನಾ, ಜನರ ವೋಟಿಗೆ 6 ಸಾವಿರ ನೀಡಲು ನಾನು ಹೇಳಿದ್ನಾ, ಅವನು ಕಂಪ್ಲೇಂಟ್ ಆದರೂ ಕೊಡ್ಲಿ, ಏನಾದರೂ ಮಾಡಿಕೊಳ್ಳಲಿ, ನಾವಂತೂ ಹೆದರಲ್ಲ' ಎಂದು ಹೇಳಿದ್ದಾರೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 10ರಲ್ಲಿ



ಕೃಷ್ಣರಾಜ ವಿಧಾನಸಭಾ ಕ್ಷೇತ್ರ, ಮೈಸೂರು
ನಾಡಿನ ಸಮಸ್ತ ಜನತೆಗೆ ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು
ಪ್ರಜಾಧ್ವನಿ ಯಾತ್ರೆ
ಕೈ ಜೋಡಿಸಿ ಕಯನಾಡಿಗಾಗಿ
ಹೃತ್ಪೂರ್ವಕ ಸುಸ್ವಾಗತ
ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ
ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ
ಸನ್ಮಾನ್ಯ ಶ್ರೀ ಡಿ.ಕೆ.ಶಿವಕುಮಾರ್‌ರವರು
ಹಾಗೂ ಮಾಜಿ ಮುಖ್ಯಮಂತ್ರಿಗಳು
ಹಾಗೂ ವಿರೋಧ ಪಕ್ಷದ ನಾಯಕರಾದ
ಸನ್ಮಾನ್ಯ ಶ್ರೀ ಸಿದ್ದರಾಮಯ್ಯರವರು
ಹಾಗೂ ಇನ್ನಿತರ ಗಣ್ಯರಿಗೆ ಹೃತ್ಪೂರ್ವಕ ಸ್ವಾಗತ
ಜಿ. ಸೋಮಶೇಖರ್
ಅಧ್ಯಕ್ಷರು
ಕೃಷ್ಣರಾಜ ಬ್ಲಾಕ್ ಸಮಿತಿ
ಎಸ್. ಶ್ರೀಧರ್
ಅಧ್ಯಕ್ಷರು
ದೇವರಾಜ ಬ್ಲಾಕ್ ಸಮಿತಿ
ಗುರುಪಾದಸ್ವಾಮಿ
ಕಾರ್ಯದರ್ಶಿಗಳು ಕೆ.ಪಿ.ಸಿ.ಸಿ.,
ಕೆ.ಆರ್. ವಿಧಾನಸಭಾ ಕ್ಷೇತ್ರದ ಆಕಾಂಕ್ಷಿ
ಮೊ : 9448293548
ಪ್ರಕಟಣೆ : ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಬ್ಲಾಕ್
ಕಾಂಗ್ರೆಸ್ ಸಮಿತಿ ಅಧ್ಯಕ್ಷರುಗಳು,
ಮೈಸೂರು ನಗರ ಪಾಲಿಕೆ ಮಾಜಿ ಮಹಾಪೌರರು, ಹಾಲಿ ಮತ್ತು ಮಾಜಿ
ನಗರಪಾಲಿಕೆ ಸದಸ್ಯರು, ಡಿ.ಸಿ.ಸಿ. ಮತ್ತು ಎಲ್ಲಾ ವಿವಿಧ ಘಟಕಗಳ
ಎಲ್ಲಾ ಬ್ಲಾಕ್ ಸಮಿತಿ ಕಾಂಗ್ರೆಸ್ ಅಧ್ಯಕ್ಷರು ಮತ್ತು ಪದಾಧಿಕಾರಿಗಳು,
ಕಾಂಗ್ರೆಸ್‌ನ ಮುಖಂಡರುಗಳು ಹಾಗೂ ಕಾರ್ಯಕರ್ತರು

ಮೈಸೂರು ಮಿತ್ರ

ಗುರುವಾರ 26
ಜನವರಿ 2023



ಕಲಿಕಾ ಹಬ್ಬಗಳು ಶೈಕ್ಷಣಿಕ ಪ್ರಗತಿಗೆ ಪೂರಕ



ಕಂಪಲಾಪುರ, ಜ. 25– ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕಲಿಕಾ ಹಬ್ಬಗಳು ಪೂರಕ ಎಂದು ಕ್ಷೇತ್ರ ಸಮನ್ವಯಾಧಿಕಾರಿ ಶಿವರಾಜ್ ತಿಳಿಸಿದರು.

ಇಲ್ಲಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಕಲಿಕಾಹಬ್ಬ ಉದ್ಘಾಟಿಸಿ ಮಾತನಾಡಿದ ಅವರು, ಕಲಿಕಾ ಹಬ್ಬವನ್ನು ರಾಜ್ಯಾದ್ಯಂತ 4100 ಶಾಲೆಗಳಲ್ಲಿ ಆಚರಿಸುತ್ತಿದ್ದು, ಮಕ್ಕಳಿಗೆ ಬಾಯಿಪಾಠ ಶಿಕ್ಷಣದ ಜೊತೆಗೆ ವೈಜ್ಞಾನಿಕವಾಗಿ, ವಿಮರ್ಶಾತ್ಮಕವಾಗಿ ಶಿಕ್ಷಣ ನೀಡಲಾಗುತ್ತದೆ. ತಾಲೂಕಿನ ಹಲವೆಡೆ ಕಲಿಕಾ ಹಬ್ಬ ಆಚರಿಸುತ್ತಿದ್ದು, 120 ಶಿಕ್ಷಕರಿಗೆ ಜವಾಬ್ದಾರಿ ಕೊಡಲಾಗಿದೆ. ಕೇವಲ ಪಾಠ ಕೇಳುವುದರಿಂದ ಬೌದ್ಧಿಕ ಮಟ್ಟ ಹೆಚ್ಚುವುದಿಲ್ಲ. ಇಂತಹ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಾಗ ಮಕ್ಕಳಿಗೆ ಹಿಂಜರಿಕೆ ದೂರವಾಗಿ ಜೊತೆಗೆ ಎಲ್ಲಾ ಶಾಲೆಗಳ ಮಕ್ಕಳು ಒಂದೆಡೆ ಸೇರಿದಾಗ ಆತ್ಮವಿಶ್ವಾಸ ಮೂಡಿ ಅವರಲ್ಲಿರುವ ಪ್ರತಿಭೆ ಹೊರಹೊಮ್ಮುತ್ತದೆ ಎಂದರು. ಅಕ್ಷರದಾಸೋಹ ಸಹಾಯಕ ನಿರ್ದೇಶಕ ಪ್ರಶಾಂತ್ ಮಾತನಾಡಿ, ಕಲಿಕಾ ಹಬ್ಬಗಳನ್ನು ವಿನೂತನವಾಗಿ ಆಚರಣೆ ಮಾಡುವುದರಿಂದ ಮಕ್ಕಳ ಪ್ರತಿಭೆಗಳು ಇಂತಹ ವೇದಿಕೆಗಳಲ್ಲಿ ಅನಾವರಣಗೊಂಡು ಜನಸಾಮಾನ್ಯರಿಗೆ, ಪಾಲಕರಿಗೆ ಮನ ಮುಟ್ಟುವಂತೆ ಮಾಡುತ್ತದೆ ಎಂದರು.

ಕಾರ್ಯಕ್ರಮಕ್ಕೂ ಮುನ್ನ ಕ್ಲಸ್ಟರ್‌ನ 12 ಶಾಲೆಗಳ ಮಕ್ಕಳು ಸೇರಿದಂತೆ 300ಕ್ಕೂ ಹೆಚ್ಚು ಮಕ್ಕಳು ವಿವಿಧ ವೇಷಭೂಷಣ ತೊಟ್ಟು , ಮಂಗಳವಾದ್ಯ, ಬ್ಯಾಂಡ್‌ಸೆಟ್ ಸಮೇತ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ವೇದಿಕೆಯಲ್ಲಿ ಗ್ರಾ.ಪಂ.ಅಧ್ಯಕ್ಷೆ ಮಮತಾ ತಮ್ಮಯ್ಯ, ಸದಸ್ಯೆ ಸುಮ, ನೋಡೆಲ್ ಅಧಿಕಾರಿ ಮಹದೇವಯ್ಯ, ಬಿ.ಆರ್.ಪಿ ಪುಟ್ಟರಾಜ್, ಸಿ.ಆರ್.ಪಿ.ಸುದರ್ಶನ್, ಸರ್ಕಾರಿ ನೌಕರರ ಸಂಘದ ನಿರ್ದೇಶಕ ದಯಾನಂದ್, ಜಗದೀಶ್, ಶಿವರಾಜ್, ಯಶ್ವಂತ್, ಶಾರದಮ್ಮ, ಜಯಸ್ವಾಮಿ, ಶ್ರೇಯಸ್, ಗಿರಿಧರ್, ಮಹದೇವ್, ನಿಲುಫರ್, ರಘು, ಗಣೇಶ್, ರಾಮಚಂದ್ರ ಎಸ್‌ಡಿಎಂಸಿ ಅಧ್ಯಕ್ಷ ಸದಾಶಿವ, ಸದಸ್ಯರಾದ ರಾಜೇಶ್, ರಾಣಿ, ಶಹಜಾನ್, ಜಯರಾಂ, ಸತೀಶ್, ನಿವೃತ್ತ ಮುಖ್ಯ ಶಿಕ್ಷಕ ನಾಗಪ್ಪ, ಕಾಳಪ್ಪ, ನಾಗರಾಜ್ ಮತ್ತಿತರರು ಹಾಜರಿದ್ದರು.

ಮಕ್ಕಳ ಪ್ರತಿಭೆಗೆ ಉತ್ತಮ ವೇದಿಕೆ ಕಲಿಕಾ ಹಬ್ಬ



ಬೆಟ್ಟದಪುರ, ಜ. 25– ಮಕ್ಕಳ ಪ್ರತಿಭೆಯನ್ನು ಹೊರತಂದು ಕ್ರಿಯಾಶೀಲತೆಯನ್ನು ಜಾಗೃತಿಗೊಳಿಸಲು ಕಲಿಕಾ ಹಬ್ಬವು ಸಹಕಾರಿಯಾಗಿದೆ ಎಂದು ಉಪ ಪ್ರಾಂಶುಪಾಲ ಬಿ.ಎಸ್ ರೇವಣ್ಣ ತಿಳಿಸಿದರು. ಇಲ್ಲಿನ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರೌಢಶಾಲಾ ವಿಭಾಗದಲ್ಲಿ ಆಯೋಜಿಸಿದ್ದ ಕ್ಲಸ್ಟರ್ ಮಟ್ಟದ ಮಕ್ಕಳ ಕಲಿಕಾ ಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಬಳಿಕ ಮಾತನಾಡಿದ ಅವರು, ಮಕ್ಕಳ ಮನಸ್ಸು ಕಲಿಕೆಯಿಂದ ವಿಮುಖರಾಗಬಾರದು ಎಂಬ ಉದ್ದೇಶದಿಂದ 2022–23ನೇ ಸಾಲಿನ ಶೈಕ್ಷಣಿಕ ವರ್ಷವನ್ನು ಕಲಿಕಾ ಚೇತರಿಕೆ ವರ್ಷ ಎಂದು ಆಚರಿಸತ್ತಿದ್ದು ಇದರಿಂದ ಮಕ್ಕಳಲ್ಲಿ ಕಲಿಕಾ ಚೈತನ್ಯ ತುಂಬಿದೆ. ಮಕ್ಕಳ ಕಲಿಕೆ ಬಾಲ್ಯವನ್ನು ಸಂಭ್ರಮಿಸಬೇಕೆಂಬ ಉದ್ದೇಶ ದಿಂದ ಕಲಿಕಾ ಹಬ್ಬವನ್ನು ಆಚರಿಸುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷೆ ಮಂಜುಳಾ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಸೃಜನಶೀಲ ಕಾರ್ಯಕ್ರಮವನ್ನು ಹಮ್ಮಿಕೊಂಡು ಗ್ರಾಮೀಣ ಮಕ್ಕಳ ಪ್ರತಿಭೆಯನ್ನು ಅನಾವರಣ ಮಾಡುವ ಸರ್ಕಾರದ ಕೆಲಸ ಪ್ರಶಂಸನೀಯ ಎಂದು ಹರ್ಷ ವ್ಯಕ್ತಪಡಿಸಿದರು. ಕಾರ್ಯಕ್ರಮಕ್ಕೂ ಮುನ್ನ ವಿದ್ಯಾರ್ಥಿಗಳು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯಲ್ಲಿ ಸಾಗಿದರು. ಎಸ್‌ಡಿಎಂಸಿ ಅಧ್ಯಕ್ಷೆ ಮೀನಾಕುಮಾರಿ, ಉಪಾಧ್ಯಕ್ಷೆ ಸೌಮ್ಯ, ನಿವೃತ್ತ ದೈಹಿಕ ಶಿಕ್ಷಕ ನಾರಾಯಣಗೌಡ, ಮುಖ್ಯ ಶಿಕ್ಷಕ ನಿತ್ಯಾನಂದ, ಶಿಕ್ಷಕರಾದ ಲಿಂಗರಾಜು, ಕೆಂಪರಾಜು, ಜಗದೀಶ್, ಜ್ಯೋತಿ, ಅಭಿಗೌಡ, ವಿಜಯ್ ಕುಮಾರಿ, ರೂಪಕುಮಾರಿ, ಸಿಆರ್‌ಪಿ ಚಂದ್ರಶೇಖರ್ ಮುಖಂಡರಾದ ರಾಜೇಂದ್ರ, ಚೆಲುವನಾಯಕ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

ಬಿತ್ತನೆ ಜೋಳದ ಬಗ್ಗೆ ಕಾರ್ಯಕ್ರಮ



ಬೈಲಕುಪ್ಪೆ, ಜ. 25– ಲಿಮಗ್ ಗ್ರೀನ್ಸ್ ಕಂಪನಿಯ ಎಲ್ ಜಿ 36/511 ಜೋಳದ ಬಿತ್ತನೆ ಬೀಜಗಳು ಹೆಚ್ಚುವರಿ ಜೋಳದ ಇಳುವರಿ ಪಡೆಯಲು ಸಾಧ್ಯವಾಗುತ್ತದೆ ಎಂದು ಲಿಮಗ ಗ್ರೀನ್ ಕಂಪೆನಿಯ ರಾಜ್ಯ ಮಾರಾಟ ವ್ಯವಸ್ಥಾಪಕ ನಾಗರಾಜು ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಬೈಲುಕುಪ್ಪೆಯ ಟಿಬೇಟಿಯನ್ ನಾನ್ ರೋಲಿಂಗ್ ಸಮುದಾಯ ಭವನದಲ್ಲಿ ಟಿಬೇಟಿಯನ್ ರೈತರಿಗೋಸ್ಕರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ರೈತರಿಗೆ ಲಿಮಗ ಗ್ರೀನ್ ಬಿತ್ತನೆ ಜೋಳದ ಬಗ್ಗೆ ಮಾಹಿತಿ ನೀಡಿ ಅವರು ಮಾತನಾಡಿದರು. ದಾವಣಗೆರೆ ಜಿಲ್ಲೆಯ ಮಾರಾಟಗಾರ ವ್ಯವಸ್ಥಾಪಕ ಶಶಿಕುಮಾರ್, ಮೈಸೂರು ಹಾಗೂ ಹಾಸನ ಜಿಲ್ಲೆಯ ವ್ಯವಸ್ಥಾಪಕ ಮಾರಾಟಗಾರ ಹುಣಸೂರು ಮಧು, ಪಿರಿಯಾಪಟ್ಟಣ ತಾಲೂಕಿನ ವಿತರಕರಾದ ಸಮಿವೊಲ್ಲ ಖಾನ್, ಕಿರಣ್, ಸಂತೋಷ್, ದೇವರಾಜ್, ಸೇರಿದಂತೆ ಟಿಬೇಟಿಯನ್ ರೈತರು ಇದ್ದರು.

ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್ ಗೆಲುವಿಗೆ ಶ್ರಮಿಸಿ



ಭೇರ್ಯ, ಜ.25– ಕಾಂಗ್ರೆಸ್ ಪಕ್ಷದ ಮುಖಂಡ ಡಿ.ರವಿಶಂಕರ್ ಜನಪರ ಕಾಳಜಿಯಿಂದ ಹಾಗೂ ರಾಜ್ಯದಲ್ಲಿ ಮತ್ತೆ ಕಾಂಗ್ರೆಸ್ ಪಕ್ಷ ಸರ್ಕಾರ ಬರುವುದರಿಂದ ಪಕ್ಷದ ಅಭ್ಯರ್ಥಿ ಡಿ.ರವಿಶಂಕರ್ ಗೆಲುವಿಗಾಗಿ ಶ್ರಮಿಸಿ ಎಂದು ತಾಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ದೆಗ್ಗನಹಳ್ಳಿ ಆನಂದ್ ಮನವಿ ಮಾಡಿದರು.

ಭೇರ್ಯ ಗ್ರಾಮದಲ್ಲಿ ಯುವ ಕಾಂಗ್ರೆಸ್ ವತಿಯಿಂದ ಸಭೆ ನಡೆಸಿ ಮಾತನಾಡಿದ ಅವರು, ಮುಂದಿನ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರ ಹಿಡಿಯುವುದು ಶತಸಿದ್ಧ.. ದಲಿತರು, ಅಲ್ಪಸಂಖ್ಯಾತರ, ಹಿಂದುಳಿದವರ ಅಭ್ಯುದಯಕ್ಕಾಗಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಬೇಕು. ಮುಂದಿನ ಚುನಾವಣೆಯಲ್ಲಿ ತಾಲೂಕಿನ ಮನೆ ಮಗ ಡಿ.ರವಿಶಂಕರ್ ಜನಾಶೀರ್ವಾದ ಪಡೆಯುವ ಮೂಲಕ ತಾಲೂಕಿನ ಮನೆಮನೆಗೂ ತೆರಳಿ ಆಶೀರ್ವಾದ ಪಡೆಯುತ್ತಿದ್ದಾರೆ. ಆದ್ದರಿಂದ ತಾಲೂಕಿನ ಪ್ರತಿಯೊಬ್ಬ ಮತದಾರರು ಆಶೀರ್ವದಿಸಿ ಅವರನ್ನು ಶಾಸಕರಾಗಿ ಆಯ್ಕೆಮಾಡಬೇಕಾಗಿ ಮನವಿ ಮಾಡಿದರು. ಇದೇ ವೇಳೆ ಕೆ.ಆರ್. ನಗರ ಬ್ಲಾಕ್ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಸೈಯಾದ್ ತನ್‌ಜಿಮ್ ಅವರನ್ನು ಸನ್ಮಾನಿಸಲಾಯಿತು. ಕಾಂಗ್ರೆಸ್ ಮುಖಂಡರಾದ ಖಾಲಿದ್ ಪಾಷ, ಸರ್ದಾರ್ ಪಾಷಾ, ಸೈಯದ್, ಉಸ್ತಾಕ್, ಇಮ್ಮು, ಇಮ್ರಾನ್ ಖಾನ್, ನಾಜಿಮ್, ರಾಹೀಲ್, ದಿನೇಶ್ ಕೃಷ್ಣೇಗೌಡ, ಬಟಿಗನಹಳ್ಳಿ ಸಂತೋಷ್, ಎ.ಆರ್.ವಿ ಅನೀಲ್, ಭೇರ್ಯ ಸಚಿನ್, ಕೆಂಚನಹಳ್ಳಿ ಜಗ, ಮಹದೇವ್ ಕನಕ, ಹೋಟೆಲ್ ಮಂಜು, ಸ್ವರೂಪ್, ತನ್ ಜಿಮ್, ಅನಿಲ್ ಕುಮಾರ್,ಕಿರಣ್ ರಾಘವೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ನೇಮಕ



ಹುಣಸೂರು, ಜ.25(ಕೆಕೆ)– ಹುಣಸೂರು ತಾಲೂಕಿನ ಹೊನ್ನೇನಹಳ್ಳಿ ಗ್ರಾಮದ ಪ್ರಾಥಮಿಕ ಶಾಲೆಯ ಶಿಕ್ಷಕರಾದ ಮಹದೇವು ಅವರನ್ನು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಎಸ್.ಸಿ, ಎಸ್.ಟಿ ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಿ ರಾಜ್ಯಾಧ್ಯಕ್ಷ ಟಿ.ಸೋಣ್ಣಪ್ಪ ಆದೇಶ ಹೊರಡಿಸಿದ್ದಾರೆ.

ದೆಹಲಿ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಮೈಸೂರಿನ 14 ಎನ್‌ಸಿಸಿ ಕೆಡೆಟ್‌ಗಳು ಭಾಗಿ

ಮೈಸೂರು, ಜ.25(ಎಂಟಿವೈ)– ನವದೆಹಲಿಯಲ್ಲಿ ಜ.26ರಂದು ನಡೆಯಲಿರುವ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಮೈಸೂರಿನ 14ನೇ ಕರ್ನಾಟಕ ಬೆಟಾಲಿಯನ್‌ನ 14 ಎನ್‌ಸಿಸಿ ಕೆಡೆಟ್‌ಗಳು ಪಾಲ್ಗೊಳ್ಳಲು ಆಯ್ಕೆಯಾಗಿದ್ದು, ಈಗಾಗಲೇ ದೆಹಲಿಯಲ್ಲಿ ತಂಡವನ್ನು ಸೇರಿಕೊಂಡಿದ್ದಾರೆ.

ದೆಹಲಿಯಲ್ಲಿ ಪ್ರತಿವರ್ಷ ಗಣರಾಜ್ಯೋತ್ಸವ ಪರೇಡ್ ಆಕರ್ಷಕವಾಗಿ ಜರುಗಲಿದ್ದು, ಇದರಲ್ಲಿ ಪಾಲ್ಗೊಳ್ಳುವುದು ಎನ್‌ಸಿಸಿ ಕೆಡೆಟ್‌ಗಳಿಗೆ ಪ್ರತಿಷ್ಠೆಯಾಗಿದೆ. ಕಳೆದ ಹಲವು ವರ್ಷಗಳಿಂದ ಮೈಸೂರಿನ 14ನೇ ಕರ್ನಾಟಕ ಬೆಟಾಲಿಯನ್ ಎನ್‌ಸಿಸಿಯ ಕೆಡೆಟ್‌ಗಳು ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪಾಲ್ಗೊಳ್ಳುವ ಮೂಲಕ ಸಾಧನೆ ಮಾಡುತ್ತಿದ್ದಾರೆ. ಈ ವರ್ಷವೂ 14 ಎನ್‌ಸಿಸಿ ಕೆಡೆಟ್‌ಗಳು ಆಯ್ಕೆಯಾಗಿದ್ದಾರೆ. ಕರ್ನಾಟಕ ಮತ್ತು ಗೋವಾ ಬೆಟಾಲಿಯನ್‌ನಲ್ಲಿ 111 ಎನ್‌ಸಿಸಿ ಕೆಡೆಟ್‌ಗಳು ಆಯ್ಕೆಯಾಗಿದ್ದು, ಅವರಲ್ಲಿ 14ನೇ ಕರ್ನಾಟಕ ಬೆಟಾಲಿಯನ್‌ನ 14 ಕೆಡೆಟ್‌ಗಳು ಸೇರಿದ್ದಾರೆ.

14 ಎನ್‌ಸಿಸಿ ಕೆಡೆಟ್‌ಗಳಲ್ಲಿ 9 ಮಂದಿ ಕರ್ತವ್ಯ ಪಥದಲ್ಲಿ ನಡೆಯುವ ಗಣರಾಜ್ಯೋತ್ಸವ (ಆರ್‌ಡಿ) ಪರೇಡ್‌ನಲ್ಲಿ ಪಥಸಂಚಲನದಲ್ಲಿ ಪಾಲ್ಗೊಳ್ಳಲಿದ್ದಾರೆ. ಪ್ರಧಾನಮಂತ್ರಿಗಳ ಮನೆಯಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಇಬ್ಬರು ಪಾಲ್ಗೊಳ್ಳಲಿದ್ದಾರೆ. ಜ.28ರಂದು ನಡೆಯುವ ಪ್ರಧಾನಮಂತ್ರಿ ರ್‍ಯಾಲಿಯಲ್ಲಿ ಮೂವರು ಕೆಡೆಟ್‌ಗಳು ಭಾಗವಹಿಸಲಿದ್ದಾರೆ.

ಆರ್‌ಡಿ ಪರೇಡ್‌ನಲ್ಲಿ ಪಾಲ್ಗೊಳ್ಳಲಿರುವ ಕೆಡೆಟ್‌ಗಳು: ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಜೂನಿಯರ್ ಅಂಡರ್ ಆಫೀಸರ್ (ಜೆಯುಒ) ನವೀನ್ ಕುಮಾರ್ (ಮಂಡ್ಯ ಪಿಇಎಸ್ ಕಾಲೇಜು), ಜೆಯುಒ ಲೆನ್ಸನ್ ಎಸ್.ಡಿ. ಅಲ್ಮೇಡಾ (ಮಂಡ್ಯ ಪಿಇಎಸ್ ಕಾಲೇಜು), ಜೆಯುಒ ಎಸ್.ನಂದೀಶ್ ರಾಜೇ ಅರಸ್ (ಡಿ.ಬನುಮಯ್ಯ ಕಾಲೇಜು), ಜೆಯುಒ ಎಂ.ಸೋನುಶ್ರೀ (ಮೈಸೂರು ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜು), ಜೆಯುಒ ಆರ್.ಶಾಂಭವಿ(ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜು), ಜೆಯುಒ ಡಿ.ಐಶ್ವರ್ಯ(ಊಟಿ ರಸ್ತೆ ಜೆಎಸ್‌ಎಸ್ ಕಾಲೇಜು), ಜೆಯುಒ ಜೆ.ರಕ್ಷಿತಾ (ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜು), ಜೆಯುಒ ಯು.ಜಯಶ್ರೀ (ಊಟಿ ರಸ್ತೆ ಜೆಎಸ್‌ಎಸ್ ಕಾಲೇಜು), ಹಿರಿಯ ಅಂಡರ್ ಆಫೀಸರ್ (ಎಸ್‌ಯುಒ) ಎನ್.ಎಂ.ಅನ್ಮೋಲ್ (ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜು) ಪಾಲ್ಗೊಳ್ಳಲಿದ್ದಾರೆ.

ಜೆಯುಒ ಆರ್.ಎಸ್.ಯುಕ್ತೀಶ್ (ಡಿ.ಬನುಮಯ್ಯ ಕಾಲೇಜು), ಜೆಯುಒ ಬಿ.ಶಶಾಂಕ್(ಊಟಿ ರಸ್ತೆ ಜೆಎಸ್‌ಎಸ್ ಕಾಲೇಜು), ಜೆಯುಒ ಡಿ.ಸೌಂದರ್ಯ (ಊಟಿ ರಸ್ತೆ ಜೆಎಸ್‌ಎಸ್ ಕಾಲೇಜು)ಪ್ರಧಾನ ಮಂತ್ರಿ ರ್‍ಯಾಲಿಯಲ್ಲಿ ಭಾಗವಹಿಸಲಿದ್ದಾರೆ.

ಕಂಪನಿ ಹವಾಲ್ದಾರ್ ಮೇಜರ್ (ಸಿಹೆಚ್‌ಎಂ) ದಿಯಾ ಗಣೇಶ್(ಆರ್ಕಿಡ್ ಪಬ್ಲಿಕ್ ಸ್ಕೂಲ್) ಮತ್ತು ಜೆಯುಒ ಎಂ.ಎಸ್.ಸೂರ್ಯ (ಊಟಿ ರಸ್ತೆ ಜೆಎಸ್‌ಎಸ್ ಕಾಲೇಜು) ಪ್ರಧಾನಮಂತ್ರಿಗಳ ನಿವಾಸದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕರ್ನಾಟಕದ ಶ್ರೀಮಂತ ಸಂಸ್ಕೃತಿಯನ್ನು ಪ್ರದರ್ಶಿಸುವ ಸಾಂಸ್ಕೃತಿಕ ತಂಡದಲ್ಲಿ ಪಾಲ್ಗೊಳ್ಳಲಿದ್ದಾರೆ. ಎಲ್ಲಾ ಕೆಡೆಟ್‌ಗಳು ಬೆಟಾಲಿಯನ್‌ನ ಅಧಿಕಾರಿಗಳು ಮತ್ತು ಸಿಬ್ಬಂದಿ ಮೂಲಕ ಕಠಿಣ ತರಬೇತಿ ಪಡೆದಿದ್ದಾರೆ.



ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಪಾಲ್ಗೊಳ್ಳಲಿರುವ ಮೈಸೂರಿನ 14ನೇ ಕರ್ನಾಟಕ ಬೆಟಾಲಿಯನ್ ಕೆಡೆಟ್‌ಗಳು.

> **ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪರೇಡ್‌ನಲ್ಲಿ 14 ಕೆಡೆಟ್‌ಗಳು ಪಾಲ್ಗೊಳ್ಳುತ್ತಿರುವುದು ಮೈಸೂರಿಗೆ ಹೆಮ್ಮೆಯ ಸಂಗತಿ. ಆರ್‌ಡಿ ಪರೇಡ್‌ನಲ್ಲಿ ಪಾಲ್ಗೊಳ್ಳಬೇಕೆಂಬ ಕನಸನ್ನು ಎಲ್ಲಾ ಎನ್‌ಸಿಸಿ ಕೆಡೆಟ್ ಕಾಣುತ್ತಾರೆ. ಆರ್‌ಡಿ ಪರೇಡ್‌ಗೆ ಆಯ್ಕೆಯಾಗುವವರು ಅದೃಷ್ಟವಂತರಾಗಿದ್ದಾರೆ. ತರಬೇತಿಯೊಂದಿಗೆ ಶ್ರದ್ಧೆ ಮತ್ತು ಕಠಿಣ ಪರಿಶ್ರಮಪಟ್ಟರೆ ಎನ್‌ಸಿಸಿ ಕೆಡೆಟ್‌ಗಳು ಆರ್‌ಡಿ ಪರೇಡ್‌ಗೆ ಆಯ್ಕೆಯಾಗಬಹುದು. ಎಲ್ಲರಿಗೂ ಈ ಅವಕಾಶ ಸಿಗುವುದಿಲ್ಲ. ಮೈಸೂರಲ್ಲಿ ಮೊದಲು ಇಂಟರ್ ಯುನಿಟ್ ಸ್ಪರ್ಧೆ, ನಂತರ ಬೆಂಗಳೂರಲ್ಲಿ ನಡೆದ ಇಂಟರ್ ಗ್ರೂಪ್ ಸ್ಪರ್ಧೆಯಲ್ಲಿ ಆಯ್ಕೆಯಾದ ನಂತರ ಪ್ರಿ–ಆರ್‌ಡಿ ಶಿಬಿರದಲ್ಲಿ ಪಾಲ್ಗೊಂಡು ಉತ್ತಮ ಪ್ರದರ್ಶನ ನೀಡಿದ ಕೆಡೆಟ್‌ಗಳು ಆರ್‌ಡಿ ಪರೇಡ್‌ಗೆ ಆಯ್ಕೆಯಾಗುತ್ತಾರೆ.**
> **–ಕರ್ನಲ್ ಮನೀಶ್ ಪ್ರಸಾದ್, ಕಮಾಂಡಿಂಗ್ ಆಫೀಸರ್**

ಇಂದು 11 ಮಂದಿ ಶಿಕ್ಷಾ ಬಂಧಿಗಳ ಬಿಡುಗಡೆ

ಮೈಸೂರು, ಜ.25– 75ನೇ ಸ್ವಾತಂತ್ರ್ಯ ದಿನಾಚರಣೆಯ ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಸನ್ನಡತೆ ಆಧಾರದ ಮೇಲೆ ಅರ್ಹ ನಿರ್ದಿಷ್ಟ ವರ್ಗದ ಶಿಕ್ಷಾ ಬಂಧಿಗಳನ್ನು ವಿಶೇಷ ಮಾಫಿಯೊಂದಿಗೆ 2ನೇ ಹಂತದಲ್ಲಿ ಅವಧಿ ಪೂರ್ವವಾಗಿ ಬಿಡುಗಡೆಗೊಳಿಸಲಾಗುತ್ತಿದೆ.

ಸಂಸ್ಥೆಯಲ್ಲಿ ಮಾಫಿ ಸೇರಿ ಶೇಕಡಾ 66 ಶಿಕ್ಷೆ ಪೂರೈಸಿದ 11 ಪುರುಷ ಅಲ್ಪಾವಧಿ ಶಿಕ್ಷಾ ಬಂಧಿಗಳು ಬಿಡುಗಡೆಯಾಗುತ್ತಿದ್ದು, ಮೈಸೂರು ಕೇಂದ್ರ ಕಾರಾಗೃಹದಲ್ಲಿ ಜ.26 ರಂದು ಬೆಳಗ್ಗೆ 10 ಘಂಟೆಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸದರಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಿ ಕೆ.ಸಿ ದಿವ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ.30ರಂದು ಜಾಗೃತಿ ಜಾಥಾ

ಮೈಸೂರು, ಜ.25– ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮದಡಿಯಲ್ಲಿ ಸ್ಪರ್ಶ ಕುಷ್ಠರೋಗ ಅರಿವು ಆಂದೋಲನ ಪ್ರಯುಕ್ತ ಸಮುದಾಯದಲ್ಲಿ ಅರಿವು ಮೂಡಿಸಲು ಜ.30 ರಂದು ಜಾಗೃತಿ ಜಾಥಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಬೆಳಗ್ಗೆ 9.30ಕ್ಕೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಿಂದ ಜಾಥಾ ಹೊರಟು ಅಲ್ಬರ್ಟ್ ವಿಕ್ಟರ್ ರಸ್ತೆ ಹಾರ್ಡಿಂಗ್ ವೃತ್ತದಿಂದ ಸಿದ್ಧಾರ್ಥ ಹೋಟೆಲ್ ಮಾರ್ಗವಾಗಿ ಹೊರಟು ಕ್ರಿಸ್ಟಲ್ ಪಾರ್ಕ್ ಥಿಯೋಬಾಲ್ ರಸ್ತೆ ಮಾರ್ಗವಾಗಿ ಎಸ್.ಪಿ. ಕಛೇರಿ ವೃತ್ತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿ, ಬಳಿ ಕೊನೆಗೊಳ್ಳುವುದು ಎಂದು ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಲೋಕೋಪಯೋಗಿ ಇಲಾಖೆ ಅತಿಥಿಗೃಹ ಲೋಕಾರ್ಪಣೆ

ನೆರೆ ಹಾವಳಿ ಹೆಚ್ಚಿನ ಅನುದಾನಕ್ಕೆ ಚರ್ಚಿಸಿ ಪರಿಹಾರ ಕಂಡುಕೊಳ್ಳಿ


ಹೆಚ್.ಡಿ.ಕೋಟೆ, ಜ.25–ನೆರೆ ಹಾವಳಿ ಸಂದರ್ಭದಲ್ಲಿ ಹೆಚ್.ಡಿ.ಕೋಟೆ ವಿಧಾನ ಸಭಾ ಕ್ಷೇತ್ರಕ್ಕೆ ಹೆಚ್ಚು ಅನುದಾನ ನೀಡಲಾಗಿದೆ ಎಂದು ಸಂಸದ ವಿ.ಶ್ರೀನಿವಾಸ್ ಪ್ರಸಾದ್ ತಿಳಿಸಿದ್ದಾರೆ.

ಪಟ್ಟಣದಲ್ಲಿ ಲೋಕೋಪಯೋಗಿ ಇಲಾಖೆ ವತಿಯಿಂದ ನೂತನವಾಗಿ ನಿರ್ಮಾಣವಾದ ಗಣ್ಯರ ಅತಿಥಿ ಗೃಹವನ್ನು ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಹೆಚ್ಚಿನ ಪರಿಹಾರ ನೀಡಿದ್ದರು ಎರಡು ತಾಲೂಕಿನಲ್ಲಿ ಮತ್ತಷ್ಟು ಪರಿಹಾರಕ್ಕೆ ಅಧಿಕಾರಿಗಳ ಮೇಲೆ ಒತ್ತಡ ಹಾಕುವುದು ಸರಿಯಲ್ಲ. ಇಂತಹ ಸಂದರ್ಭಗಳಲ್ಲಿ ಶಾಸಕರು, ಸಂಸದರು ಹಾಗೂ ಅಧಿಕಾರಿಗಳ ಸಭೆ ನಡೆಸಿ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕಾಗಿದೆ ಎಂದರು.

ಕಳೆದ ಎರಡು ವರ್ಷಗಳ ಹಿಂದೆ ಟಿ.ನರಸೀಪುರ, ನಂಜನಗೂಡು ಹಾಗೂ ಹೆಚ್.ಡಿ.ಕೋಟೆಯಲ್ಲಿ ನಿರ್ಮಾಣವಾದ ಅತಿಥಿ ಗೃಹಗಳಿಗೆ ಪೀಠೋಪಕರಣ ಇಲ್ಲದೆ ಉದ್ಘಾಟನೆ ಆಗಿರಲಿಲ್ಲ. ಈ ಬಗ್ಗೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತಂದು 47 ಲಕ್ಷ ರೂ. ಅನುದಾನ ಬಿಡುಗಡೆ ಮಾಡಿಸಲಾಗಿದೆ. ಮುಂದೆ ಅತಿಥಿ ಗೃಹದಲ್ಲಿ ಗಣ್ಯರು ಉಳಿದುಕೊಳ್ಳಲು ಅವಕಾಶ ಮಾಡಿಕೊಡಬೇಕು, ತೋಟಗಾರಿಕೆ ಇಲಾಖೆಯಿಂದ ಆವರಣವನ್ನು ಸುಂದರವಾಗಿಡಲು ಸೂಚಿಸಿದರು.

ಸಂಸದರ ಅನುದಾನದಲ್ಲಿ ಚಾಮರಾಜನಗರ ಕ್ಷೇತ್ರಕ್ಕೆ ತುರ್ತು ವಾಹನ ನೀಡಲಾಗಿದ್ದು, ಅದೇ ರೀತಿ ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕಿಗೆ ತಲಾ ಒಂದು ತುರ್ತು ವಾಹನ ನೀಡಲಾಗಿದೆ ಎಂದ ಅವರು, ಕರೋನ ಸಂದರ್ಭದಲ್ಲಿ ತಾಲೂಕಿನಲ್ಲಿ ತುರ್ತು ವಾಹನಗಳ ಅವಶ್ಯಕತೆ ತುಂಬಾ ಇತ್ತು. ಹಾಗಾಗಿ ಆದ್ಯತೆ ಮೇರೆಗೆ ನೀಡಲಾಗಿದೆ ಎಂದರು. ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲಿ ವಿಕಲಚೇತನರಿಗೆ ಸವಲತ್ತುಗಳನ್ನು ನೀಡಲು ಚಾಮರಾಜ ನಗರ ಲೋಕಸಭಾ ಕ್ಷೇತ್ರ ಆಯ್ಕೆಯಾಗಿ, ಕ್ಷೇತ್ರದ 3 ಸಾವಿರ ವಿಕಲಚೇತನರಿಗೆ 32 ಬಗೆಯ ಸುಮಾರು 3 ಕೋಟಿ ವೆಚ್ಚದ ಸಲಕರಣಿ ನೀಡಲು ಆಯ್ಕೆಯಾಗಿದ್ದಾರೆ. ಈಗಾಗಲೇ ಚಾಮರಾಜನಗರ ಭಾಗದ ನಾಲ್ಕು ತಾಲೂಕುಗಳ ವಿಕಲಚೇತನರಿಗೆ ಸಲಕರಣೆ ವಿತರಣೆ ಮಾಡಲಾಗಿದೆ. ಜ.29 ರಂದು ನಂಜನಗೂಡಿನಲ್ಲಿ ನಡೆಯುವ ನಾಲ್ಕು ತಾಲೂಕುಗಳ ವಿಕಲಚೇತನರಿಗೆ ಸಲಕರಣೆ ವಿತರಣೆ ಮಾಡಲಾಗುತ್ತದೆ ಎಂದು ತಿಳಿಸಿದರು. ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿ, 2014–15ನೇ ಸಾಲಿನಲ್ಲಿ ಗಣ್ಯರ ಅತಿಥಿ ಗೃಹಕ್ಕೆ ಅಂದಿನ ಶಾಸಕರಾದ ಚಿಕ್ಕಮಾದು ಹಾಗೂ ಸಂಸದರಾದ ಆರ್.ಧ್ರುವನಾರಯಾಣ್ ಶಂಕುಸ್ಥಾಪನೆ ಮಾಡಿದರು. ಕಳೆದ ಎರಡು ವರ್ಷಗಳಿಂದ ಪೀಠೋಪಕರಣ ವ್ಯವಸ್ಥೆ ಮಾಡದೆ ಇರುವುದರಿಂದ ಉದ್ಘಾಟನೆ ಆಗಿರಲಿಲ್ಲ. ಈಗ 45 ಲಕ್ಷ ರೂ. ಪೀಠೋಪಕರಣಕ್ಕೆ ಅನುದಾನ ಬಿಡುಗಡೆ ಆಗಿರುವುದರಿಂದ ಅನುಕೂಲ ಆಗಿದೆ ಎಂದರು.

ತಾಲೂಕಿನಲ್ಲಿ ಉತ್ತಮ ಆರೋಗ್ಯ ಸಿಗಬೇಕು ಎಂಬ ಉದ್ದೇಶದಿಂದ ಸಂಸದರು ಅಂಬುಲೇನ್ಸ್ ನೀಡಿದ್ದಾರೆ. ಆರೋಗ್ಯ ಭಾಗ್ಯದಲ್ಲಿ 3.5 ಸಾವಿರ ಅಂಗವಿಕಲರಿಗೆ ಸಲಕರಣೆ ನೀಡುತ್ತಿರುವುದು ತುಂಬಾ ಅನುಕೂಲ ಆಗಿದೆ. ಪತ್ರಕರ್ತ ಕಚೇರಿಗೆ ಸ್ಥಳ ನೀಡಲು ಸಂಸದರ ಮಾರ್ಗದರ್ಶನದಲ್ಲಿ ಕ್ರಮ ವಹಿಸಲಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಜಂಗಲ್ ಲಾಡ್ಜ್ & ರೆಸಾರ್ಟ್ ಮಾಜಿ ಅಧ್ಯಕ್ಷ ಎಂ.ಅಪ್ಪಣ್ಣ, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯರಾದ ಎಚ್.ಸಿ.ಲಕ್ಷ್ಮಣ್, ವೆಂಕಟಸ್ವಾಮಿ, ತಾಲೂಕು ಪಂಚಾಯತಿ ಮಾಜಿ ಅಧ್ಯಕ್ಷ ಸಿ.ಕೆ. ಗಿರೀಶ್, ಮುಖಂಡರಾದ ಡಾ.ಎಚ್.ವಿ. ಕೃಷ್ಣಸ್ವಾಮಿ, ಬಸವರಾಪ್ಪ, ಮನುಗನಹಳ್ಳಿ ಮಂಜು, ಗುರುಸ್ವಾಮಿ, ಶಿವರಾಜಪ್ಪ, ಯೋಗೇಶ್, ಎಂ.ಎನ್.ಜಗದೀಶ್, ಮಾದೇಶ, ಸೋಮಚಾರಿ, ಮಹೇಶ್, ಅಧಿಕಾರಿಗಳಾದ ಡಾ.ಪ್ರಸಾದ್, ಡಾ. ರವಿಕುಮಾರ್, ಡಾ.ಸೋಮಣ್ಣ, ಎಇಇ ಬೋರಯ್ಯ ಇದ್ದರು.



ಹೆಚ್.ಡಿ.ಕೋಟೆ ಪಟ್ಟಣದಲ್ಲಿ ಗಣ್ಯರ ಅತಿಥಿ ಗೃಹವನ್ನು ಚಾಮರಾಜನಗರ ಲೋಕಸಭಾ ಕ್ಷೇತ್ರದ ವಿ.ಶ್ರೀನಿವಾಸ್ ಪ್ರಸಾದ್ ಉದ್ಘಾಟಿಸಿದರು. ಶಾಸಕ ಅನಿಲ್ ಚಿಕ್ಕಮಾದು, ಎಂ.ಅಪ್ಪಣ್ಣ, ಎಚ್.ಸಿ.ಲಕ್ಷ್ಮಣ್, ವೆಂಕಟಸ್ವಾಮಿ, ಗಿರೀಶ್, ಕೃಷ್ಣಸ್ವಾಮಿ ಇದ್ದರು.

ಚಿರತೆ ದಾಳಿ ತಡೆಯಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಿ

● ಮಾಜಿ ಎಂಎಲ್‌ಸಿ ಸಿ.ರಮೇಶ್ ಒತ್ತಾಯ ● ಚಿರತೆ ದಾಳಿಯಿಂದ ಸಾವನ್ನಪ್ಪಿದ ಬಾಲಕನ ಕುಟುಂಬಕ್ಕೆ ಸಾಂತ್ವನ

ತಿ.ನರಸೀಪುರ, ಜ.25– ಶಾಸಕರ ಬೇಜವಾಬ್ದಾರಿಯಿಂದ ಚಿರತೆ ದಾಳಿಗಳು ಸಂಭವಿಸುತ್ತಿದ್ದು, ಸರ್ಕಾರ ತಾಲೂಕಿನಲ್ಲಿ ನಡೆಯುತ್ತಿರುವ ಅವಘಡ ತಪ್ಪಿಸಲು ಕ್ರಮ ಕೈಗೊಳ್ಳಬೇಕು ಎಂದು ಮಾಜಿ ವಿಧಾನಪರಿಷತ್ ಸದಸ್ಯ ಸಿ.ರಮೇಶ್ ಒತ್ತಾಯಿಸಿದರು.

ತಾಲೂಕಿನ ಹೊರಳಹಳ್ಳಿಯಲ್ಲಿ ಚಿರತೆ ದಾಳಿಯಿಂದ ಮೃತಪಟ್ಟ ಬಾಲಕನ ಮನೆಗೆ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿ ಮಾತನಾಡಿದ ಅವರು, ತಾಲೂಕಿನಲ್ಲಿ ಚಿರತೆ ದಾಳಿ ವಿಷಯ ಗಂಭೀರವಾಗಿದ್ದು, ಇದನ್ನು ನಿಭಾಯಿಸಲು ಶಾಸಕ ಅಶ್ವಿನ್ ಕುಮಾರ್ ಸಂಪೂರ್ಣ ವಿಫಲರಾಗಿದ್ದಾರೆ. ಅವರೊಬ್ಬ ನಾಲಾಯಕ್ ಶಾಸಕ. ಆತ ರಸ್ತೆ ಕಾಮಗಾರಿಗಳಿಗೆ ಗುದ್ದಲಿ ಪೂಜೆ ಮಾಡಿ ಕಮಿಷನ್ ಹೊಡೆಯಲು ಮಾತ್ರ ಲಾಯಕ್ಕಾಗಿರುವ ವ್ಯಕ್ತಿ ಎಂದು ಕಿಡಿಕಾರಿದರು.

ತಾಲೂಕಿನಲ್ಲಿ ಚಿರತೆ ದಾಳಿಯಿಂದ ನಾಲ್ವರು ಸಾವನ್ನಪ್ಪಿದ್ದಾರೆ. ಈ ಬಗ್ಗೆ ಕ್ಷೇತ್ರದ ಜವಾಬ್ದಾರಿಯುತ ಶಾಸಕನಾಗಿ ಮುಖ್ಯಮಂತ್ರಿಗಳ ಮನೆ ಮುಂದೆ ಪ್ರತಿಭಟನೆ ಮಾಡಿ ಕ್ರಮಕ್ಕೆ ಒತ್ತಾಯಿಸಬೇಕಿತ್ತು. ಆದರೆ ಆತ ವಿಷಯ ಗಂಭೀರವಾಗಿದ್ದರೂ, ಆರಾಮವಾಗಿ ತಿರುಗಾಡಿಕೊಂಡಿದ್ದಾನೆ ಎಂದು ಏಕವಚನದಲ್ಲೇ ವಾಗ್ದಾಳಿ ನಡೆಸಿದರು.



ಮುಂಬರುವ ಚುನಾವಣೆಯಲ್ಲಿ ಆತನ ಸೋಲು ಶತಸಿದ್ಧವಾಗಿದ್ದು, ಚಿರತೆ ದಾಳಿಯಿಂದ ಬಲಿಯಾಗಿರುವ ಅಮೂಲ್ಯ ಪ್ರಾಣಗಳೇ ಈತನ ಎಂಎಲ್‌ಎ ಸ್ಥಾನ ನುಂಗಲಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪರಿಶಿಷ್ಟ ಜನಾಂಗದವರ ಮೇಲೆ ಉದಾಸೀನ ಧೋರಣೆ ಹೊಂದಿರುವ ಈತ ಗೋಪಾಲಪುರ ಗ್ರಾಮದಲ್ಲಿ ಅನೇಕ ಬಾರಿ ಮನವಿ ಮಾಡಿದರೂ ಒಂದೇ ಒಂದು ಲೈಬ್ರರಿ ನಿರ್ಮಿಸಲು ಆಗಲಿಲ್ಲ. ಲೈಬ್ರರಿಗೆ ಮೀಸಲಿಟ್ಟ ಹಣವನ್ನು ಹೆಚ್ಚು ಕಮಿಷನ್ ಸಿಗುತ್ತದೆಂಬ ಕಾರಣಕ್ಕೆ ರಸ್ತೆ ಕಾಮಗಾರಿ ಹಾಕಿಕೊಂಡ ಈತ ಯಾವ ಸೀಮೆ ಶಾಸಕ ಎಂದು ವ್ಯಂಗ್ಯವಾಡಿದರು.

ತಾಲೂಕಿನಲ್ಲಿ ನಡೆದಿರುವ ಚಿರತೆ ಪ್ರಕರಣದ ಬಗ್ಗೆ ವಿಷಾದವಿದೆ. ನಡೆಯಬಾರದ ಘಟನೆ ನಡೆದು ಹೋಗಿದೆ. ಚಿರತೆ ದಾಳಿಗೆ ಮೊದಲ ಸಾವಾದಾಗ ಶಾಸಕರು ಜವಾಬ್ದಾರಿಯಾಗಿ ಕಾರ್ಯ ನಿರ್ವಹಿಸಿದ್ದರೆ 3 ಅಮೂಲ್ಯ ಜೀವ ಉಳಿಸಬಹುದಿತ್ತು. ಆದರೆ ಆತನ ಬೇಜವಾಬ್ದಾರಿಯಿಂದ ಮೃತ ಕುಟುಂಬದವರು ಕಷ್ಟ ಅನುಭವಿಸುವಂತಾಗಿದೆ ಹಾಗಾಗಿ ಘಟನೆ ಬಗ್ಗೆ ಉಸ್ತುವಾರಿ ಸಚಿವರು ಹಾಗೂ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಸರ್ಕಾರದಿಂದ ದೊರಕಬಹುದಾದ ಸವಲತ್ತುಗಳನ್ನು ಕೊಡಿಸಲು ಪ್ರಯತ್ನಿಸುತ್ತೇನೆ. ಈಗ ಸರ್ಕಾರದಿಂದ ಕೊಡುತ್ತಿರುವ 15 ಲಕ್ಷ ರೂ.ಗಳ ಪರಿಹಾರವನ್ನು ಕುಟುಂಬಸ್ಥರಿಗೆ ಒಂದೇ ಕಂತಿನಲ್ಲಿ ದೊರಕಲು ಒತ್ತಾಯಿಸುತ್ತೇನೆ ಎಂದರು.



ಶ್ರೀಕ್ಷೇತ್ರ ಸುತ್ತೂರಿನಲ್ಲಿ ಶ್ರೀಶಿವರಾತ್ರಿ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಮಹದೇಶ್ವರ ಕೊಂಡೋತ್ಸವ ನಡೆಯಿತು.



ಸರಗೂರು ವಿವಿಧೋದ್ದೇಶ ನಿವೇಶನ ಗೃಹ ನಿರ್ಮಾಣ ಸಹಕಾರ ಸಂಘದ ನೂತನ ದಿನದರ್ಶಿಕೆಯನ್ನು ಶಾಸಕ ಅನಿಲ್ ಚಿಕ್ಕಮಾದು ಬಿಡುಗಡೆಗೊಳಿಸಿದರು. ಈ ವೇಳೆ ಸಂಘದ ಅಧ್ಯಕ್ಷ ಹೆಚ್.ಜೆ.ಸುರೇಶ್, ಪಪಂ ಮುಖ್ಯಾಧಿಕಾರಿ ಕೆ.ಪಿ.ವಸಂತಕುಮಾರಿ, ಸಂಘದ ಅಧ್ಯಕ್ಷ ಹೆಚ್.ಜೆ.ಸುರೇಶ್, ಗೌರವಾಧ್ಯಕ್ಷ ವೆಂಕಟೇಶ್,ಪ್ರಸಾದ್, ಉಪಾಧ್ಯಕ್ಷ ಜಯಕುಮಾರ್, ಪ್ರಧಾನ ಕಾರ್ಯದರ್ಶಿ ವಸಂತ್ ಪಾಟೀಲ್, ಕಾನೂನು ಸಲಹೆಗಾರ ರೂಪೇಶ್ ಕುಮಾರ್, ನಿರ್ದೇಶಕರಾದ ಸತೀಶ್, ಪಪಂ ಸದಸ್ಯ ಶ್ರೀನಿವಾಸ್, ಮಾಜಿ ಸದಸ್ಯ ರಂಗನಾಥ್, ಎಸ್.ಎಂ.ನಾಗಯ್ಯ ಹಾಗೂ ಸಿದ್ದರಾಜು, ಸೋಮೇಶ್, ಗೋಪಾಲ್, ಆನಂದ್, ಸುಮಿತ್ರಾ, ಬಿಲ್ಲಯ್ಯ, ಉಮೇಶ್, ದರ್ಶನ್, ರಮೇಶ್, ಸೋಮಣ್ಣ ಹಾಗೂ ಸಂಘದ ಸರ್ವ ಸದಸ್ಯರು, ಇನ್ನಿತರರಿದ್ದರು.

ಕಂಪಲಾಪುರದಲ್ಲಿ ಸಾರ್ವಜನಿಕ ಶೌಚಾಲಯ ಉದ್ಘಾಟನೆ

ಕಂಪಲಾಪುರ, ಜ.25– ಗ್ರಾಮಸ್ಥರ ಹಲವು ವರ್ಷಗಳ ಬೇಡಿಕೆಯಾಗಿದ್ದ ಸಾರ್ವಜನಿಕ ಶೌಚಾಲಯ ಇಲ್ಲಿನ ಬಸ್ ನಿಲ್ದಾಣದ ಪಕ್ಕದಲ್ಲಿ ಬುಧವಾರ ಲೋಕಾರ್ಪಣೆಗೊಂಡಿತು. ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿ ಸಿ.ಆರ್.ಕೃಷ್ಣಕುಮಾರ್ ಅವರ ಮಾರ್ಗದರ್ಶನದಲ್ಲಿ ಗ್ರಾಮ ಪಂಚಾಯಿತಿ ಪರಿಶ್ರಮದಿಂದ 3 ಲಕ್ಷ ರೂ ವೆಚ್ಚದಲ್ಲಿ ನಿರ್ಮಾಣಗೊಂಡಿದೆ. ಗ್ರಾಪಂ ಅಧ್ಯಕ್ಷೆ ಮಮತ ತಮ್ಮಯ್ಯ ಉದ್ಘಾಟಿಸಿದರು.

ಕಂಪಲಾಪುರ. ರಾಷ್ಟ್ರೀಯ ಹೆದ್ದಾರಿಯಲ್ಲಿ ಇರುವ ದೊಡ್ಡ ಗ್ರಾಮವಾಗಿದ್ದು ಇಲ್ಲಿಂದ ಮೈಸೂರು, ಬೆಂಗಳೂರು, ಮಂಗಳೂರು, ಕೆ.ಆರ್.ನಗರ ಹಾಸನ ಈ ಕಡೆಗಳಿಗೆ ಸಾರ್ವಜನಿಕರು ಪ್ರಯಾಣಿಸುತ್ತಾರೆ. ಜೊತೆಗೆ ಅಲಿಂದೆಲ್ಲ ಗ್ರಾಮಕ್ಕೆ ಬರುತ್ತಾರೆ. ಇವರಿಗೆ ಶೌಚಾಲಯವಿಲ್ಲದೆ ತೊಂದರೆಯಾಗಿತ್ತು. ಅದರಲ್ಲೂ ಮಹಿಳೆಯರಿಗಂತೂ ತುಂಬಾ ಸಮಸ್ಯೆಯಾಗಿತ್ತು. ಇದಲ್ಲವನ್ನು ಗಮನಿಸಿ ಇದೀಗ ಶೌಚಾಲಯ ನಿರ್ಮಿಸಲಾಗಿದೆ. ನೀರಾವರಿ ಇಲಾಖೆಯ ಎಇಇ ಹಿತೇಂದ್ರ, ತಾ. ಆರೋಗ್ಯಾಧಿಕಾರಿ ಡಾ. ಶರತ್ ಬಾಬು, ವೈದ್ಯಾಧಿಕಾರಿ ಡಾ.ಪ್ರಸನ್ನಕುಮಾರ್, ಗ್ರಾಪಂ ಪಿಡಿಒ ಎಸ್.ಆರ್.ಪರಮೇಶ್, ಕಾರ್ಯದರ್ಶಿ ಸುಷ್ಮಾ, ಸುಮಿತ್ರಾ, ಮುಖಂಡ ಪ್ರಕಾಶ್‌ಗೌಡ, ಗ್ರಾಪಂ ಸದಸ್ಯರಾದ ಚಂದ್ರು, ಶ್ರೀಪತಿ, ಸೋಮು, ಮಂಜು, ನಾಗರಾಜ್, ಶೀಲಾ, ಸುಮ, ರಾಣಿ, ಕವಿತಾ, ಪ್ರತಿಭಾ, ಸಣ್ಣತಮ್ಮಯ್ಯ, ಜೆಇ ಚಂದ್ರಶೇಖರ್, ಗುತ್ತಿಗೆದಾರ ಸುಹೇಬ್ ಸೇರಿದಂತೆ ಮತ್ತಿತರರು ಹಾಜರಿದ್ದರು



ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೈಸೂರು ಮಿತ್ರ

ಗುರುವಾರ 26 ಜನವರಿ 2023

ಪುಟ III

ಗಣರಾಜ್ಯೋತ್ಸವ ವಿಶೇಷ ಎಕ್ಸ್‌ಟ್ರಾ ಇನ್ನಿಂಗ್ಸ್



ದೇಶವನ್ನಾಳುವವನಿಗೆ ಬೇಕಾದುದೇನು?

> “ಎಲೈ ಸಾರ್ವಭೌಮನೇ, ನಿನ್ನ ರಾಷ್ಟ್ರವನ್ನು ಈ ದೇವತೆಗಳು ಭದ್ರವಾಗಿ, ಶಾಶ್ವತವಾಗಿರಿಸಲಿ. ಸಾಮ್ರಾಟ್ ಆದ ವರುಣ, ಜ್ಞಾನದಾಯಕ ಬೃಹಸ್ಪತಿ, ಕ್ಷಾತ್ರಗುಣ ಸಂಪನ್ನ ಇಂದ್ರ, ಬ್ರಹ್ಮತತ್ತ್ವದ ಸಾಕಾರಮೂರ್ತಿ ಅಗ್ನಿ –ಇವರೆಲ್ಲರ ಆಶೀರ್ವಾದ ನಿನಗೆ ಸದಾ ಇರಲಿ. ಇವರು ನಿನ್ನನ್ನು ರಕ್ಷಿಸಿ ರಾಷ್ಟ್ರವನ್ನು ಎತ್ತಿಹಿಡಿದು ಉನ್ನತಿಗೇರಿಸಲಿ” ಎಂದು ಹೇಳುತ್ತದೆ. ಈ ಮಂತ್ರದ ಸೊಗಸನ್ನು ಇನ್ನೂ ವಿಸ್ತರಿಸಿ ಹೇಳುವುದಾದರೆ– ಇಲ್ಲಿ ವರುಣನೇ ಸಾಮ್ರಾಟ್– ಸಾರ್ವಭೌಮನಾಗಿದ್ದಾನೆ.



ಗ.ನಾ.ಭಟ್ಟ
ಸಂಸ್ಕೃತ ವಿದ್ವಾಂಸ
ಮೊ: 9019376365

ಭಾರತವು ಗಣರಾಜ್ಯವಾಗಿ ಎಪ್ಪತ್ತೆರಡು ವರ್ಷಗಳು ಸಂದಿದೆ. 1949 ನವೆಂಬರ್ 26ರಂದು ಸಂವಿಧಾನವನ್ನು ಅಂಗೀಕರಿಸಲಾಯಿತು. ಎರಡೇ ತಿಂಗಳಲ್ಲಿ, 1950 ಜನವರಿ 26ರಂದು ಅದನ್ನು ಜಾರಿಗೊಳಿಸಲಾಯಿತು. ಆ ದಿನವೇ ಗಣರಾಜ್ಯೋತ್ಸವ. ನಮ್ಮ ಈಗಿನ ರಾಜ್ಯ ನಿಬಂಧನೆಯನ್ನು ರಚಿಸಿದವರು ದೇಶಾಡಳಿತಕ್ಕೆ ಪ್ರಜಾಪ್ರಭುತ್ವ ಪದ್ಧತಿಯೇ ಶ್ರೇಷ್ಠವೆಂದು ಭಾವಿಸಿ ಅವರು ಅದನ್ನೇ ಸ್ವೀಕರಿಸಿದರು. ಇದಕ್ಕೆ ಪರ್ಯಾಯ ಪದ್ಧತಿಯೆಂದು ಕರೆಯುತ್ತಾರೆ. ಅಂದರೆ Party System. ಈ ಪದ್ಧತಿಯಲ್ಲಿ ಬಹುಮತದಿಂದ ಆರಿಸಿ ಬಂದ ಒಂದು ಪಕ್ಷ ಆಡಳಿತ ಮಾಡುತ್ತದೆ. ಇನ್ನೊಂದು ಪಕ್ಷ ವಿರೋಧ ಪಕ್ಷದಲ್ಲಿದ್ದು ಆಡಳಿತ ಪಕ್ಷದ ಲೋಪ–ದೋಷಗಳನ್ನು ಎತ್ತಿ ತೋರಿಸುತ್ತದೆ. ನಂತರದ ಚುನಾವಣೆಯಲ್ಲಿ ವಿರೋಧ ಪಕ್ಷ ಬಹುಮತವನ್ನು ಗಳಿಸಿದರೆ ಆ ಪಕ್ಷವೇ ರಾಜ್ಯಾಡಳಿತವನ್ನು ಮಾಡುತ್ತದೆ. ಇದೊಂದು ಬಗೆಯ ತಕ್ಕಡಿಯಾಟ. ಇದನ್ನು ಇಂಗ್ಲಿಷಲ್ಲಿ 'The System of Ins and Outs' ಎಂದು ಹೇಳುತ್ತಾರೆ. ಕನ್ನಡದಲ್ಲಿ ಇದನ್ನು 'ಒಳಕ್ಕೂ–ಹೊರಕ್ಕೂ ತಿರುಗುವ ಸರಕಾರ' ಅಥವಾ 'ಏಳು–ಬೀಳುಗಳ ಸರಕಾರ' ಎಂದು ಕರೆಯಬಹುದು.

ಬ್ರಿಟಿಷರ ಆಡಳಿತಕ್ಕೆ ಒಗ್ಗಿದ್ದ ಕಾರಣಕ್ಕೋ ಏನೋ ನಾವು ಇಂಗ್ಲೆಂಡಿನ ಸಂಸದೀಯ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡೆವು. ನಮ್ಮಲ್ಲಿ ಅಂತಹ ವಾತಾವರಣವೇನೂ ಇರಲಿಲ್ಲ. ಆದರೂ ನಾವು ಅದನ್ನು ಅಂಗೀಕರಿಸಿದೆವು. ಇದರಲ್ಲಿ ತಪ್ಪೇನೂ ಇಲ್ಲ. ಆದರೆ ಈ ಪದ್ಧತಿಯಿಂದ ಪ್ರಜಾಪ್ರಭುತ್ವವನ್ನು ನಾವೆಷ್ಟು ಯಶಸ್ವಿಯಾಗಿಸಿದ್ದೇವೆ ಅಂದರೆ ಅದನ್ನು ಹೇಳಿಕೊಳ್ಳುವುದಕ್ಕೇ ನಾಚಿಕೆಯಾಗುತ್ತದೆ.

ಇಂದು ಆಡಳಿತಾರೂಢನಾದವನೇ ನಾಳೆ ವಿರೋಧ ಪಕ್ಷದಲ್ಲಿರುತ್ತಾನೆ. ನಾಳೆ ವಿರೋಧ ಪಕ್ಷದಲ್ಲಿರುವವನೇ ನಾಡಿದ್ದು ಆಡಳಿತ ವಹಿಸಿಕೊಳ್ಳುತ್ತಾನೆ. ಒಬ್ಬರ ಹುಳುಕನ್ನು ಮತ್ತೊಬ್ಬನು ಎತ್ತಿ ತೋರಿಸುತ್ತಾನೆ. ಒಬ್ಬನ ಹಗರಣವನ್ನು ಇನ್ನೊಬ್ಬ ಬಯಲಿಗೆಳೆಯುತ್ತಾನೆ. ಹೀಗೆ ಸೇಡು ತೀರಿಸಿಕೊಳ್ಳಲು ಸಮಯ ಕಾಯುತ್ತಿರುತ್ತಾರೆ. ಸಮಯ ಸಿಕ್ಕಾಗ ಸೇಡು ತೀರಿಸಿಕೊಳ್ಳುತ್ತಾರೆ. ಇದಕ್ಕೆ ಜ್ವಲಂತ ಉದಾಹರಣೆಯೆಂದರೆ ಜಯಲಲಿತಾ ಮತ್ತು ಕರುಣಾನಿಧಿ. ಅವರು ಆಡಳಿತಕ್ಕೆ ಬಂದಾಗ ಒಬ್ಬರು ಇನ್ನೊಬ್ಬರನ್ನು ಜೈಲಿಗೆ ಹಾಕುವುದು ಸರ್ವೇ ಸಾಮಾನ್ಯವಾಗಿತ್ತು.

ಮುಖ್ಯಮಂತ್ರಿ ಪದವಿಗೋ, ಪ್ರಧಾನಮಂತ್ರಿ ಪದವಿಗೋ ನೂರಾರು ಅಭ್ಯರ್ಥಿಗಳು ಹೋರಾಡುವುದನ್ನು ನಾವು ನೋಡುತ್ತಾ ಬಂದಿದ್ದೇವೆ. ಮಂತ್ರಿ ಪದವಿಗೂ ಅದೇ ಹೋರಾಟ ನಡೆಯುತ್ತಿರುತ್ತದೆ. ತಕ್ಕಷ್ಟು ಕಾರಣ ಇರಲಿ, ಇಲ್ಲದಿರಲಿ ಸರಕಾರದಲ್ಲಿ ಹುಳುಕು ಕಂಡುಹಿಡಿಯುವುದು, ಕೊಳೆ–ಕಸ ಎತ್ತಿಹಾಕುವುದು ವಿರೋಧ ಪಕ್ಷದವರ ನಿತ್ಯಕರ್ಮವಾಗಿದೆ. ಕೆಲವು ದಿನಗಳ ಹಿಂದೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಹಾಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರನ್ನು ನಾಯಿಗೆ ಹೋಲಿಸಿದ್ದು, ನಂತರ ಅವರ ಪಕ್ಷದವರು ಅದನ್ನು ಪ್ರತಿಭಟಿಸಿದ್ದು, ಅದಕ್ಕೆ ಸಿದ್ಧರಾಮಯ್ಯನವರು ನಾನು ಆ ಅರ್ಥದಲ್ಲಿ ಹೇಳಿದ್ದಲ್ಲ, ನಾಯಿಯ ನಿಷ್ಠೆ ಎಂಬ ಅರ್ಥದಲ್ಲಿ ಹೇಳಿದ್ದು' ಅಂತ ಹೇಳಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿ. ಅತ್ಯಾಚಾರದ ಆರೋಪ, ಮಾನನಷ್ಟ ಮೊಕದ್ದಮೆ, ಆಸ್ತಿ ಕಬಳಿಕೆ ಆರೋಪ, ಚಾರಿತ್ರ್ಯವಧೆ, ಆಡಳಿತ ಪಕ್ಷಕ್ಕೆ ದಲಿತರ ಬಗ್ಗೆ ಕಾಳಜಿ ಇಲ್ಲ, ಇದು ಶ್ರೀಮಂತರ ಪರವಾದ ಪಕ್ಷ, ಇದು ಕೇಸರೀಕರಣದ ಪಕ್ಷ, ಇದು ದಲಿತರ ಪರ ಪಕ್ಷ, ಹಿಂದುಳಿದವರ ಪಕ್ಷ– ಹೀಗೆ ಒಂದೇ ಎರಡೇ... ನೂರಾರು–ಸಾವಿರಾರು ಆರೋಪ–ಪ್ರತ್ಯಾರೋಪಗಳು, ಸ್ಪರ್ಧೆ–ಪ್ರತಿಸ್ಪರ್ಧೆಗಳು ಪ್ರತಿದಿನವೂ ನಡೆಯುತ್ತಿರುತ್ತವೆ.

ಈ ಪರ್ಯಾಯ ಪದ್ಧತಿ ಅಥವಾ ಪಾರ್ಟಿ ಸಿಸ್ಟಮ್‌ನಲ್ಲಿರುವ ದೊಡ್ಡ ದೋಷವೆಂದರೆ– ಮಂತ್ರಿಗಳು ಒಬ್ಬರಿಗೊಬ್ಬರು ಅನುಕೂಲಕಾರಿಯಾಗಿರುವುದು. ತನಗೆ ಇಷ್ಟವಿಲ್ಲದಿದ್ದರೂ ಮುಖ್ಯಮಂತ್ರಿಯ ಅಭಿಪ್ರಾಯಕ್ಕೆ, ನಿರ್ಣಯಕ್ಕೆ ಬದ್ಧನಾಗಿರುವುದು. ಇಲ್ಲದಿದ್ದರೆ ತನ್ನ ಸ್ಥಾನಚ್ಯುತಿಯಾದೀತು! ಎಂದು ಆತ ಅಂಜುತ್ತಾನೆ. ಮುಖ್ಯಮಂತ್ರಿಯೂ ಅಷ್ಟೇ! ತನ್ನ ಸಹೋದ್ಯೋಗಿಗಳ ಜೊತೆ ಪ್ರಸನ್ನವಾಗಿ ನಡೆದುಕೊಳ್ಳಬೇಕಾಗುತ್ತದೆ. ಅವನೇನಾದರೂ ಇತರರ ಎದುರಾಕಿಕೊಂಡರೆ ತನ್ನ ಸ್ಥಾನಕ್ಕೆ ಸಂಚಕಾರ ಬರಬಹುದು! ಒಟ್ಟಿನಲ್ಲಿ ಈ ನಡವಳಿಕೆ ಅನ್ಯೋನ್ಯ ಪ್ರಯೋಜನಕಾರಿಯಾಗಿ ಪ್ರಜಾಹಿತಕ್ಕೆ ಅನುಕೂಲವಾಗುವ ಬದಲು ಪ್ರತಿಕೂಲವೇ ಆಗಿಬಿಡುತ್ತದೆ. ಯಾವುದೇ ಕೆಲಸಗಳೂ ನೆಟ್ಟಗೆ ನಡೆಯುವುದಿಲ್ಲ.

ಇನ್ನು 'ಶಾಸನಸಭೆ', ಅರ್ಥಾತ್ 'ಸಂಸತ್‌ಸಭೆ'ಯಲ್ಲೂ ಇದೇ ಗೋಳು. ಎರಡೂ ಸಭೆಗಳಿಗೂ ಆಡಳಿತ ಪಕ್ಷದವರೂ, ವಿರೋಧಪಕ್ಷದವರೂ ಬಹುತೇಕ ಗೆದ್ದು ಬಂದಿರುತ್ತಾರೆ. ಎರಡು ಕಡೆಯವರೂ ತಮ್ಮ ತಮ್ಮ ಬೇಳೆ ಬೇಯಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ. ಒಬ್ಬೊಬ್ಬ ಮಂತ್ರಿಗೂ ಅಂಟಿಕೊಂಡಂತೆ ಅವನ ಚೇಲಾಗಳೂ, ಬಂಧುಗಳೂ, ಸ್ನೇಹಿತರೂ, ಅವರಿಗೆ ಬೇಕಾದವರೂ ಇರುತ್ತಾರೆ. ಸೋದರಳಿಯನಿಗೆ ಒಂದು ನೌಕರಿ, ಯಾವುದೋ ಉದ್ಯಮಕ್ಕೆ ಲೈಸೆನ್ಸು, ಮೊಮ್ಮಗನಿಗೆ ಒಂದು ಮೆಡಿಕಲ್ ಸೀಟು, ತನ್ನ ಹತ್ತಿರದ ಬಂಧುವಿಗೆ ಒಂದು ಕಂಟ್ರಾಕ್ಟು... ಹೀಗೆ ಅನ್ಯೋನ್ಯ ಪ್ರಯೋಜನ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ನಡುವೆ ಇರುತ್ತವೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯ ಒಂದು ನೋಟ.

ಇವುಗಳ ಮಧ್ಯೆ ಪ್ರಜಾಪ್ರತಿನಿಧಿಯೆನಿಸಿಕೊಂಡವನು ತಾನು ಗೆದ್ದು ಬಂದರೆ ಊರಿಗೆ ಡ್ರೈನೇಜು ಮಾಡಿಸುತ್ತೇನೆ, ರಸ್ತೆ ಮಾಡಿಸುತ್ತೇನೆ, ಶಾಲೆಯನ್ನು ನಿರ್ಮಿಸುತ್ತೇನೆ, ಆಸ್ಪತ್ರೆ ಕಟ್ಟಿಸಿಕೊಡುತ್ತೇನೆ ಎಂದೆಲ್ಲಾ ವಾಗ್ದಾನ ಮಾಡಿರುತ್ತಾನೆ; ಭರವಸೆ ಕೊಟ್ಟಿರುತ್ತಾನೆ. ಆತ ಚುನಾವಣೆಯಲ್ಲಿ ಗೆದ್ದೂ ಬರುತ್ತಾನೆ ಆಡಳಿತ ಪಕ್ಷವೇ ಇರಲಿ, ವಿರೋಧ ಪಕ್ಷವೇ ಇರಲಿ, ಆತ ಆಡಳಿತ ಪಕ್ಷದಿಂದ ಹಣ ಮಂಜೂರಾತಿ ಮಾಡಿಸಿಕೊಂಡು ಕಳಪೆ ಕಾಮಗಾರಿ ಮಾಡಿಸಿ ಅದರಲ್ಲಿ ಒಂದಿಷ್ಟು ದುಡ್ಡು ಹೊಡೆಯುತ್ತಾನೆ. ಇದನ್ನೇ ಭ್ರಷ್ಟಾಚಾರ ಅನ್ನುವುದು.

ಇದರ ಹೊರತಾಗಿ ಲಂಚಾವತಾರವನ್ನು ಕೇಳುವುದೇ ಬೇಡ. ಇಡೀ ಭಾರತವನ್ನು ವ್ಯಾಪಿಸಿದ ಕಬಂಧಬಾಹು ಇದು. ಸರಕಾರದ ಯಾವುದೇ ವಿಭಾಗದಲ್ಲಿ ಕೆಲಸ ಮಾಡುವವರು ತಳದಿಂದ ತುದಿಯವರೆಗೆ ಲಂಚದ ಹಣವನ್ನು ಹಂಚಿಕೊಳ್ಳುವ ಸಂಪ್ರದಾಯವಿದೆ. ಇದು ನಗದು ರೂಪದ ಲಂಚವಾದರೆ ಮತ್ತೊಂದು ಬಗೆಯ ಲಂಚವಿದೆ. ಅದರ ರೂಪ ವಿಧವಿಧ. ಅದರ ಅವತಾರ ನೋಡುವುದಾದರೆ ಚುನಾವಣೆ ಹತ್ತಿರ ಬರಬೇಕು. ಚುನಾವಣೆಗೆ ನಿಂತವನು ತಾನು ಆರಿಸಿಬರುವುದಕ್ಕೆ ಏನೆಲ್ಲಾ ಆಮಿಷವನ್ನೊಡ್ಡುತ್ತಾನೆ ಅಂದರೆ ಅದು ಊಹಾತೀತವಾದುದು. ತಾನು ಗೆದ್ದು ಬಂದರೆ 'ಪ್ರತಿ ಕುಟುಂಬಕ್ಕೆ ಇಂತಿಷ್ಟು ಯೂನಿಟ್ ಕರೆಂಟು ಉಚಿತವಾಗಿ ಕೊಡುತ್ತೇನೆ' ಎಂದು ಭರವಸೆ ಕೊಡುತ್ತಾನೆ. ಜೊತೆಗೆ ಪ್ರತಿ ಮಹಿಳೆಗೆ 8 ಗ್ರಾಂ. ಚಿನ್ನ, ಕಂಪ್ಯೂಟರ್, ಲ್ಯಾಪ್‌ಟಾಪ್, ಟೆಲಿವಿಷನ್ ಮುಂತಾದುವನ್ನು ಉಚಿತವಾಗಿ ಹಂಚುತ್ತಾನೆ. ಇದಕ್ಕೆಲ್ಲಾ ಅವನಿಗೆ ನೂರಾರು ಕೋಟಿ ಹಣ ಬೇಕಾಗುತ್ತದೆ. ಗೆದ್ದ ಕೂಡಲೇ ಆತ ಪ್ರಪ್ರಥಮವಾಗಿ ಮಾಡುವುದೇ ಹಣ ಮಾಡುವ ದಂಧೆ. ಇಂಥಹವರು ನಮ್ಮ ದೇಶವನ್ನು ಆಳುವವರು.

ಇಂತಹವರಿಗೆ ಒಂದು ನೀತಿ ಸಂಹಿತೆಯ ಅಗತ್ಯವಿದೆಯೆ. ಒಂದು ಆದರ್ಶದ, ಧ್ಯೇಯದ ಪಾಠ ಬೇಕೇ. ಇದನ್ನು ಕುರಿತು ನಮ್ಮ ಪ್ರಾಚೀನ ಸಾಹಿತ್ಯ ಏನಾದರೂ ಹೇಳಿದೆಯೆ ಎಂಬ ಪ್ರಶ್ನೆ ಹುಟ್ಟದೇ ಇರಲಾರದು. ಜನವರಿ 26ರಂದು “ಗಾಂಧಿ ಸ್ವಾತಂತ್ರ್ಯ ತಂದುಕೊಟ್ಟರು; ನೆಹರೂ ಭಾರತದ ಪ್ರಥಮ ಪ್ರಧಾನಿಯಾದರು; ಡಾ. ಅಂಬೇಡ್ಕರ್ ಸಂವಿಧಾನ ರಚಿಸಿದರು” ಎಂದು ಹೇಳುವ ನೈತಿಕತೆ ನಮ್ಮಲ್ಲಿ ಉಳಿದಿದೆಯಾ...

ಅದಕ್ಕೆ ಉತ್ತರವಾಗಿ ಮೊಟ್ಟಮೊದಲು ನಾವು– ಆ ಪಕ್ಷದವರು ಈ ಪಕ್ಷದವರು ಎಂಬ ಹಣೆಚೀಟಿಯನ್ನು ಅಂಟಿಸಿಕೊಂಡು ಜಗಳ ಮಾಡುವುದನ್ನು ನಿಲ್ಲಿಸಬೇಕು. ಚುನಾವಣೆಯಲ್ಲಿ ಆರಿಸಿ ಬರುವುದಕ್ಕಾಗಿ, ಗುರುತಿಗಾಗಿ ಒಂದು ಪಕ್ಷ, ಒಂದು ಚಿಹ್ನೆ ಅತ್ಯವಶ್ಯವಾಗಿರುತ್ತದೆ. ಅದರ ಹಿನ್ನೆಲೆಯಲ್ಲಿ ಯಾವುದೇ ಪಕ್ಷ ಆರಿಸಿ ಬರಲಿ, ಬಿಡಲಿ. ಆರಿಸಿ ಬಂದ ಮೇಲೆ ಆ ಪಕ್ಷದವರನ್ನು (ಆಡಳಿತ ಪಕ್ಷ, ವಿರೋಧ ಪಕ್ಷ ಎರಡಕ್ಕೂ ಅನ್ವಯ) ವರ್ಷವಿಡೀ ದೂಷಿಸುತ್ತಿರುವುದು ಖಂಡಿತಕ್ಕೂ ಶೋಭೆ ತರುವ ವಿಷಯವಲ್ಲ. ಅದನ್ನು ಮಾಡಬಾರದು. ಎಲ್ಲಾ ಪಕ್ಷದವರ ಮನಸ್ಸಿನಲ್ಲೂ ಇರಬೇಕಾದುದು ನಾವು ಭಾರತೀಯರು ಎಂಬ ಭಾವನೆ.

ನಮ್ಮ ದುರದೃಷ್ಟಕ್ಕೆ ಈಗ ನಾವು 'ಹಿಂದೂ'ಗಳು ಅಂತ ಹೇಳಿಕೊಳ್ಳುವುದೇ ಒಂದು ಅಪರಾಧ ಅನ್ನುವ ಸ್ಥಿತಿಗೆ ತಂದಿಟ್ಟಿದ್ದಾರೆ ಕೆಲವು ರಾಜಕೀಯ ಪಕ್ಷಗಳು, ರಾಜಕಾರಣಿಗಳು ಮತ್ತು ವಿಕೃತ ಬುದ್ಧಿಜೀವಿಗಳು. ಅದೇನೇ ಇರಲಿ. ದೇಶಾಡಳಿತ ನಡೆಸುವವನಿಗೆ ಮೊದಲು ಬೇಕಾದುದು ಭಾರತೀಯತೆ, ಮಾನವೀಯತೆ ಮತ್ತು ಸಮಗ್ರ ರಾಷ್ಟ್ರಪ್ರಜ್ಞೆ, ಈ ದೇಶ ಅಖಂಡವಾದುದು ಎಂಬ ಮಹೋನ್ನತ ಚಿಂತನೆ. ಆಮೇಲೆ ಪಕ್ಷ, ಜಾತಿ, ಕೋಮು, ವರ್ಗ ಇತ್ಯಾದಿ ಭಾವಗಳು ಬರಬೇಕು.

ವಿರೋಧ ಪಕ್ಷದವರು ವಿರೋಧಕ್ಕಾಗಿ ವಿರೋಧ ಎಂಬ ಮನೋಭಾವವನ್ನು ಮೊದಲು ಬಿಡಬೇಕು. ಯಾವುದೇ ಪಕ್ಷದಲ್ಲಿ ಅಥವಾ ಒಬ್ಬನಲ್ಲಿ ದೋಷ ಹುಡುಕುವುದೆಂದರೆ, ಕಸ–ಕೊಳೆ ಹುಡುಕುವುದೆಂದರೆ ಬಹಳ ಸುಲಭ. ಅದೇ ಒಬ್ಬನಲ್ಲಿ ಉತ್ತಮ ಗುಣವನ್ನು ಕಾಣಬೇಕೆಂದರೆ ನಮಗೆ ಬಹಳ ಔದಾರ್ಯ ಬೇಕಾಗುತ್ತದೆ; ಹೃದಯ ವೈಶಾಲ್ಯ ಇರಬೇಕಾಗುತ್ತದೆ; ತಿರಸ್ಕಾರ ಬುದ್ಧಿಗಿಂತ ಅಂಗೀಕಾರ ಬುದ್ಧಿಯಿರಬೇಕಾಗುತ್ತದೆ.

ಇದಕ್ಕಾಗಿಯೇ ಹೇಳಿದ್ದು– ರಾಷ್ಟ್ರವನ್ನು ಆಳುವವನಿಗೆ ಮೊದಲು ರಾಷ್ಟ್ರಪ್ರಜ್ಞೆ ಇರಬೇಕು; ರಾಷ್ಟ್ರೀಯತೆ, ಭಾರತೀಯತೆ ಇರಬೇಕು ಅಂತ. ರಾಷ್ಟ್ರ ಕಟ್ಟುವುದಕ್ಕೆ, ಬೆಳೆಸುವುದಕ್ಕೆ ಬೇಕಾದ ಒಂದು ಒಳ್ಳೆಯ ಓದು, ಒಂದು ಸಂಸ್ಕಾರ, ಒಂದು ಸಂಸ್ಕೃತಿ ಇಲ್ಲದವರೇ ಈ ದೇಶದ ನಾಯಕರಾಗುತ್ತಿರುವುದು ಈ ದೇಶದ ದುರ್ದೈವವಲ್ಲದೆ ಇನ್ನೇನು?

ನೇತಾಜಿ ಸುಭಾಷ್‌ಚಂದ್ರ ಬೋಸ್‌ರಿಗೆ ರಾಷ್ಟ್ರ ಕಟ್ಟುವುದಕ್ಕೆ ಹತ್ತೊಂಭತ್ತನೆ ಶತಮಾನದ ದೇಶಭಕ್ತ, ರಾಷ್ಟ್ರೀಯತೆಯ ಉದ್ದಂಡ ಪ್ರತಿಪಾದಕ, ಇಟಲಿಯ ಗೈಸೆಪ್ಪೆ ಮಜ್ಜಿನಿ (Giuseppe Mazzini) ಪ್ರಭಾವ ಬೀರಿದ್ದರು. ಇಟಲಿಯ ಸ್ವಾತಂತ್ರ್ಯಪರ ಜನವರ್ಗಗಳನ್ನು ಸಂಘಟಿಸುವುದರಲ್ಲಿ ತನ್ನ ಜೀವನವನ್ನೆಲ್ಲ ಸವೆಸಿದ ಮಜ್ಜಿನಿಯ ಹೆಸರು ಉದ್ದಾಮ ದೇಶಭಕ್ತರ ಶ್ರೇಣಿಯಲ್ಲಿ ಮೊದಲಿಗೇ ಬರುತ್ತದೆ. ಸ್ವಾತಂತ್ರ್ಯವೀರ ಸಾವರ್ಕರ್ ಕೂಡ ಮಜ್ಜಿನಿಯಿಂದ ಗಾಢವಾಗಿ ಪ್ರಭಾವಿತರಾಗಿದ್ದರು. ಇಂತಹ ಮಹನೀಯರಿಂದ ಪ್ರಭಾವಿತರಾಗಿದ್ದವರು ನೇತಾಜಿಯವರು.

ಡಿ.ವಿ.ಗುಂಡಪ್ಪನವರು 'ಸಾಹಿತ್ಯ ಶಕ್ತಿ' ಎಂಬ ತಮ್ಮ ವೈಚಾರಿಕ ಪ್ರಬಂಧದಲ್ಲಿ 'ರಾಷ್ಟ್ರಕನಿಗೆ ಸಾಹಿತ್ಯಬೇಕೆ?' ಎಂದು ಪ್ರಶ್ನಿಸಿ ಒಂದು ವಿಚಾರಪೂರ್ಣ ಪ್ರಬಂಧವನ್ನೇ ಬರೆದಿದ್ದಾರೆ. “ಜೀವನೋತ್ಕರ್ಷವನ್ನು ಕಾಲ್ಪನಿಕ ಪ್ರಪಂಚದಲ್ಲಿ ತೋರುವವನು ಕವಿ, ವಾಸ್ತವಿಕ ಪ್ರಪಂಚದಲ್ಲಿ ತೋರಬಲ್ಲವನು ರಾಜ್ಯಕರ್ಮಿ. ಕಾವ್ಯ–ರಾಜ್ಯಗಳೆರಡೂ ಪರಸ್ಪರ ಸಹಕಾರಿಗಳು. ಎರಡೂ ಜೀವಸಂಸ್ಕಾರಕಾರಿಗಳು. ಕಾವ್ಯವು ನಮಗೆ ಅಂತರನುಭವಗಳನ್ನೊದಗಿಸಿ ಆ ಮೂಲಕ ಆತ್ಮವನ್ನು ತಿದ್ದಯತ್ನಿಸುತ್ತದೆ. ರಾಜ್ಯವು ಬಹಿರ್ನಿಬಂಧನೆಗಳನ್ನು ವಿಧಿಸಿ ಆ ಮೂಲಕ ಆತ್ಮವನ್ನು ಶಿಕ್ಷಿಸುವೆನೆನ್ನುತ್ತದೆ” ಎಂದು ಅವರು ಬರೆದಿದ್ದಾರೆ. ಮುಂದುವರಿದು ಅವರು ಹೇಳುತ್ತಾರೆ– “ಕಾವ್ಯ ವ್ಯಾಸಂಗವು ಸಾರ್ವಜನಿಕನಿಗೆ ಪೀಠಿಕಾರೂಪವಾಗಿ ಇರಬೇಕಾದ ಸಿದ್ಧತೆಯಾಗಿದೆ. ನಳಚರಿತ್ರೆಯನ್ನೋದದವನು, ನಳನ ವಿರಹವನ್ನನುಭವಿಸದವನು, ದಮಯಂತಿಯೊಡನೆ ಮರುಗದವನು; ರಾಮಾಯಣವನ್ನೋದದವನು, ಭರತನ ತ್ಯಾಗವನ್ನು ಧ್ಯಾನಿಸದವನು; ಭಾರತವನ್ನೋದದವನು; ಭೀಷ್ಮನ ಸತ್ತ್ವಶುದ್ಧಿಗೆ ತಲೆಬಾಗದವನು, ಧರ್ಮರಾಯನ ಸಂಕಟವನ್ನು ಅನುಭವಿಸದವನು; ರನ್ನನ ದುರ್ಯೋಧನನ ವೀರಪತನದಲ್ಲಿ ಕನಿಕರಿಸದವನು; ಕುಮಾರವ್ಯಾಸನ ಉತ್ತರ ಪ್ರತಾಪಘೋಷಣೆಯಿಂದ ನಗದವನು– ಇಂತಹವರಿಗೆ ಎಷ್ಟರಮಟ್ಟಿಗೆ ಹೃದಯ ವೈಶಾಲ್ಯವಿದ್ದೀತು! ಅವರು ಯಾವ ನೀತಿಸೂಕ್ಷ್ಮವನ್ನು ತಳಮಟ್ಟ ಕಾಣಬಲ್ಲರು ಮನುಷ್ಯಾಂತರಂಗದ ಮರ್ಮ ಅವರಿಗೆ ಎಷ್ಟುಮಾತ್ರ ತಿಳಿದಿದ್ದೀತು” ಎಂದು ಪ್ರಶ್ನಿಸುತ್ತಾರೆ.

ಅಂದರೆ ರಾಜ್ಯಾಡಳಿತ ನಡೆಸುವವನಿಗೆ ಕಾವ್ಯ ವ್ಯಾಸಂಗ ಅತ್ಯಗತ್ಯ ಎಂದಂತಾಯಿತು. ರಾಜ್ಯಕರ್ಮಿಯು ರಾಮಾಯಣದಿಂದಲೋ, ಮಹಾಭಾರತದಿಂದಲೋ, ವೇದೋಪನಿಷತ್ತುಗಳಿಂದಲೋ, ಚಾಣಕ್ಯನ ನೀತಿಸೂತ್ರಗಳಿಂದಲೋ ಪ್ರಭಾವಿತನಾಗಿ ರಾಜ್ಯಾಡಳಿತ ನಡೆಸಬೇಕು; ಲೋಕಹಿತವನ್ನು ಸಾಧಿಸಬೇಕು ಅನ್ನುವುದು ಈ ಎಲ್ಲ ಹಿರಿಯರ ಸ್ವಾನುಭವದ ಮಾತು. ಈ ಎಲ್ಲದರ ಹಿನ್ನೆಲೆಯಲ್ಲಿ ರಾಷ್ಟ್ರದ ಬಗ್ಗೆ ವೇದ ಏನು ಹೇಳಿದೆಯೆಂದು ನೋಡಿದರೆ ನಮ್ಮ ರಾಜಕಾರಣಿಗಳ ಕಣ್ಣು ತೆರೆದೀತು! ರಾಷ್ಟ್ರಭಕ್ತಿಯೂ ಉದಿಸೀತು! ಋಗ್ವೇದದ ಒಂದು ಪ್ರಸಿದ್ಧ ಮಂತ್ರ–

ಧ್ರುವಂ ತೇ ರಾಜಾ ವರುಣೋ ಧ್ರುವಂ ದೇವೋ ಬೃಹಸ್ಪತಿಃ ।
ಧ್ರುವಂ ತ ಇಂದ್ರಶ್ಚಾಗ್ನಿಶ್ಚ ರಾಷ್ಟ್ರಂ ಧಾರಯಾತಾಂ ಧ್ರುವಮ್ ॥

“ಎಲೈ ಸಾರ್ವಭೌಮನೇ, ನಿನ್ನ ರಾಷ್ಟ್ರವನ್ನು ಈ ದೇವತೆಗಳು ಭದ್ರವಾಗಿ, ಶಾಶ್ವತವಾಗಿರಿಸಲಿ. ಸಾಮ್ರಾಟ್ ಆದ ವರುಣ, ಜ್ಞಾನದಾಯಕ ಬೃಹಸ್ಪತಿ, ಕ್ಷಾತ್ರಗುಣ ಸಂಪನ್ನ ಇಂದ್ರ, ಬ್ರಹ್ಮತತ್ತ್ವದ ಸಾಕಾರ ಮೂರ್ತಿ ಅಗ್ನಿ–ಇವರೆಲ್ಲರ ಆಶೀರ್ವಾದ ನಿನಗೆ ಸದಾ ಇರಲಿ. ಇವರು ನಿನ್ನನ್ನು ರಕ್ಷಿಸಿ ರಾಷ್ಟ್ರವನ್ನು ಎತ್ತಿಹಿಡಿದು ಉನ್ನತಿಗೇರಿಸಲಿ” ಎಂದು ಹೇಳುತ್ತದೆ. ಈ ಮಂತ್ರದ ಸೊಗಸನ್ನು ಇನ್ನೂ ವಿಸ್ತರಿಸಿ ಹೇಳುವುದಾದರೆ– ಇಲ್ಲಿ ವರುಣನೇ ಸಾಮ್ರಾಟ್– ಸಾರ್ವಭೌಮನಾಗಿದ್ದಾನೆ. ಅವನೇ ಜಗತ್ತನ್ನು ಆಳುವವ. ಧರ್ಮಶಾಸ್ತ್ರಪ್ರವರ್ತಕನೂ, ಬುದ್ಧಿಪ್ರದನೂ, ಅಚಿಂತ್ಯಶಕ್ತಿ–ಯುಕ್ತಿಯ ಪ್ರವರ್ತಕನೂ ಆದ ಬೃಹಸ್ಪತಿಯೇ ಇಲ್ಲಿ ಸಚಿವನಾಗಿದ್ದಾನೆ; ಮಂತ್ರಿಯಾಗಿದ್ದಾನೆ ಸೇನಾನೇತಾರನಾಗಿ, ಕ್ಷಾತ್ರಗುಣದ ಸಾಕಾರಮೂರ್ತಿಯಾಗಿ ದೇವೇಂದ್ರ ಇದ್ದಾನೆ. ಬ್ರಹ್ಮಶಕ್ತಿಯ ಮೂರ್ತರೂಪವಾಗಿ ಅಗ್ನಿ–ಹವ್ಯವಾಹನ ಇದ್ದಾನೆ. ಇವರೆಲ್ಲ ಇದ್ದ ಮೇಲೆ ರಾಷ್ಟ್ರಾಭ್ಯುದಯಕ್ಕೆ ಇನ್ನೇನು ಕೊರತೆ ಎಂಬುದು ಇದರ ಇಂಗಿತ. ಈ ತತ್ತ್ವವೇ ಇಂದು ನಮ್ಮ ದೇಶವನ್ನು ಆಳುವವರಿಗೆ ಪ್ರೇರಣೆಯಾಗಬೇಕು ಎಂಬುದು ಈ ಮಂತ್ರದ ಸಾಂಕೇತಿಕಾರ್ಥ.

ವೇದಮಂತ್ರಗಳನ್ನು ಹಳಿಯುವವರಿಗೆ, ಸನಾತನ ಧರ್ಮವನ್ನು ತೆಗಳುವವರಿಗೆ, ಮಾತು ಮಾತಿಗೆ ಹಿಂದೂತ್ವವನ್ನು ನಿಂದಿಸುವವರಿಗೆ, ಇವುಗಳಲ್ಲಿ ಏನಿದೆ ಎಂದು ಕೇಳುವವರಿಗೆ ಇದೊಂದು ಉತ್ತರ ಅಷ್ಟೇ! ಸದಾ ರಾಷ್ಟ್ರದ್ರೋಹ ಚಿಂತನೆಯಲ್ಲೇ ಇರುವವರಿಗೆ ಕಣ್ಣು ತೆರೆದೀತೇ? ಖಂಡಿತಕ್ಕೂ ಇಲ್ಲ. ಈ ಸಲದ ಗಣರಾಜ್ಯೋತ್ಸವಕ್ಕೆ ಇದೊಂದು ಆತ್ಮಾವಲೋಕನ ಅಷ್ಟೇ!

ರಸ್ತೆ ಅಪಘಾತ: ಜನರಲ್ಲಿ ಜಾಗೃತಿ ಮೂಡಿಸುವ ಅನಿವಾರ್ಯತೆ

ಡಿಸಿ ಡಾ.ಕೆ.ವಿ. ರಾಜೇಂದ್ರ ಮನವರಿಕೆ

ಮೈಸೂರು,ಜ.25– ರಸ್ತೆ ಪರಿಸ್ಥಿತಿ ಸುಧಾರಿಸುತ್ತಿದ್ದಂತೆ ಅಪಘಾತಗಳ ಸಂಖ್ಯೆ ಹೆಚ್ಚುತ್ತಿದೆ. ಆದ್ದರಿಂದ ಜನರಲ್ಲಿ ರಸ್ತೆ ಅಪಘಾತಗಳ ಬಗ್ಗೆ ಮಾಹಿತಿಯನ್ನು ಮತ್ತು ಜಾಗೃತಿಯನ್ನು ಮೂಡಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈ ತಿಂಗಳಲ್ಲಿ 9 ಮಾರಣಾಂತಿಕ ಅಪಘಾತಗಳು ನಡೆದಿದ್ದು ಇವುಗಳಿಗೆ ಸೂಕ್ತವಾದ ಕಾರಣವನ್ನು ಮತ್ತು ಪರಿಹಾರ ಕ್ರಮಗಳ ಬಗ್ಗೆ ಸಮಿತಿ ಮಾಹಿತಿ ನೀಡಬೇಕು ಎಂದು ಸೂಚಿಸಿದರು.

ಉತ್ತಮವಾಗಿಲ್ಲದ ರಸ್ತೆಗಳು, ಮದ್ಯಪಾನ ಮಾಡಿ ವಾಹನ ಓಡಿಸುವುದು, ಸೀಟ್ ಬೆಲ್ಟ್ ಹಾಕದಿರುವುದು, ಸ್ಪೀಡ್ ಡ್ರೈವಿಂಗ್, ವಾಹನ ಚಲಾಯಿಸುವಾಗ ಮೊಬೈಲ್ ಬಳಕೆ ಮಾಡುವುದು, ಗುಣಮಟ್ಟದ ಹೆಲ್ಮೆಟ್ ಧರಿಸದೆ ಇರುವುದು ಮತ್ತು ಸರಿಯಾದ ರೀತಿಯಲ್ಲಿ ಹೆಲ್ಮೆಟ್ ಧರಿಸದೇ ಇರುವುದರಿಂದ ಅಪಘಾತಗಳಾಗುವ ಸಾಧ್ಯತೆ ಹೆಚ್ಚಿವೆ. ಆದ್ದರಿಂದ ಸಂಭವಿಸಿರುವ ಅಪಘಾತಗಳಲ್ಲಿ ಯಾವ ಕಾರಣದಿಂದ ಹೆಚ್ಚು ಅಪಘಾತಗಳಾಗುತ್ತಿವೆ ಎಂಬುದರ ಬಗ್ಗೆ ಸೂಕ್ತ ವರದಿಯನ್ನು ಮತ್ತು ಅವುಗಳನ್ನು ತಡೆಗಟ್ಟಲು ಕೈಗೊಂಡಿರುವ ಪರಿಹಾರ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡುವಂತೆ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಈ ಕುರಿತು 15 ದಿನಕ್ಕೊಮ್ಮೆ ಜೂಮ್ ಮೀಟಿಂಗ್ ಮಾಡಬೇಕು. ಪ್ರತಿ ತಿಂಗಳು ನಡೆಯುವ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಗೆ ತಪ್ಪದೇ ಹಾಜರಾಗಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿ, ಸಭೆಗೆ ಹಾಜರಾಗದ ಇತರ ಇಲಾಖೆಯ ಅಧಿಕಾರಿಗಳಿಗೆ ಶೋಕಾಸ್ ನೋಟಿಸ್ ನೀಡುವಂತೆ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರಾದ ರಾಜು ಅವರಿಗೆ ಆದೇಶಿಸಿದರು.

ಸಭೆಯಲ್ಲಿ ರಾಷ್ಟ್ರೀಯ ಹೆದ್ದಾರಿ ಯೋಜನಾ ನಿರ್ದೇಶಕ ಬಿ.ಟಿ.ಶ್ರೀಧರ, ರಾಷ್ಟ್ರೀಯ ಹೆದ್ದಾರಿ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರ ಎಮ್.ಎಸ್ ರಾಜೇಂದ್ರ ಕುಮಾರ್, ಹುಣಸೂರು ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಪೊಲೀಸ್ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರಲ್ಲಿ ರಾಷ್ಟ್ರೀಯ ಮತದಾರರ ದಿನಾಚರಣೆ

ಜಿಲ್ಲೆಯಲ್ಲಿದ್ದಾರೆ ಲಕ್ಷಕ್ಕೂ ಅಧಿಕ ಯುವ ಮತದಾರರು: 40 ಸಾವಿರ ಮಂದಿ ಈಗಾಗಲೇ ಅಧಿಕೃತ ಪಟ್ಟಿಗೆ ಸೇರ್ಪಡೆ

ಉಳಿದವರ ಸೇರ್ಪಡೆಗೆ ಕ್ರಮ: ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ

ಮೈಸೂರು, ಜ.25 (ಆರ್‌ಕೆಬಿ)– ಮೈಸೂರು ಜಿಲ್ಲೆಯಲ್ಲಿ ಒಂದು ಲಕ್ಷಕ್ಕಿಂತಲೂ ಅಧಿಕ ಯುವ ಮತದಾರರಿದ್ದು, ಈ ಪೈಕಿ ಸುಮಾರು 40 ಸಾವಿರ ಮಂದಿಯ ಹೆಸರು ಮಾತ್ರ ಮತದಾರರ ಪಟ್ಟಿಗೆ ಸೇರ್ಪಡೆಯಾಗಿದೆ. ಉಳಿದವರನ್ನು ಪಟ್ಟಿಗೆ ಸೇರ್ಪಡೆ ಆಗುವಂತೆ ನೋಡಿಕೊಳ್ಳಬೇಕಾಗಿದೆ ಎಂದು ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ರಾಷ್ಟ್ರೀಯ ಮತದಾರರ ದಿನದ ಅಂಗವಾಗಿ ಮೈಸೂರು ಜಿಲ್ಲಾಡಳಿತ, ಮೈಸೂರು ಮಹಾನಗರ ಪಾಲಿಕೆ ಜಂಟಿಯಾಗಿ ಕಲಾಮಂದಿರದಲ್ಲಿ ಬುಧವಾರ ಏರ್ಪಡಿಸಿದ್ದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿ, ಮುಂದಿನ ಚುನಾವಣೆ ಹಿನ್ನೆಲೆಯಲ್ಲಿ ಹಂತ ಹಂತವಾಗಿ ಚುನಾವಣಾ ಪ್ರಕ್ರಿಯೆ ನಡೆಯುತ್ತಿದೆ. ಈ ಮೊದಲು ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೆ, ಹೆಸರು, ವಿಳಾಸ ಇತ್ಯಾದಿ ತಿದ್ದುಪಡಿಗೆ ಫಾರಂ 6, 7, 8 ಗಳ ಮೂಲಕ ಬೂತ್ ಮಟ್ಟದಲ್ಲಿ ಕೊಡಲಾಗುತ್ತಿತ್ತು. ಆದರೆ ಈಗ ಮೊಬೈಲ್ ಆ್ಯಪ್ ಬಂದಿದ್ದು, ಆ್ಯಪ್ ಮೂಲಕ ಮತದಾರರ ಪಟ್ಟಿಗೆ ಸೇರ್ಪಡೆ, ತಿದ್ದುಪಡಿ ಇತ್ಯಾದಿ ಮಾಡಲು ಅವಕಾಶವಿದೆ ಎಂದು ಹೇಳಿದರು.

ಭ್ರಷ್ಟಾಚಾರರಹಿತವಾದ ಮತದಾನ ನಡೆಯಲೆಂಬ ಉದ್ದೇಶದಿಂದ ಯುವ ಮತದಾರರ ಸೇರ್ಪಡೆ ಪ್ರಕ್ರಿಯೆ ನಡೆಯುತ್ತಿದೆ. ಯುವಜನರು ಮೊಬೈಲ್ ಆ್ಯಪ್ ಮೂಲಕ ತಮ್ಮ ಹೆಸರು ನೋಂದಾಯಿಸಿಕೊಂಡು, ಮತದಾರರ ಪಟ್ಟಿಗೆ ಸೇರ್ಪಡೆಯಾಗಬೇಕು. ಪಟ್ಟಿಯಲ್ಲಿ ಸೇರ್ಪಡೆಯಾಗುವ ಮೂಲಕ ಉತ್ತಮ ಅಭ್ಯರ್ಥಿಗಳ ಆಯ್ಕೆ ಮಾಡಿ, ದೇಶದ ಅಭಿವೃದ್ಧಿಗೆ ಕೈಜೋಡಿಸುವಂತೆ ಜಿಲ್ಲಾಧಿಕಾರಿಗಳು ಯುವಜನರಲ್ಲಿ ಮನವಿ ಮಾಡಿದರು.

ಹೆಚ್ಚು ಯುವಜನರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗುವ ಮೂಲಕ ಪ್ರಜ್ಞಾವಂತ ಮತದಾರರಿಂದ ಸದೃಢವಾದ ಹೆಮ್ಮೆಯ ಭಾರತ ಕಟ್ಟಲು ಸಹಾಯವಾಗುತ್ತದೆ. ಮುಂಬರುವ ವಿಧಾನಸಭಾ, ಲೋಕಸಭಾ ಚುನಾವಣೆಗೆ ನಾವೆಲ್ಲರೂ ತಯಾರಿ ಮಾಡಿಕೊಳ್ಳಬೇಕು. ನಮ್ಮ ಕುಟುಂಬದಲ್ಲಿ 18 ವರ್ಷ ತುಂಬಿದ ಎಲ್ಲರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಬೇಕು. ಕುಟುಂಬದಲ್ಲಿ ಯಾರಾದರೂ ಮೃತಪಟ್ಟಿದ್ದರೆ ಅಂಥವರ ಹೆಸರನ್ನು ಪಟ್ಟಿಯಿಂದ ತೆಗೆಯಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು. ಪಟ್ಟಿಯಲ್ಲಿನ ಹೆಸರಿನಲ್ಲಿರುವ ಸಣ್ಣಪುಟ್ಟ ದೋಷಗಳನ್ನು ಸರಿಪಡಿಸಿಕೊಳ್ಳಬೇಕು. ಹತ್ತಿರದ ಮತಗಟ್ಟೆ ಬಗ್ಗೆ, ಅಲ್ಲಿನ ಅಧಿಕಾರಿಗಳ ಬಗ್ಗೆ ತಿಳಿದು, ಮತದಾರರ ಪಟ್ಟಿಯಲ್ಲಿ ನಿಮ್ಮ ಹೆಸರಿದೆಯೇ ಎಂದು ಖಚಿತಪಡಿಸಿಕೊಳ್ಳಬೇಕು. ಚುನಾವಣಾ ಸಂದರ್ಭದಲ್ಲಿ ಅಕ್ರಮಗಳು ನಡೆಯುತ್ತಿದ್ದರೆ ಸಮೀಪದ ಚುನಾವಣಾ ಅಧಿಕಾರಿಗಳಿಗೆ ಮಾಹಿತಿ ನೀಡಬೇಕು ಎಂದು ಮನವಿ ಮಾಡಿದರು.

ಎಲ್ಲರನ್ನೂ ಒಳಗೊಂಡ ಚುನಾವಣೆ ಮಾಡುವುದು ಸುಲಭದ ಕೆಲಸವಲ್ಲ. ಅಂತಹ ಕೆಲಸವನ್ನು ಭಾರತೀಯ ಚುನಾವಣಾ ಆಯೋಗ, ಮುಖ್ಯ ಚುನಾವಣಾಧಿಕಾರಿಗಳು, ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಬೂತ್ ಮಟ್ಟದ ಅಧಿಕಾರಿಗಳು ಸಹಕಾರದಿಂದ ನಡೆಸಲಾಗುತ್ತಿದೆ. ಇದಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಮಾತನಾಡಿ, ಜನರಿಂದ ಜನರಿಗಾಗಿಯೇ ಇರುವ ಪ್ರಜಾಪ್ರಭುತ್ವ ಸರ್ಕಾರವನ್ನು ರಚಿಸಲು ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕು. ಮತದಾನ ಮಾಡುವುದರಿಂದ ನನಗೇನು ಉಪಯೋಗ ಎಂದು ಹೇಳದೇ, 18 ವರ್ಷ ತುಂಬಿದ ಯುವಜನರು ನಾನೇಕೆ ಮತದಾನ ಮಾಡಬೇಕು ಎಂಬ ಮತದಾನದ ಮಹತ್ವ ಮತ್ತು ಜವಾಬ್ದಾರಿ ಅರಿತು, ಚುನಾವಣೆಯಲ್ಲಿ ಉತ್ಸಾಹದಿಂದ ಮತ ಚಲಾಯಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಮತದಾನಕ್ಕಿಂತ ಇನ್ನೊಂದಿಲ್ಲ, ನಾನು ಖಚಿತವಾಗಿ ಮತದಾನ ಮಾಡುತ್ತೇನೆ ಎಂದು ಎಲ್ಲರೂ ಪ್ರತಿಜ್ಞೆ ಸ್ವೀಕರಿಸಿದರು. ನಂತರ ಹೊಸದಾಗಿ ಮತದಾರರ ಪಟ್ಟಿಗೆ ಸೇರ್ಪಡೆಯಾದ ಯುವ ಮತದಾರರಿಗೆ ಮತದಾರರ ಗುರುತಿನ ಚೀಟಿ ವಿತರಿಸಲಾಯಿತು. ರಾಷ್ಟ್ರೀಯ ಮತದಾರರ ದಿನದ ಅಂಗವಾಗಿ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಚಿತ್ರಕಲೆ, ಪ್ರಬಂಧ, ಭಾಷಣ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಯಿತು. 'ನಾನು ಭಾರತ' ಗೀತೆಯ ವೀಡಿಯೋ ಪ್ರದರ್ಶಿಸಲಾಯಿತು. ಕಾರ್ಯಕ್ರಮದಲ್ಲಿ ಜಿಪಂ ಸಿಇಓ ಪೂರ್ಣಿಮಾ, ನಗರಪಾಲಿಕೆ ಆಯುಕ್ತ ಲಕ್ಷ್ಮಿಕಾಂತರೆಡ್ಡಿ, ಹೆಚ್ಚುವರಿ ಪ್ರಾದೇಶಿಕ ಆಯುಕ್ತ ಶಿವರಾಜ್, ಅಪರ ಜಿಲ್ಲಾಧಿಕಾರಿ ಲೋಕನಾಥ್, ಮುಡಾ ಆಯುಕ್ತ ದಿನೇಶ್, ಡಿಸಿಪಿ ಗೀತಾ ಪ್ರಸನ್ನ, ಕಾಲೇಜು ಶಿಕ್ಷಣ ಇಲಾಖೆ ಜಂಟಿ ಕಾರ್ಯದರ್ಶಿ ಗಿರಿಧರ್, ನಗರಪಾಲಿಕೆ ಹೆಚ್ಚುವರಿ ಆಯುಕ್ತರಾದ ರೂಪಾ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನಲ್ಲಿ ರಾಷ್ಟ್ರೀಯ ಮತದಾರರ ದಿನಾಚರಣೆ ಸಂದರ್ಭದಲ್ಲಿ ಹೊಸ ಮತದಾರರಿಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮತದಾರರ ಗುರುತಿನ ಚೀಟಿ ವಿತರಿಸಿದರು. ಚಿತ್ರದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ದೇವರಾಜ ಭೂತೆ, ಜಿಪಂ ಸಿಇಓ ಪೂರ್ಣಿಮಾ, ನಗರಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ, ಮುಡಾ ಆಯುಕ್ತ ದಿನೇಶ್‌ಕುಮಾರ್ ಇನ್ನಿತರರನ್ನು ಕಾಣಬಹುದು.

ಬಹುಮಾನ ವಿಜೇತರು

ಚಿತ್ರಕಲಾ ಸ್ಪರ್ಧೆ: ಯು. ಎಸ್. ನಿಸರ್ಗ, (ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು (ಪ್ರಥಮ), ಹರ್ಷಿತಾ, ಶಾರದಾ ವಿಲಾಸ್ ಟೀಚರ್ಸ್ ಕಾಲೇಜು (ದ್ವಿತೀಯ), ಎನ್.ಲಕ್ಷ್ಮಿ, ಜೆಎಸ್‌ಎಸ್ ಮಹಿಳಾ ಕಾಲೇಜು (ತೃತೀಯ).

ಪ್ರಬಂಧ ಸ್ಪರ್ಧೆ: ಆರ್.ಮನೋಜ್, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು (ಪ್ರಥಮ), ಎಸ್.ಚಂದನ, ಮಹಾರಾಣಿ ಕಲಾ ಕಾಲೇಜು (ದ್ವಿತೀಯ), ಎ.ಪಿ.ಕೀರ್ತಿ, ಎಸ್‌ಬಿಆರ್‌ಆರ್ ಮಹಾಜನ ಕಾಲೇಜು (ತೃತೀಯ).

ಭಾಷಣ ಸ್ಪರ್ಧೆ: ಎಂ.ಲಕ್ಷ್ಮಿ, ಜೆಎಸ್‌ಎಸ್ ಮಹಿಳಾ ಕಾಲೇಜು (ಪ್ರಥಮ), ಮಂಜುಗೌಡ (ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಿದ್ಧಾರ್ಥ ನಗರ (ದ್ವಿತೀಯ), ಕುಮಾರಾ ಬಾಯಿ, ಜೆಎಸ್‌ಎಸ್ ಕಾಲೇಜು, ಊಟಿ ರಸ್ತೆ (ತೃತೀಯ)

ಚಿತ್ರಕಲಾ ಸ್ಪರ್ಧೆಯಲ್ಲಿ 17 ಮಂದಿ ಭಾಗಿ: ರಾಷ್ಟ್ರೀಯ ಮತದಾರರ ದಿನದ ಅಂಗವಾಗಿ ನಗರಪಾಲಿಕೆ ವತಿಯಿಂದ ಕಲಾಮಂದಿರ ಆವರಣದಲ್ಲಿ ಬುಧವಾರ ಆಯೋಜಿಸಿದ್ದ ಮತದಾನದ ಮಹತ್ವ ಕುರಿತ ಚಿತ್ರಕಲಾ ಸ್ಪರ್ಧೆಯಲ್ಲಿ ವಿವಿಧ ಕಾಲೇಜುಗಳ 17 ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಒಂದೂವರೆ ಗಂಟೆಗಳ ಅವಧಿಯಲ್ಲಿ ಸ್ಪರ್ಧಿಗಳು ತಮ್ಮ ಕಲಾಕುಂಚದಿಂದ ಮತದಾನದ ಮಹತ್ವದ ಕುರಿತ ಚಿತ್ರಕಲೆ ಎಲ್ಲರ ಗಮನ ಸೆಳೆಯಿತು. ಈ ಸಂದರ್ಭದಲ್ಲಿ ಪಾಲಿಕೆ ಉಪ ಆಯುಕ್ತರಾದ (ಆಡಳಿತ) ಎಂ.ಕೆ.ಸವಿತಾ, ವಿವಿಧ ವಲಯ ಕಂದಾಯ ಅಧಿಕಾರಿಗಳಾದ ಆಶಾ, ಧನಲಕ್ಷ್ಮಿ, ಸಿದ್ದಪ್ಪ ತೀರ್ಪುಗಾರರಾಗಿ ಕಾಲೇಜು ಉಪನ್ಯಾಸಕರಾದ ಕೃಷ್ಣ ಮೋಹನ್, ಚಂದ್ರಶೇಖರ್ ಇನ್ನಿತರರು ಹಾಜರಿದ್ದರು.

ಇಂದು ಬೃಹತ್ ರಾಷ್ಟ್ರಧ್ವಜ ಹಿಡಿದು ಪಾದಯಾತ್ರೆ



ಮೈಸೂರು,ಜ.25(ಪಿಎಂ)-ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ವತಿಯಿಂದ ಜ.26ರ ಗಣರಾಜ್ಯೋತ್ಸವ ದಿನದಂದು 'ಗಣತಂತ್ರ ರಕ್ಷಕರಾಗೋಣ' ಘೋಷವಾಕ್ಯದೊಂದಿಗೆ ದೇಶದ ಗೌರವ ಮತ್ತು ಸ್ವಾಭಿಮಾನದ ಪ್ರತೀಕವಾಗಿ 10 ಅಡಿ ಅಗಲ ಮತ್ತು 350 ಅಡಿ ಉದ್ದದ ಬೃಹತ್ ರಾಷ್ಟ್ರಧ್ವಜ ಹಿಡಿದು ಪಾದಯಾತ್ರೆ ನಡೆಸಲಾಗುತ್ತಿದೆ ಎಂದು ಪಕ್ಷದ ರಾಜ್ಯ ಉಪಾಧ್ಯಕ್ಷ ದೇವನೂರು ಪುಟ್ಟನಂಜಯ್ಯ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10ಕ್ಕೆ ಉದಯಗಿರಿಯ ಪಕ್ಷದ ಕಚೇರಿ ಆವರಣದಲ್ಲಿ ಧ್ವಜಾರೋಹಣ ಕಾರ್ಯಕ್ರಮ ನಡೆಯಲಿದೆ. ಬಳಿಕ ಅಲ್ಲಿಂದ ವಿವಿಧ ರಸ್ತೆಗಳಲ್ಲಿ ಸಂಚರಿಸುವ ಪಾದಯಾತ್ರೆಯು ಕೆಸರೆಯಲ್ಲಿ ಮುಕ್ತಾಯಗೊಳ್ಳಲಿದೆ. ಇದು ಪಕ್ಷಾತೀತ ಕಾರ್ಯಕ್ರಮವಾಗಿದ್ದು, ಎಲ್ಲಾ ವರ್ಗದ ಜನರು ಭಾಗವಹಿಸಬಹುದು ಎಂದರು.

ಪ್ರಸ್ತುತ ದೇಶದ ಪ್ರಜಾಪ್ರಭುತ್ವಕ್ಕೆ ಆತಂಕ ಎದುರಾಗಿದೆ. ಜನರ ಬದುಕಿನಲ್ಲಿ ಸ್ಥಿರತೆ, ಸುರಕ್ಷತೆ ಮತ್ತು ಶಾಂತಿ ಇಲ್ಲವಾಗಿದೆ. ಆಡಳಿತ ಪಕ್ಷದ ಮುಖಂಡರು, ಜನಪ್ರತಿನಿಧಿಗಳು ಸಂವಿಧಾನ ವಿರೋಧ ಹೇಳಿಕೆ ಮುಂದುವರೆಸಿದ್ದು, ಆ ಮೂಲಕ ಸಮಾಜದಲ್ಲಿ ದ್ವೇಷ-ಅಸೂಯೆ ಸೃಷ್ಟಿಸುತ್ತಿದ್ದಾರೆ ಎಂದು ದೂರಿದರು.

ಎಸ್‌ಡಿಪಿಐ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಅಮ್ಜದ್‌ಖಾನ್ ಮಾತನಾಡಿ, 2002ರಲ್ಲಿ ನಡೆದ ಗುಜರಾತ್ ಗಲಭೆ ಸಂಬಂಧ ಅಂದಿನ ಗುಜರಾತ್ ಮುಖ್ಯಮಂತ್ರಿ ಆಗಿದ್ದ ಪ್ರಧಾನಿ ನರೇಂದ್ರ ಮೋದಿಯವರ ಪಾತ್ರದ ಕುರಿತಂತೆ ಬಿಬಿಸಿ ಸಿದ್ಧಪಡಿಸಿರುವ ಸಾಕ್ಷ್ಯಚಿತ್ರಕ್ಕೆ ನಿರ್ಬಂಧ ವಿಧಿಸಿರುವ ಕೇಂದ್ರ ಸರ್ಕಾರದ ಕ್ರಮ ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಮುಂಬರುವ ವಿಧಾನಸಭಾ ಚುನಾವಣೆಗೆ ಪಕ್ಷ ಸಕ್ರೀಯವಾಗಿ ಸಿದ್ಧತೆ ನಡೆಸುತ್ತಿದ್ದು, ಮೈಸೂರಿನ ಎನ್‌ಆರ್ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಯಾಗಿ ಪಕ್ಷದ ರಾಜ್ಯಾಧ್ಯಕ್ಷ ಅಬ್ದುಲ್‌ಮಜೀದ್ ಸ್ಪರ್ಧಿಸಲಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಪಕ್ಷದ ಜಿಲ್ಲಾಧ್ಯಕ್ಷ ರಫತ್‌ಖಾನ್, ಉಪಾಧ್ಯಕ್ಷ ಎಸ್.ಸ್ವಾಮಿ ಗೋಷ್ಠಿಯಲ್ಲಿದ್ದರು.

ಸಾಧಕರಿಗೆ ವಿಶ್ವಮಾನವ ಕುವೆಂಪು ಪ್ರಶಸ್ತಿ ಪ್ರದಾನ

ಮೈಸೂರು,ಜ.25(ಎಸ್‌ಪಿಎನ್)-ವಿವಿಧ ಕ್ಷೇತ್ರದ 14 ಮಂದಿ ಸಾಧಕರಿಗೆ 'ವಿಶ್ವಮಾನವ ಕುವೆಂಪು' ಪ್ರಶಸ್ತಿಯನ್ನು ಮೈಸೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಪ್ರದಾನ ಮಾಡಲಾಯಿತು.

ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಮೈಸೂರು ತಾಲೂಕು ಕಸಾಪ ವತಿಯಿಂದ ಆಯೋಜಿಸಿದ್ದ ತಾಲೂಕು ಕಸಾಪ ಸದಸ್ಯರ ಕರ್ತವ್ಯ ಸ್ವೀಕಾರ ಹಾಗೂ ನೂತನ ವರ್ಷದ ದಿನದರ್ಶಿಕೆ ಬಿಡುಗಡೆ ಸಮಾರಂಭದಲ್ಲಿ ವಿವಿಧ ಕ್ಷೇತ್ರದ 14 ಮಂದಿ ಸಾಧಕರಿಗೆ 'ವಿಶ್ವಮಾನವ ಕುವೆಂಪು ಪ್ರಶಸ್ತಿ'ಯನ್ನು ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಹಾಗೂ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಪ್ರದಾನ ಮಾಡಿದರು.

ನಂತರ ಮಾತನಾಡಿದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಈ ಹಿಂದೆ ಪತ್ರಿಕೋದ್ಯಮದಲ್ಲಿ ಹಿರಿಯ ಬರಹಗಾರರು ಸಂಪಾದಕರಾಗಿ ಕೆಲಸ ನಿರ್ವಹಿಸಿದ್ದಾರೆ. ಈಗಲೂ ಮುದ್ರಣ ಮಾಧ್ಯಮದಲ್ಲಿ ಕೆಲಸ ಮಾಡುತ್ತಿದ್ದಾರೆ. ಮುದ್ರಣ ಮಾಧ್ಯಮದಲ್ಲಿ ವಾರದಲ್ಲಿ ಒಂದು ದಿನ ಸಾಹಿತ್ಯಕ್ಕೆ ಸಂಬಂಧಿಸಿದ ವಿಶೇಷ ಪುರವಣಿಗಳನ್ನು ಪ್ರಕಟಿಸಿ, ಕನ್ನಡ ಭಾಷೆಗೆ ಎಲ್ಲಾ ಮುದ್ರಣ ಮಾಧ್ಯಮಗಳು ತನ್ನದೇ ಆದ ಕೊಡುಗೆ



ನೀಡುತ್ತಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.


ಪ್ರಶಸ್ತಿ ಪ್ರದಾನ: ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಗಂಗಾಧರ, ಕಸಾಪ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ತಿ.ನರಸೀಪುರ ತಾ.ಘಟಕದ ಅಧ್ಯಕ್ಷ ಕನ್ನಡ ಪುಟ್ಟಸ್ವಾಮಿ, ಹುಣಸೂರಿನ ಎಚ್.ಕೆ.ಮಹದೇವ್, ಮೈಸೂರು ನಗರ ಘಟಕದ ಅಧ್ಯಕ್ಷ ಕೆ.ಎಸ್.ಶಿವರಾಂ, ಎಚ್.ಡಿ.ಕೋಟೆ ಕನ್ನಡ ಪ್ರಮೋದ, ನಂಜನೂಡಿನ ಲತಾ ಮುದ್ದುಮೋಹನ್, ಸಹಾಯಕ ಕಾರ್ಮಿಕ ಆಯುಕ್ತೆ ನಾಜಿಯಾ ಸುಲ್ತಾನ, ನಗರ ಪಾಲಿಕೆ ಸದಸ್ಯೆ ಶೋಭಾ, ಜಿಲ್ಲಾ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳ ಸಂಘದ ಅಧ್ಯಕ್ಷ ರುಕ್ಮಾಂಗದ, ಪಿಡಿಒ ನರಹರಿ, ಫ್ಯೂಚರ್ ಕಿಡ್ಸ್ ಫ್ರೀಸ್ಕೂಲ್ ಶಿಕ್ಷಕಿ ಸಾಧನಾ ರಾಮಪ್ರಸಾದ್, ಹಗರಿಬೊಮ್ಮನಹಳ್ಳಿ ಸುಜ್ಞಾನ ವಿದ್ಯಾಪೀಠದ ಕಾರ್ಯದರ್ಶಿ ನಾಗರಾಜು ತಂಬ್ರಹಳ್ಳಿ, ಬೆಳಗಾವಿ ಪತ್ರಕರ್ತ ಚನ್ನಮಲ್ಲಪ್ಪ ಯ. ಮೆಣಸಿನಕಾಯಿ ಅವರಿಗೆ ವಿಶ್ವ ಮಾನವ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕರ್ತವ್ಯ ಸ್ವೀಕಾರ: ನಂತರ ಮೈಸೂರು ತಾಲೂಕು ಕಸಾಪ ಅಧ್ಯಕ್ಷ ಎ.ಸಿ.ಮಂಜುನಾಥ್ ಮತ್ತು ತಂಡದವರು ಜಿಲ್ಲಾಧ್ಯಕ್ಷರಾದ ಮಡ್ಡೀಕೆರೆ ಗೋಪಾಲ್ ಅವರಿಂದ ಕನ್ನಡ ಧ್ವಜ ಸ್ವೀಕರಿಸುವ ಮೂಲಕ ಕರ್ತವ್ಯ ವಹಿಸಿಕೊಂಡರು. ಇವರೊಂದಿಗೆ ಕೋಶಾಧ್ಯಕ್ಷ ಎಚ್. ಗಿರೀಶ್, ಉಪಾಧ್ಯಕ್ಷ ಸಾಲುಂಡಿ ಎಸ್. ದೊರೆಸ್ವಾಮಿ, ಗೌರವ ಕಾರ್ಯದರ್ಶಿಗಳಾದ ಎಸ್. ದೊರೆಸ್ವಾಮಿ, ಎನ್.ಕೆ.ಗಣೇಶ್, ಕಾನೂನು ಘಟಕದ ಅಧ್ಯಕ್ಷ ಎನ್.ಲೋಹಿತ್, ಸಂಘಟನಾ ಕಾರ್ಯದರ್ಶಿ ಹರದೂರು ಜವರೇಗೌಡ, ಸಹ ಕಾರ್ಯದರ್ಶಿ ಎಚ್.ಸುಶೀಲಾ, ಮಾಧ್ಯಮ ಸಲಹೆಗಾರ ಜೆ.ಮಹದೇವ, ಗೌರವ ಸಲಹೆಗಾರರಾದ ಅಮೀನಾ ಕಾಲೇಖಾನ್, ಹೊನ್ನಶೆಟ್ಟಿ, ಎನ್.ಸಿ.ಉಮೇಶ್, ನಾಗರಾಜು, ಸಂಚಾಲಕರಾದ ಹ.ನಾ. ರಾಮಕೃಷ್ಣ, ಆಲನಹಳ್ಳಿ ಮನು, ಸಹ ಕಾರ್ಯದರ್ಶಿಗಳಾದ ಎಚ್.ಪಿ. ಲೋಕೇಶ್, ಬಸವರಾಜು, ರವಿಕುಮಾರ್, ಸಂಘ ಸಂಸ್ಥೆಗಳ ಪ್ರತಿನಿಧಿ ಸುವರ್ಣ, ನಿರ್ದೇಶಕರಾದ ಎಂ.ನಿಂಗರಾಜು, ಕರೀಗೌಡ, ಕುಳ್ಳೇಗೌಡ ಉಪಸ್ಥಿತರಿದ್ದರು. ಈ ವೇಳೆ ಮೈಸೂರು ತಾಪಂ ಕಾರ್ಯನಿರ್ವಹಣಾಧಿಕಾರಿ ಎಚ್.ಡಿ.ಗಿರೀಶ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷ ಎಂ.ವಿ. ಶಿವಶಂಕರಮೂರ್ತಿ, ಮೈಸೂರು ತಾಲೂಕು ಅಧ್ಯಕ್ಷ ಎ.ಸಿ.ಮಂಜುನಾಥ್ ಸ್ವಾಗತಿಸಿದರು.

ಇದೇ ವೇಳೆ ಡಾ.ವಿಷ್ಣುವರ್ಧನ್ ಮೆಲೋಡಿಸ್‌ನ ಚಂದನ ಶ್ರೀನಿವಾಸ್ ಮತ್ತು ತಂಡದವರು ಕನ್ನಡ ಗೀತ ಗಾಯನ ನಡೆಸಿಕೊಟ್ಟರು.

ನಿಧನ

ಎ.ನಾಗಸುಂದರ್



ಮೈಸೂರು, ಜ. 25- ಮೈಸೂರಿನ ರೂಪಾನಗರದ ನಿವಾಸಿ ಎ.ನಾಗಸುಂದರ್ (77) ಬುಧವಾರ ಬೆಳಗ್ಗೆ ನಿಧನರಾದರು. ಇವರು ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಕಾರ್ಯನಿರ್ವಹಿಸಿದ್ದರು. ಮೃತರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವೀರಭದ್ರ



ಮೈಸೂರು ತಾಲೂಕು ಕೂರ್ಗಳ್ಳಿ ನಿವಾಸಿ ವೀರಭದ್ರ (51) ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ರಾಜೇಶ್ವರಿ, ಪುತ್ರರಾದ ವಿ. ನವೀನ್ ಮತ್ತು ವಿ. ಮಧು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕೂರ್ಗಳ್ಳಿ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಸವರಾಜು



ಮೈಸೂರಿನ ಗಾಂಧಿನಗರದ ಸಿದ್ದಪ್ಪಾಜಿ ದೇವಸ್ಥಾನದ ಹಿರಿಯ ಗುಡ್ಡಪ್ಪ ಮತ್ತು ಲೇಟ್. ಮರಿಬಸವಯ್ಯ ಅವರ ಮಗ ಬಸವರಾಜು (87) ನಿನ್ನೆ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ ಶ್ರೀಮತಿ ಚಿನ್ನಮ್ಮ, ಮಕ್ಕಳಾದ ಸುರೇಖಾ, ಸತೀಶ, ಉಮಾ, ಸುಮಿತ್ರ, ನಾಗರಾಜು ಹಾಗೂ ಅಪಾರ ಬಂಧು-ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಇಂದು (ಬುಧವಾರ) ಮಧ್ಯಾಹ್ನ 2-30 ಗಂಟೆಗೆ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಸ್.ಸಾವಿತ್ರಮ್ಮ



ಹುಣಸೂರು ತಾಲೂಕಿನ ಬಿಳಿಕೆರೆ ಹೋಬಳಿ ತೆಂಕಲಕೊಪ್ಪಲು ಗ್ರಾಮದ ದಿ.ಟಿ.ಸಿ.ಗೌಡಯ್ಯ ಅವರ ಪತ್ನಿ ಎಸ್.ಸಾವಿತ್ರಮ್ಮ (93) ಅವರು ವಯೋಸಹಜ ಕಾಯಿಲೆಯಿಂದ ಬುಧವಾರ ಬೆಳಗ್ಗೆ ನಿಧನರಾದರು. ಮೃತರು ಐವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಸ್ವಗ್ರಾಮದ ಅವರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಕೆ.ಅರುಣಾ



ಮೈಸೂರಿನ ಕುವೆಂಪುನಗರ ನಿವಾಸಿ ಹಾಗೂ ಮುಡಾ ನಿವೃತ್ತ ಇಂಜಿನಿಯರ್ ಬಿ.ಸಿದ್ದೇಗೌಡರ ಪತ್ನಿ ಶ್ರೀಮತಿ ಎಂ.ಕೆ.ಅರುಣಾ ಅವರು ಇಂದು ಮಧ್ಯಾಹ್ನ ನಿಧನರಾದರು. ಇವರಿಗೆ 68 ವರ್ಷ ವಯಸ್ಸಾಗಿತ್ತು. ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಗುರುವಾರ) ಬೆಳಗ್ಗೆ 11 ಗಂಟೆಗೆ ಕೆ.ಜಿ. ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಲಿದೆ.

ಬಸವರಾಜು



ಮೈಸೂರು ಜಯನಗರದ ನಿವಾಸಿ ವೆಂಕಟೇಶ್ ಮತ್ತು ಹೊಂಬಾಳಮ್ಮ ದಂಪತಿ ಪುತ್ರ 48 ವರ್ಷದ ಬಸವರಾಜು(ರಾಜ) ಬುಧವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂದು-ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ(ಜ.26) 12 ಗಂಟೆಗೆ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮೈಸೂರು ಜಿಲ್ಲಾ ಮಡಿವಾಳರ ಸಂಘಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ



ಮೈಸೂರು,ಜ.25(ಪಿಎಂ)- ಮೈಸೂರು ಜಿಲ್ಲಾ ಮಡಿವಾಳರ ಸಂಘದ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದ್ದು, ಅಧ್ಯಕ್ಷರಾಗಿ ತಿ.ನರಸೀಪುರದ ಎಂ.ರಾಜು ಅವರನ್ನು ಆಯ್ಕೆ ಮಾಡಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಂಘದ ನೂತನ ಅಧ್ಯಕ್ಷ ಎಂ.ರಾಜು, ಜ.22ರಂದು ಜಲದರ್ಶಿನಿ ಅತಿಥಿಗೃಹದಲ್ಲಿ ಮೈಸೂರು, ತಿ.ನರಸೀಪುರ, ನಂಜನಗೂಡು, ಸರಗೂರು, ಹೆಚ್‌ಡಿ ಕೋಟೆ, ಹುಣಸೂರು, ಕೆಆರ್ ನಗರ, ಸಾಲಿಗ್ರಾಮ, ಪಿರಿಯಾಪಟ್ಟಣ ತಾಲೂಕು ಘಟಕಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಮೈಸೂರು ನಗರದ ಕುಕ್ಕರಹಳ್ಳಿ ಕೆರೆ, ಯಾದವಗಿರಿ, ಗೊಬ್ಬಳಿಕಟ್ಟೆ, ಮಡೀಕಟ್ಟೆ ಘಟಕಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳ ಸಭೆ ನಡೆಸಿ, ಜಿಲ್ಲಾ ಘಟಕಕ್ಕೆ ನೂತನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು ಎಂದು ತಿಳಿಸಿದರು.

ಹಿರಿಯ ಉಪಾಧ್ಯಕ್ಷರಾಗಿ ಚೌಡಯ್ಯ, ಉಪಾಧ್ಯಕ್ಷರಾಗಿ ಎಸ್.ಜೆ.ಪ್ರಶಾಂತ್, ಸಿದ್ದಪ್ಪಾಜಿ, ಕೋಣಸೂರು ಮಹದೇವ್, ಕಾರ್ಯಾಧ್ಯಕ್ಷರಾಗಿ ನಾಗರಾಜು, ಪ್ರಧಾನ ಕಾರ್ಯದರ್ಶಿ ಚೆನ್ನಕೇಶವ, ಖಜಾಂಚಿಯಾಗಿ ಜಗದೀಶ್‌ಕುಮಾರ್, ಸಂಚಾಲಕರಾಗಿ ಚಂದ್ರಶೇಖರ ಭೈರಿ, ಮೈಸೂರು ನಗರಾಧ್ಯಕ್ಷರಾಗಿ ವರುಣಾ ಮಹದೇವ್, ಸಂಘಟನಾ ಕಾರ್ಯದರ್ಶಿ ಬಿ.ಜಿ.ಕೇಶವ, ಕಾನೂನು ಸಲಹೆಗಾರರಾಗಿ ಸಿದ್ದನಕೊಪ್ಪಲು ಕುಮಾರ್ ಮತ್ತು ಪತ್ರಿಕಾ ಕಾರ್ಯದರ್ಶಿಯಾಗಿ ಎಂ.ಎನ್.ರಾಜೇಶ್ ಆಯ್ಕೆಯಾಗಿದ್ದಾರೆ ಎಂದು ವಿವರಿಸಿದರು.

ಸಮುದಾಯದ ಶ್ರೇಯೋಭಿವೃದ್ಧಿಗೆ ಪೂರಕವಾಗಿ ಸಂಘ ಕಾರ್ಯನಿರ್ವಹಿಸಲಿದೆ. 1983ರಲ್ಲಿ ನಮ್ಮ ಸಮುದಾಯವನ್ನು '2ಎ' ಪಟ್ಟಿಗೆ ಸೇರಿಸಿದರು. ಆದರೆ ಇಲ್ಲಿ ದೊರೆಯುವ ಮೀಸಲಾತಿ ಸೌಲಭ್ಯವು ಇದೇ ಪಟ್ಟಿಯಲ್ಲಿರುವ ಪ್ರಬಲ ಕೋಮುಗಳಿಗೆ ಹೆಚ್ಚು ದಕ್ಕುವಂತಾಯಿತು. ಇದೀಗ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡಬೇಕೆಂಬ ಬೇಡಿಕೆ ಮುಂದಿಟ್ಟುಕೊಂಡು ಹೋರಾಟ ನಡೆಸಲಾಗುತ್ತಿದೆ. ರಾಜ್ಯ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮಕ್ಕೆ ಬಜೆಟ್‌ನಲ್ಲಿ ಕನಿಷ್ಠ 500 ಕೋಟಿ ರೂ. ಅನುದಾನ ಕಲ್ಪಿಸಬೇಕು ಎಂದು ಒತ್ತಾಯಿಸಿದರು. ಕರ್ನಾಟಕ ರಾಜ್ಯ ಮಡಿವಾಳರ ಸಂಘದ ವತಿಯಿಂದ ಜ.27ರಂದು ವರುಣಾ ಕ್ಷೇತ್ರದ ಕುಪ್ಪರಹಳ್ಳಿಯಲ್ಲಿ ಬೆಳಗ್ಗೆ 9ಕ್ಕೆ ಮಡಿವಾಳ ಸಮುದಾಯದ ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಇದೇ ವೇಳೆ ಸಂಘದ ರಾಜ್ಯಾಧ್ಯಕ್ಷರು ಕ್ಷೇತ್ರದ ಸಮಾಜದ ಬಂಧುಗಳಿಗೆ ಗೃಹೋಪಯೋಗಿ ಸಾಮಗ್ರಿ ವಿತರಣೆ ಮಾಡಲಿದ್ದಾರೆ ಎಂದರು. ಸಂಘದ ನಂಜನಗೂಡು ತಾಲೂಕು ಅಧ್ಯಕ್ಷ ಪ್ರಸನ್ನಕುಮಾರ್, ತಿ.ನರಸೀಪುರ ತಾಲೂಕು ಅಧ್ಯಕ್ಷ ಮಹದೇವಸ್ವಾಮಿ, ಹುಣಸೂರು ತಾಲೂಕು ಅಧ್ಯಕ್ಷ ಶಂಕರ್, ಹೆಚ್‌ಡಿ ಕೋಟೆ ತಾಲೂಕು ಅಧ್ಯಕ್ಷ ರಂಗಸ್ವಾಮಿ ಗೋಷ್ಠಿಯಲ್ಲಿದ್ದರು.

ಇಂದು ಉಚಿತ ಆರೋಗ್ಯ ತಪಾಸಣೆ

ಮೈಸೂರು,ಜ.25-ಕನ್ನಡನಾಡು ಟೈಲರಿಂಗ್ ಮಾಲೀಕರ ಮತ್ತು ಕಾರ್ಮಿಕರ ಸಂಘದ ವತಿಯಿಂದ ಜ.26ರಂದು ಗುರುವಾರ ಬೆಳಗ್ಗೆ 10ರಿಂದ ಮಧ್ಯಾಹ್ನ 2.30ರವರೆಗೆ ಮೈಸೂರಿನ ಅಲ್ಫಾ ಆಸ್ಪತ್ರೆಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ರಕ್ತದೊತ್ತಡ, ಇಸಿಜಿ, ಕಣ್ಣಿನ ತಪಾಸಣೆ, ಆರ್ಥೋಪೆಡಿಕ್, ಪೈಲ್ಸ್ ಮತ್ತು ಸಾಮಾನ್ಯ ತಪಾಸಣೆ ನಡೆಸಲಾಗುವುದು. ಮಾಹಿತಿಗೆ ಮೊ:86180 12263 ಸಂಪರ್ಕಿಸಿ.

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ನಾಳಿನ ಪಂಚಾಂಗ

27.1.2023 ಶುಕ್ರವಾರ, ಮಳೆ ನಕ್ಷತ್ರ: ಶ್ರವಣ, 24.01.2023ರಿಂದ 05.02.2023 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ರೇವತಿ, ರಾಹುಕಾಲ: ಬೆಳಗ್ಗೆ 10.30ರಿಂದ 12 ರವರೆಗೆ

■ **ರಾಯಣ್ಣ ಅಭಿಮಾನಿಗಳ ಬಳಗ :** ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ ಕಂಚಿನ ಪ್ರತಿಮೆ ಅನಾವರಣ, ಉಪಸ್ಥಿತರು ಮಾಜಿ ಸಿಎಂ ಸಿದ್ದರಾಮಯ್ಯ, ಶ್ರೀ ಶಿವಾನಂದಪುರಿ ಸ್ವಾಮೀಜಿ, ಪ್ರೊ. ಭಾಷ್ಯಂ ನೇತೃತ್ವದಲ್ಲಿ ಪ್ರತಿಷ್ಠಾಪನೆ, ಸ್ಥಳ: ಹಿನಕಲ್ ಗ್ರಾಮದ ಶನೇಶ್ವರ ದೇವಸ್ಥಾನದ ಬಳಿ, ಬೆಳಗ್ಗೆ 10.30ಕ್ಕೆ

■ **ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ :** ಕಾರ್ಯಾಗಾರ, ಉದ್ಘಾಟನೆ : ಗಣಕಯಂತ್ರ ಪ್ರಾಧ್ಯಾಪಕ ಪ್ರೊ. ಡಿ.ಎಸ್. ಗುರು, ಅಧ್ಯಕ್ಷತೆ: ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜ, ಉಪಸ್ಥಿತರು : ಡಾ.ಎನ್.ಎಸ್. ಹರಿನಾರಾಯಣ, ಸ್ಥಳ: ಡಾ. ಎಸ್.ಆರ್.ರಂಗನಾಥನ್ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮಹಾರಾಣಿ ಮಹಿಳಾ ಕಲಾ ಕಾಲೇಜು, ಫೋಟೋ ಜರ್ನಲಿಸಂ ಅಕಾಡೆಮಿ :** ಬಹುಮಾನ ಮತ್ತು ಪ್ರಶಸ್ತಿ ವಿತರಣಾ ಸಮಾರಂಭ, ಉದ್ಘಾಟನೆ: ವನ್ಯಜೀವಿ ಛಾಯಾಗ್ರಾಹಕರಾದ ಕೃಪಾಕರ-ಸೇನಾನಿ, ಪ್ರಾಸ್ತಾವಿಕ ನುಡಿ: ಪಕ್ಷಿತಜ್ಞ ಪ್ರಮೋದ್ ಸುಬ್ಬರಾವ್, ಮುಖ್ಯ ಅತಿಥಿಗಳು: ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಪ್ರಾಂಶುಪಾಲ ಡಾ.ಡಿ.ರವಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್, ಅಧ್ಯಕ್ಷತೆ : ಮಹಾರಾಣಿ ಕಾಲೇಜು ಪ್ರಾಂಶುಪಾಲ ಪ್ರೊ.ಶ್ರೀನಿವಾಸ್, ಸ್ಥಳ: ಜಯಲಕ್ಷ್ಮಮ್ಮಣ್ಣಿ ಸಭಾಂಗಣ, ಮಧ್ಯಾಹ್ನ 12ಕ್ಕೆ.

■ **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ :** ಪಂಡಿತ್ ಕಲ್ಯ ಶ್ರೀಕಾಂತಾಚಾರ್ ಅವರಿಂದ ಸುಮಧ್ವ ವಿಜಯ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.

■ **ಶ್ರುತಿಮಂಜರಿ ಪ್ರತಿಷ್ಠಾನ, ರೋಟರಿ ಪಶ್ಚಿಮ, ಮೈಸೂರು :** ಶ್ರುತಿಮಂಜರಿ ರಜತ ಸಂಭ್ರಮ, 25ನೇ ವಾರ್ಷಿಕ ಸಂಗೀತೋತ್ಸವ, ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾನಕಲಾ ಭೂಷಣ, ವಿದುಷಿ ಡಾ.ಆರ್.ಎನ್.ಶ್ರೀಲತಾ ರಚಿಸಿದ ಕೃತಿಗಳು-ಶಿಷ್ಯರಿಂದ ಗಾಯನ, ವಿದ್ವಾನ್ ಆರ್.ಎನ್. ತ್ಯಾಗರಾಜನ್ ಅವರು ನಡೆಸಿದ ಸಂಗೀತ ಕಾರ್ಯಾಗಾರದ ವಿದ್ಯಾರ್ಥಿಗಳಿಂದ-ಪ್ರಸ್ತುತಿ 'ಮೊಸಳೆ ಕೃಷ್ಣಮೂರ್ತಿ' ಸ್ಮಾರಕ ರಾಗ-ತಾನ-ಪಲ್ಲವಿ ಸ್ಪರ್ಧೆಯ ವಿಜೇತರಿಂದ ಗಾಯನ, ಸ್ಥಳ:ರೋಟರಿ ಪಶ್ಚಿಮ ಸಭಾಂಗಣ, ಸರಸ್ವತಿಪುರಂ, ಸಂಜೆ 6ಕ್ಕೆ

■ **ನಿರಂತರ ಫೌಂಡೇಷನ್ :** ನಿರಂತರ ರಂಗ ಉತ್ಸವ, ಉಪಸ್ಥಿತರು : ಶಿಕ್ಷಣ ತಜ್ಞ ನಾ. ದಿವಾಕರ, ಹಿರಿಯ ರಂಗಕರ್ಮಿ ಇಂದಿರಾ ನಾಯರ್, ಬೆಂಗಳೂರಿನ ಅನೇಕ ತಂಡದಿಂದ ನವಿಲು ಪುರಾಣ ನಾಟಕ ಪ್ರದರ್ಶನ, ರಚನೆ : ಪ್ರೊ. ಕೆ.ಈ.ರಾಧಾಕೃಷ್ಣ, ನಿರ್ದೇಶನ : ಸುರೇಶ್ ಆನಗಳ್ಳಿ, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.

■ **ಸ್ಪಂದನ ಸಾಂಸ್ಕೃತಿಕ ಪರಿಷತ್ತು, ಅಖಿಲ ಕರ್ನಾಟಕ ಲೇಖಕರ ಮತ್ತು ಪ್ರಕಾಶಕರ ಸಂಘ :** ವಿಶ್ರಾಂತ ಪ್ರಾಂಶುಪಾಲ ಹಾಗೂ ವಿಜ್ಞಾನ ಲೇಖಕ ಸಾತನೂರು ದೇವರಾಜ್ ಅವರ ವಿಜ್ಞಾನ ಪುಸ್ತಕಗಳ ಲೋಕಾರ್ಪಣೆ ಸಮಾರಂಭ, ಪುಸ್ತಕಗಳ ಲೋಕಾರ್ಪಣೆ : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್. ರಂಗಪ್ಪ, ಅಧ್ಯಕ್ಷತೆ: ಜಾನಪದ ವಿದ್ವಾಂಸ ಡಾ. ರಾಮೇಗೌಡ (ರಾಗೌ), ಪ್ರಾಸ್ತಾವಿಕ ಭಾಷಣ : ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ.ಸತೀಶ್ ಜವರೇಗೌಡ, ಅತಿಥಿಗಳು: ಡಾ.ಈ.ಸಿ. ನಿಂಗರಾಜೇಗೌಡ, ಕೃತಿಕಾರ ಸಾತನೂರು ದೇವರಾಜ್, ಸಂಘದ ಅಧ್ಯಕ್ಷ ಡಿ.ಎನ್.ಲೋಕಪ್ಪ, ಮಹಿಮಾ ಪ್ರಕಾಶನದ ಪ್ರಕಾಶಕ ಕೆ.ವಿ.ಶ್ರೀನಿವಾಸ್, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

ಕುಪ್ಪರಹಳ್ಳಿಯಲ್ಲಿಂದು


■ **ವರುಣಾ ಕ್ಷೇತ್ರದ ಮಡಿವಾಳರ ಸಂಘ:** ಮಡಿವಾಳರ ಜಾಗೃತಿ ಸಮಾವೇಶ, ಉದ್ಘಾಟನೆ: ಮಾಜಿ ಸಿಎಂ ಸಿದ್ದರಾಮಯ್ಯ, ಅಧ್ಯಕ್ಷತೆ : ಡಾ. ಯತೀಂದ್ರ ಸಿದ್ದರಾಮಯ್ಯ, ಬೆಳಗ್ಗೆ 9ಕ್ಕೆ.

ಮೈಸೂರು ಆಕಾಶವಾಣಿ

ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಕನ್ನಡದ ಅನನ್ಯ ಲೇಖಕಿಯರು, ಲೇಖನ- ಪ್ರೊ.ಹೇಮಲತಾ ಎಚ್.ಎಂ., 6.40 ಅರಿವಿನ ಶಿಖರ, ಗಾಯನ-ನಿತಿನ್ ರಾಜಾರಾಂ ಶಾಸ್ತ್ರಿ, ಪಿ.ಎಸ್.ರಜನಿ, ಸಿ.ವಿಶ್ವನಾಥ್, ವ್ಯಾಖ್ಯಾನ-ಡಾ.ಸಿ.ನಾಗಣ್ಣ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ಶಿಕ್ಷಣ ಸಂಚಲನ", 9.30 ಗಾಂಧೀ ಸ್ಮೃತಿ, 10.00 ಎ.ಎನ್. ಕಿಶನ್-ವೀಣಾವಾದನ, ಪಿ. ನಟರಾಜ್ - ಮೃದಂಗ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30ದೇವರನಾಮ, 12.45 ಕಾದಂಬರಿ ವಿಹಾರ-ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ- ಉಮೇಶ್ ಎಸ್.ಎಸ್., 1.20 ಭಾವಗೀತೆ-ರಮಾ ರಾಮಕೃಷ್ಣ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ- ಜಿ.ಕೆ. ರವೀಂದ್ರಕುಮಾರ್, 3.00 ಅವಧರಿಸು ಬಾ ಅಮರನಾರೇಯಣ-ಕಾರ್ಯಕ್ರಮ ಸರಣಿ ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ-ಟಿ.ಎಸ್. ವಸಂತಮಾಧವಿ, ಪರಿಕಲ್ಪನೆ ಮತ್ತು ನಿರೂಪಣೆ-ಡಾ.ಎನ್.ರಘು, 4.00 ಮಹಿಳಾರಂಗ-ನಾಟಕ, ಪ್ರಸ್ತುತಿ-ಮಂಡ್ಯದ ಮಂಜುಳಾ ಮತ್ತು ತಂಡದವರಿಂದ, 4.30 ವೃತ್ತಿ ಮಾರ್ಗದರ್ಶನ-ವೃತ್ತಿಪರ ಕ್ರೀಡೆಗಳಲ್ಲಿ ಇರುವ ಅವಕಾಶಗಳು ಕುರಿತು ಮಧುಕರ್ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ-ಕಿಸಾನ್‌ವಾಣಿ-ಸಿರಿಧಾನ್ಯ ಬೆಳೆಗಳ ಕೃಷಿ ಹಾಗೂ ಮೌಲ್ಯವರ್ಧನೆ ಕುರಿತು ಪುಟ್ಟಸ್ವಾಮಿಗೌಡ ಅವರೊಂದಿಗೆ ಸಂದರ್ಶನ. ಸಂದರ್ಶಕರು- ಎಸ್.ಸಿ.ಹೇಮಕುಮಾರ್, 9.15 ಜನಪದ ಸಂಗೀತ-ಮಹದೇವಸ್ವಾಮಿ ಮತ್ತು ತಂಡ, 10.00 ವಾದ್ಯವೃಂದ-ನಿರ್ದೇಶನ-ಎಂ.ವೈ. ಕಾಮಶಾಸ್ತ್ರಿ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.1.2023 ಗುರುವಾರ, ಮಳೆ ನಕ್ಷತ್ರ: ಶ್ರವಣ, 24.01.2023ರಿಂದ 05.02.2023 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಮಾಘ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಉಭಾ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

■ **ಚಾಲೆಂಜಿಂಗ್ ಸ್ಟಾರ್ ದರ್ಶನ್ ಅಭಿಮಾನಿ ಬಳಗ ಮತ್ತು ಜೀವಧಾರ ರಕ್ತನಿಧಿ ಕೇಂದ್ರ :** ಬೃಹತ್ ರಕ್ತದಾನ ಶಿಬಿರ, ಸ್ಥಳ: ಬಿ.ಎಂ.ಹೆಬಿಟೇಟ್ ಮಾಲ್, ಬೆಳಗ್ಗೆ 9 ರಿಂದ.

■ **ಪ್ರೀತಿ ಕ್ಯಾನ್ಸರ್ ಸೆಂಟರ್:** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಎಂ.ಜಿ. ರಸ್ತೆ, ಬೆಳಗ್ಗೆ 10 ರಿಂದ.

■ **ಕನ್ನಡಾಂಬೆ ರಕ್ಷಣಾ ವೇದಿಕೆ :** ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ 78ನೇ ಜಯಂತ್ಯೋತ್ಸವದ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ, ಉಪಸ್ಥಿತರು : ಶಾಸಕ ಜಿ.ಟಿ. ದೇವೇಗೌಡ, ವೇದಿಕೆ ರಾಜ್ಯಾಧ್ಯಕ್ಷ ರಾಜಶೇಖರ್, ಶರತ್‌ಗೌಡ, ಸ್ಥಳ: ಹೂಟಗಳ್ಳಿ ಸಿದ್ದಪ್ಪಾಜಿ ದೇವಸ್ಥಾನದ ಆವರಣ, ಬೆಳಗ್ಗೆ 10 ರಿಂದ.

■ **ಮೈಸೂರು ಜಿಲ್ಲಾ ಕನ್ನಡ ಚಳುವಳಿಗಾರರ ಸಂಘ :** ಕನ್ನಡ ಹಬ್ಬ ಹಾಗೂ ಕನ್ನಡ ಸೇವಾ ರತ್ನ ಪ್ರಶಸ್ತಿ ಸಮಾರಂಭ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ : ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಮುಖ್ಯ ಅತಿಥಿಗಳು: ಶಾಸಕರಾದ ಎಲ್. ನಾಗೇಂದ್ರ, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಶಿವಣ್ಣ, ಎಸ್.ಮಹದೇವಯ್ಯ, ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಆಶಯ ನುಡಿ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸ್ಥಳ: ಫರೂಕ್ ಇರಾನಿ ಸಭಾಂಗಣ, (ರೋಟರಿ ಕೇಂದ್ರ), ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಡ್ಯಾನ್ಸ್ ಫಾರ್ ಯೂ :** ವಾರ್ಷಿಕೋತ್ಸವ ಸಮಾರಂಭ, ಉಪಸ್ಥಿತರು : ಇನ್ಸ್‌ಪೆಕ್ಟರ್‌ಗಳಾದ ಎಲ್. ಅರುಣ್, ಪ್ರಸನ್ನಕುಮಾರ್, ಡಾ. ಶೀಲಾ ಶ್ರೀಧರ್, ಮಹೇಶ್ ಸುಖಧರೆ, ಡಾ. ವೈಡಿ. ರಾಜಣ್ಣ, ಚಾಮರಾಜ್, ವಿಜಯ ಸೂರ್ಯ, ಲಕ್ಷ್ಮಿಕಿರಣ್‌ಗೌಡ, ಧ್ರುವನ್, ಶ್ರೀಧರ್, ರಮೇಶ್, ಸ್ಥಳ: ಕನಕದಾಸನಗರ, ದಟ್ಟಗಳ್ಳಿ 3ನೇ ಹಂತ, ಸಂಜೆ 5ಕ್ಕೆ.

■ **ಶ್ರೀ ರಾಘವೇಂದ್ರ ಸ್ವಾಮಿ ಸೇವಾ ಸಮಿತಿ :** ಪಂಡಿತ್ ಕಲ್ಯ ಶ್ರೀಕಾಂತಾಚಾರ್ ಅವರಿಂದ ಸುಮಧ್ವ ವಿಜಯ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.

■ **ಶ್ರುತಿಮಂಜರಿ ಪ್ರತಿಷ್ಠಾನ, ರೋಟರಿ ಪಶ್ಚಿಮ, ಮೈಸೂರು :** ಶ್ರುತಿಮಂಜರಿ ರಜತ ಸಂಭ್ರಮ, 25ನೇ ವಾರ್ಷಿಕ ಸಂಗೀತೋತ್ಸವ, ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ವಿಠ್ಠಲ್ ರಾಮಮೂರ್ತಿ ಮತ್ತು ವಿದ್ವಾನ್ ಶ್ರೀಹರಿ ವಿಠ್ಠಲ್ ಅವರಿಂದ ದ್ವಂದ್ವ ಪಿಟೀಲು, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ-ಮೃದಂಗ, ವಿದ್ವಾನ್ ಶರತ್ ಕೌಶಿಕ್-ಘಟ, ಸ್ಥಳ: ರೋಟರಿ ಪಶ್ಚಿಮ ಸಭಾಂಗಣ, ಸರಸ್ವತಿಪುರಂ, ಸಂಜೆ 6ಕ್ಕೆ.

■ **ರಾಯಣ್ಣ ಅಭಿಮಾನಿಗಳ ಬಳಗ:** ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ ಕಂಚಿನ ಪ್ರತಿಮೆ ಪ್ರತಿಷ್ಠಾಪನಾ ಕಾರ್ಯಕ್ರಮ, ಪ್ರೊ. ಭಾಷ್ಯಂ ನೇತೃತ್ವದಲ್ಲಿ ಪ್ರತಿಷ್ಠಾಪನೆ, ಸ್ಥಳ: ಹಿನಕಲ್, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನಿರಂತರ ಫೌಂಡೇಷನ್:** ನಿರಂತರ ರಂಗ ಉತ್ಸವ, ಉಪಸ್ಥಿತರು : ಪ್ರಜಾವಾಣಿ ಮೈಸೂರು ಬ್ಯೂರೋ ಕೆ.ನರಸಿಂಹಮೂರ್ತಿ, ನಿರಂತರ ರಂಗ ತಂಡದಿಂದ ವಾರಸುದಾರ ನಾಟಕ ಪ್ರದರ್ಶನ, ರಚನೆ: ಜಯರಾಂ ರಾಹಪುರ, ನಿರ್ದೇಶನ: ಪ್ರಸಾದ್ ಕುಂದೂರು, ಸ್ಥಳ: ಕಿರುರಂಗಮಂದಿರ, ಸಂಜೆ 7ಕ್ಕೆ.

ಗಣರಾಜ್ಯೋತ್ಸವ ದಿನಾಚರಣೆ

■ **ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ :** 74ನೇ ಗಣರಾಜ್ಯೋತ್ಸವ ಆಚರಣೆ, ಧ್ವಜಾರೋಹಣ: ಪ್ರೊ.ಕೆ.ಎಸ್.ಸುರೇಶ್, ಅಧ್ಯಕ್ಷತೆ: ಶ್ರೀಶೈಲ ರಾಮಣ್ಣವರ್, ಮುಖ್ಯ ಅತಿಥಿಗಳು: ಎಸ್.ಶಿವಲಿಂಗಯ್ಯ, ಸ್ಥಳ: ಸಂಸ್ಥೆಯ ಬಯಲು ರಂಗ ಮಂದಿರ, ಶೇಷಾದ್ರಿ ಅಯ್ಯರ್ ರಸ್ತೆ, ಬೆಳಗ್ಗೆ 7.30ಕ್ಕೆ.

■ **ಶ್ರೀ ನಟರಾಜ ಪ್ರತಿಷ್ಠಾನ :** 74ನೇ ಗಣರಾಜ್ಯೋತ್ಸವ ಆಚರಣೆ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಧ್ವಜಾರೋಹಣ: ಗಾಂಧಿ ಮಾರ್ಗಿ ಸರೋಜಮ್ಮ ತುಳಸಿ ದಾಸಪ್ಪ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 8ಕ್ಕೆ.

■ **ಟಿಎನ್‌ಎನ್ ಆದರ್ಶ ವಿದ್ಯಾರ್ಥಿನಿಲಯ:** 74ನೇ ಗಣರಾಜ್ಯೋತ್ಸವ ಆಚರಣೆ, ಧ್ವಜಾರೋಹಣ: ಟಿಎನ್‌ಎನ್ ಅಕಾಡೆಮಿ ಅಧ್ಯಕ್ಷ ಎಂ.ಪ್ರಮಲ್ ಕುಮಾರ್, ಸ್ಥಳ: ವಿದ್ಯಾರ್ಥಿನಿಲಯ, ಎನ್.ಆರ್.ಮೊಹಲ್ಲಾ ಬೆಳಗ್ಗೆ 8ಕ್ಕೆ

■ **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು, ಕಾವೇರಿ ಚಾರಿಟೆಬಲ್ ಟ್ರಸ್ಟ್:** ಗಣರಾಜ್ಯೋತ್ಸವ ಆಚರಣೆ, ಧ್ವಜಾರೋಹಣ: ಸದ್ವಿದ್ಯಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಪ್ರೊ. ವಿ.ಕೆ.ಗೋಪಾಲಾಚಾರ್, ಮುಖ್ಯ ಅತಿಥಿಗಳು: ಭಾರತೀಯ ವಾಯುಸೇನೆಯ ಗ್ರೂಪ್ ಕ್ಯಾಪ್ಟನ್ ಕೆ.ಎಸ್. ಚಂದ್ರಶೇಖರ್ (ನಿವೃತ್ತ), ಸಿ.ಆರ್. ನಾಗರಾಜ್, ಪ್ರೊ. ಎಂ.ಎಸ್.ಕೆ. ನರಹರಿಬಾಬು, ಪ್ರೊ. ಕೆ.ಎಸ್. ಹಿರಿಯಣ್ಣ, ಸ್ಥಳ: ಟಿ.ಪಿ. ಕೈಲಾಸಂ ರಂಗ ಮಂಟಪ, ಬೆಳಗ್ಗೆ 8ಕ್ಕೆ.

■ **ರಾಮಕೃಷ್ಣ ವಿದ್ಯಾಕೇಂದ್ರ, ಆರ್‌ಕೆವಿಕೆ ಸಂಯುಕ್ತ ಪದವಿಪೂರ್ವ ಕಾಲೇಜು:** ಗಣರಾಜ್ಯೋತ್ಸವ, ಅಧ್ಯಕ್ಷತೆ: ಶ್ರೀರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ, ಮುಖ್ಯ ಅತಿಥಿಗಳು : ರುಡ್‌ಸೆಟ್ ನಿವೃತ್ತ ನಿರ್ದೇಶಕ ಹೆಚ್.ಜಿ. ಜಗದೀಶ್, ಸ್ಥಳ: ರಾಮಕೃಷ್ಣ ವಿದ್ಯಾಕೇಂದ್ರ, ರಾಮಕೃಷ್ಣನಗರ, ಬೆಳಗ್ಗೆ 8ಕ್ಕೆ

■ **ವಿಶ್ವಮಾನವ ವಿದ್ಯಾನಿಕೇತನ:** ಗಣರಾಜ್ಯೋತ್ಸವ ಸಮಾರಂಭ, ಧ್ವಜಾರೋಹಣ: ಡಾ.ದೇವೇಗೌಡ, ಮುಖ್ಯ ಅತಿಥಿಗಳು: ಕೆ.ಸಿ.ಚನ್ನಕೇಶವ, ಗೋಪಿನಾಥ್, ಅಧ್ಯಕ್ಷತೆ: ಪ್ರೊ.ಚಂದ್ರಶೇಖರಗೌಡ, ಸ್ಥಳ: ವಿದ್ಯಾನಿಕೇತನ, ಬೆಳಗ್ಗೆ 8.15ಕ್ಕೆ

■ **ದೀಪಾ ಶಿಕ್ಷಣ ಮತ್ತು ಸೇವಾ ಸಂಸ್ಥೆ :** 74ನೇ ಗಣರಾಜ್ಯೋತ್ಸವ, ಅಧ್ಯಕ್ಷತೆ : ಸಂಸ್ಥೆ ಅಧ್ಯಕ್ಷ ಎಂ. ರಾಮಪ್ಪ, ಮುಖ್ಯ ಅತಿಥಿಗಳು : ಅಂಕಣಕಾರ ಡಾ. ವಿ. ರಂಗನಾಥ್, ಸ್ಥಳ: ದೀಪಾ ಸಂಯುಕ್ತ ಪದವಿಪೂರ್ವ ಕಾಲೇಜು ಆವರಣ, ರೂಪಾನಗರ, ಬೆಳಗ್ಗೆ 8.30ಕ್ಕೆ.

■ **ಶಾರದಾ ವಿಲಾಸ ವಿದ್ಯಾಸಂಸ್ಥೆ :** ಗಣರಾಜ್ಯೋತ್ಸವ ಆಚರಣೆ, ಅಧ್ಯಕ್ಷತೆ ಮತ್ತು ಧ್ವಜಾರೋಹಣ : ಸಂಸ್ಥೆಯ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಮುಖ್ಯ ಅತಿಥಿಗಳು : ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಉಪಕುಲಪತಿ ಡಾ.ಜಿ.ಹೇಮಂತಕುಮಾರ್, ಸ್ಥಳ: ಶಾರದಾ ವಿಲಾಸ ವಿದ್ಯಾಸಂಸ್ಥೆಯ ಆವರಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 8.30ಕ್ಕೆ

■ **ತರಳಬಾಳು ಶಿಕ್ಷಣ ಕೇಂದ್ರ:** ಗಣರಾಜ್ಯೋತ್ಸವ ಸಮಾರಂಭ, ಧ್ವಜಾರೋಹಣ: ನಿವೃತ್ತ ಪ್ರಾಚಾರ್ಯ ಮಲ್ಲಿಕಾರ್ಜುನ ಶೆಟ್ಟಿ, ಮುಖ್ಯ ಅತಿಥಿಗಳು: ತರಳಬಾಳು ಶಿಕ್ಷಣ ಕೇಂದ್ರದ ಸ್ಥಳೀಯ ಸಲಹಾ ಸಮಿತಿ ಅಧ್ಯಕ್ಷ ಡಾ. ಜಿ.ಆರ್.ಶಿವಮೂರ್ತಿ, ಅಧ್ಯಕ್ಷತೆ : ಕಾಲೇಜು ಪ್ರಾಚಾರ್ಯ ಡಿ.ನಾಗೇಂದ್ರಪ್ಪ, ಉಪಸ್ಥಿತರು : ತರಳಬಾಳು ಪ್ರೌಢಶಾಲೆ ಮುಖ್ಯೋಪಾಧ್ಯಾಯ ವಿ.ಆನಂದಪ್ಪ, ಸ್ಥಳ: ಕೇಂದ್ರದ ಆವರಣ, ಬೆಳಗ್ಗೆ 8.30ಕ್ಕೆ.

■ **ಶ್ರೀಕಾಂತ ವಿದ್ಯಾಸಂಸ್ಥೆಗಳು :** ಗಣರಾಜ್ಯೋತ್ಸವ ಸಮಾರಂಭ, ಅಧ್ಯಕ್ಷತೆ: ಕೆ.ಎನ್.ವರದರಾಜ ಅಯ್ಯಂಗಾರ್ ಮೆಮೋರಿಯಲ್ ಟ್ರಸ್ಟ್ ಅಧ್ಯಕ್ಷ ಆರ್.ಜಿ.ನರಸಿಂಹ ಅಯ್ಯಂಗಾರ್, ಧ್ವಜಾರೋಹಣ: ಮೇಜರ್ ಪಿ.ಶ್ರೀಧರ್, ಸ್ಥಳ: ವಿದ್ಯಾಸಂಸ್ಥೆ ಆವರಣ, ಬೆಳಿಗ್ಗೆ 9.30ಕ್ಕೆ.

■ **ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ :** ಗಣರಾಜ್ಯೋತ್ಸವ, ಧ್ವಜಾರೋಹಣ : ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮುಖ್ಯ ಅತಿಥಿಗಳು : ಸುರ್ಜೇವಾಲ, ಸಿದ್ದರಾಮಯ್ಯ, ಆರ್. ಧ್ರುವನಾರಾಯಣ್, ಆರ್. ಮೂರ್ತಿ, ಡಾ. ಬಿ.ಜೆ. ವಿಜಯಕುಮಾರ್, ಸ್ಥಳ: ಕಾಂಗ್ರೆಸ್ ಭವನ, ರೈಲ್ವೆ ನಿಲ್ದಾಣ, ಬೆಳಗ್ಗೆ 9.30ಕ್ಕೆ

■ **ಅಶೋಕಪುರಂ ಅಭಿಮಾನಿಗಳ ಬಳಗ :** ಸಂವಿಧಾನೋತ್ಸವ, ಉದ್ಘಾಟನೆ: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ : ಮಾಜಿ ಮೇಯರ್ ಪುರುಷೋತ್ತಮ್, ಮುಖ್ಯ ಅತಿಥಿಗಳು: ವಿಚಾರವಾದಿ ಪ್ರೊ.ಕೆ.ಎಸ್. ಭಗವಾನ್, ಇತಿಹಾಸ ತಜ್ಞ ಪ್ರೊ. ಪಿ.ವಿ.ನಂಜರಾಜೇ ಅರಸ್, ಸಾಹಿತಿ ಬನ್ನೂರು ಕೆ.ರಾಜು, ಸಿದ್ದಸ್ವಾಮಿ, ಶಾಂತರಾಜು, ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ಪಾಲಿಕೆ ಸದಸ್ಯೆ ಪಲ್ಲವಿ ಬೇಗಂ, ಶಾರದ ಈಶ್ವರ್, ಭುವನೇಶ್ವರಿ, ಅಹಿಂದ ಮುಖಂಡ ಜವರಪ್ಪ, ಸ್ಥಳ: ಅಂಬೇಡ್ಕರ್ ಉದ್ಯಾನವನ, ಅಶೋಕಪುರಂ, ಬೆಳಗ್ಗೆ 9.30ಕ್ಕೆ.

■ **ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ:** ಗಣರಾಜ್ಯೋತ್ಸವದ ಪ್ರಯುಕ್ತ ಸಂವಿಧಾನಾತ್ಮಕ ಆಶಯ: ಸ್ವಾತಂತ್ರ್ಯದ 75 ವರ್ಷಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಹೆಚ್.ರಾಜಶೇಖರ್, ವಿಶೇಷ ಉಪನ್ಯಾಸ : ರಾಜ್ಯಶಾಸ್ತ್ರ ತಜ್ಞ ಪ್ರೊ. ಹರಗೋಪಾಲ್, ಮುಖ್ಯ ಅತಿಥಿಗಳು : ಮೈಸೂರು ವಿವಿ ಕುಲಸಚಿವೆ ವಿ.ಆರ್.ಶೈಲಜಾ, ಸ್ಥಳ: ವಿಶ್ವಜ್ಞಾನಿ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಸಮಾನತೆ-ಸ್ವಾಭಿಮಾನ-ಸ್ವಾವಲಂಬನೆ ಪ್ರತಿಷ್ಠಾನ, ಸಮಾನತೆ ಪ್ರಕಾಶನ :** ಗಣರಾಜ್ಯೋತ್ಸವ ನಿಮಿತ್ತ ವಿಶೇಷ ಉಪನ್ಯಾಸ : ಭಾರತ ಸಂವಿಧಾನದ ಆಶಯಗಳು, ಉಪನ್ಯಾಸಕರು : ಪ್ರಾಧ್ಯಾಪಕ ಪ್ರೊ. ಕೃಷ್ಣ ಹೊಂಬಳ್, ಅಧ್ಯಕ್ಷತೆ : ಸಂಸದ ವಿ. ಶ್ರೀನಿವಾಸ ಪ್ರಸಾದ್, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ನಾಟ್ಯ ಸಂಸ್ಥೆ :** ಗಣರಾಜ್ಯೋತ್ಸವದ ಪ್ರಯುಕ್ತ ಸಾಂಸ್ಕೃತಿಕ ಕಾರ್ಯಕ್ರಮ, ಸ್ಥಳ: ಹ್ಯಾಬಿಟ್ಯಾಟ್ ಮಾಲ್, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.

■ **ವಿಶ್ವಮೈತ್ರಿ ಬುದ್ಧ ವಿಹಾರ:** ಸಂವಿಧಾನ ದಿನಾಚರಣೆ, ಸಮ್ಮುಖ : ಡಾ.ಕಲ್ಯಾಣಸಿರಿ ಭಂತೇಜಿ, ವಿಷಯ ಮಂಡನೆ : ಶಿವಸುಂದರ್, ಸಾವಿತ್ರಿ ಮುಜಮದಾರ್, ಅಧ್ಯಕ್ಷತೆ: ಮಾಜಿ ಮೇಯರ್ ಪುರುಷೋತ್ತಮ, ಸ್ಥಳ: ವಿಶ್ವಮೈತ್ರಿ ಬುದ್ಧ ವಿಹಾರ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ-ಬಾನುಲಿ ಸರಣೀ, ಪ್ರಸ್ತುತಿ- ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ, ಗಾಯನ- ಬಿ.ಶ್ರೀರಾಂ ಭಟ್, ಪಿ. ಸುರಭಿ, ಸಿ.ವಿಶ್ವನಾಥ್, ವ್ಯಾಖ್ಯಾನ-ಕೆ.ಎಲ್. ಪದ್ಮಿನಿ ಹೆಗಡೆ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ-ಡಾ.ಮೈಸೂರು ಉಮೇಶ್, 9.10 ದೆಹಲಿಯ ಕರ್ತವ್ಯ ಪಥ್ ಮತ್ತು ನ್ಯಾಷನಲ್ ವಾರ್ ಮೆಮೋರಿಯಲ್‌ನಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ನಡೆಯಲಿರುವ ಪೆರೇಡ್ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ವೀಕ್ಷಕ ವಿವರಣೆ

ಮಧ್ಯಾಹ್ನ : 12.30 ದೇವರನಾಮ, 1.20 ವೃಂದಗಾನದಲ್ಲಿ ದೇಶಭಕ್ತಿ ಗೀತೆಗಳು, 4.00 ಜನಪದ ಸಂಗೀತ- ಮರಿಸಿದ್ದಮ್ಮ ಮತ್ತು ತಂಡ-ತತ್ವಪದಗಳು, 4.30 ಕನ್ನಡ ಭಾರತಿ-ಲಲಿತ ಪ್ರಬಂಧ, ಪ್ರಸ್ತುತಿ- ಕೆ.ಬಿ. ಮೀನಾಕ್ಷಿ, "ಸೆಲ್ಫಿ ತಗೊಳ್ಳೋಣ ಬನ್ನಿ"- ಪ್ರವೀಣ್ ಕುಮಾರ್ ಮಾವಿನಕಾಡು ಅವರಿಂದ ವಿನೋದ ಭಾಷಣ, 5.40 ಮೈಸೂರಿನ ಜಿಲ್ಲಾಡಳಿತ ಏರ್ಪಡಿಸಿದ್ದ ಗಣರಾಜ್ಯೋತ್ಸವ ಸಮಾರಂಭದ ಬಾನುಲಿ ವರದಿ, ಪ್ರಸ್ತುತಿ- ಬಿ. ದಿಗ್ವಿಜಯ್, 6.50 ಕೃಷಿರಂಗ-ಕಿಸಾನ್‌ವಾಣಿ-ಗಣರಾಜ್ಯೋತ್ಸವದ ಮುನ್ನಾ ದಿನದ ಸಂದರ್ಭದಲ್ಲಿ ಮಾನ್ಯ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರವನ್ನುದ್ದೇಶಿಸಿ ಮಾಡಲಿರುವ ಪ್ರಸಾರ ಭಾಷಣದ ಕನ್ನಡ ಅನುವಾದದ ಮರುಪ್ರಸಾರ, 7.45 ರಾಜ್ಯದ ವಿವಿಧೆಡೆ ನಡೆದ ಗಣರಾಜ್ಯೋತ್ಸವ ಸಮಾರಂಭಗಳ ಸುದ್ದಿ ಚಿತ್ರ, 9.30 ಕನ್ನಡ ಭಾರತಿ, 10.00 ನಾಟಕ, 10.30 ಸವಿನೆನಪು

ಮೈಸೂರು ಮಿತ್ರ ಗುರುವಾರ 26 ಜನವರಿ 2023

ಮೈಸೂರಿನ ಕೆ.ಸಿ.ಬಡಾವಣೆಯಲ್ಲೂ ಚಿರತೆ ಹಾವಳಿ?

●ಅನುಮಾನ ಮೂಡಿಸಿರುವ ಕರುವಿನ ಕಳೇಬರ ●ಅರಣ್ಯಾಧಿಕಾರಿಗಳಿಂದ ಪರಿಶೀಲನೆ ●ಮುನ್ನೆಚ್ಚರಿಕೆಯಾಗಿ ಬೋನ್ ಇರಿಸಿದ ಅರಣ್ಯ ಇಲಾಖೆ

ಮೈಸೂರು, ಜ.25(ಎಂಟಿವೈ)–ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಕೆ.ಸಿ.ಬಡಾವಣೆಯಲ್ಲಿ ದೊರೆತಿರುವ ಕರುವೊಂದರ ಕಳೇಬರ ಈ ಪ್ರದೇಶದಲ್ಲಿ ಚಿರತೆ ಹಾವಳಿಯ ಅನುಮಾನ ಮೂಡಿಸಿದೆ. ಸ್ಥಳಕ್ಕೆ ದೌಡಾಯಿಸಿದ ಅರಣ್ಯ ಸಿಬ್ಬಂದಿ ಪರಿಶೀಲನೆ ನಡೆಸಿ, ಮುನ್ನೆಚ್ಚರಿಕೆಯಾಗಿ ಬೋನ್‌ವೊಂದನ್ನು ಇರಿಸಿದೆ.

ತಿ.ನರಸೀಪುರ ತಾಲೂಕಲ್ಲಿ ಚಿರತೆ ಹಾವಳಿ ವ್ಯಾಪಕವಾಗಿದ್ದು, ಈಗಾಗಲೇ ನಾಲ್ವರು ಬಲಿಯಾಗಿದ್ದಾರೆ. ಇದರ ಬೆನ್ನಲ್ಲೇ ಇದೀಗ ಮೈಸೂರಿನ ಪ್ರಮುಖ ವಸತಿ ಪ್ರದೇಶ ಕೆ.ಸಿ.ಬಡಾವಣೆಯಲ್ಲಿ ಚಿರತೆ ದಾಳಿಯ ಸಂಶಯ ದಟ್ಟವಾಗಿದೆ. ಚಾಮುಂಡಿಬೆಟ್ಟದ ತಪ್ಪಲಿನ ಈ ಬಡಾವಣೆಯ ಖಾಲಿ ಜಾಗದಲ್ಲಿ ಬುಧವಾರ ಬೆಳಗ್ಗೆ ಕರುವೊಂದರ ಕಳೇಬರ ಪತ್ತೆಯಾಗಿದೆ. ಅಲ್ಲದೆ, ಕರುವಿನ ಪಕ್ಕೆಲುಬು ಹಾಗೂ ತೊಡೆ ಭಾಗದಲ್ಲಿ ಚರ್ಮ ಮಾತ್ರ ಸುಲಿದಿದ್ದು, ಇದು ಸಂಶಯಕ್ಕೆ ಕಾರಣವಾಗಿದೆ. ಕಳೆದ ರಾತ್ರಿ ಕರು ಬಲಿಯಾಗಿದ್ದು, ಇದಕ್ಕೆ ನಿಖರ ಕಾರಣ ತಿಳಿಯಲು ಮರಣೋತ್ತರ ಪರೀಕ್ಷೆಯ ವರದಿಗಾಗಿ ಕಾಯುವಂತಾಗಿದೆ.

ಬೆಚ್ಚಿ ಬಿದ್ದ ಜನ: ಖಾಲಿ ಭಾಗದಲ್ಲಿ ಕರುವಿನ ಕಳೇಬರ ಪತ್ತೆಯಾದ ಹಿನ್ನೆಲೆಯಲ್ಲಿ ಚಿರತೆ ದಾಳಿಯಿಂದಲೇ ಇದು ಬಲಿಯಾಗಿದೆ ಎಂಬ ವದಂತಿ ದಟ್ಟವಾಗಿ ಹರಡಿದೆ. ಕೆಲವರು ಅರಣ್ಯ ಇಲಾಖೆ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ. ಸಮೀಪವೇ ಚಾಮುಂಡಿಬೆಟ್ಟ ಇರುವುದು, ಅಲ್ಲಿ ಚಿರತೆಗಳಿರುವ ಹಿನ್ನೆಲೆಯಲ್ಲಿ ಈ ಸುದ್ದಿ ವ್ಯಾಪಕವಾಗಿ ಹರಡಿದ ಪರಿಣಾಮ, ಕೆ.ಸಿ.ಬಡಾವಣೆ, ಜೆ.ಸಿ.ಬಡಾವಣೆ ನಿವಾಸಿಗಳಲ್ಲಿ ಆತಂಕ ಮನೆ ಮಾಡಿತ್ತು.


ಕೆ.ಸಿ.ಬಡಾವಣೆಯಲ್ಲಿ ಚಿರತೆ ದಾಳಿ ಶಂಕೆ ಹಿನ್ನೆಲೆಯಲ್ಲಿ ಸ್ಥಳಕ್ಕೆ ಶಾಸಕ ಎಸ್.ಎ.ರಾಮದಾಸ್ ಭೇಟಿ ನೀಡಿ ಪರಿಶೀಲಿಸಿದರು.


ಕೆ.ಸಿ.ಬಡಾವಣೆಯಲ್ಲಿ ಬೋನ್ ಇಟ್ಟಿರುವ ಸ್ಥಳದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅರಣ್ಯ ಸಿಬ್ಬಂದಿಯೊಂದಿಗೆ ಚರ್ಚಿಸುತ್ತಿರುವುದು.

ಸ್ಥಳಕ್ಕಾಗಮಿಸಿದ ಅರಣ್ಯ ಸಿಬ್ಬಂದಿ ಕರುವಿನ ದೇಹ ಪರಿಶೀಲಿಸಿದರು. ಆದರೆ ಚಿರತೆ ದಾಳಿಯ ಯಾವ ಕುರುಹು ಪತ್ತೆಯಾಗಲಿಲ್ಲ. ಆದರೂ, ಸುತ್ತಮುತ್ತಲಿನ ಮನೆಗಳ ಮುಂದೆ ಅಳವಡಿಸಿರುವ ಸಿಸಿ ಕ್ಯಾಮರಾದಲ್ಲಿ ಕಳೆದ ರಾತ್ರಿ ದಾಖಲಾಗಿರುವ ದೃಶ್ಯಗಳನ್ನು ಪರಿಶೀಲಿಸುವಂತೆ ಸಲಹೆ ನೀಡಿದ್ದಾರೆ.

ಚಿರತೆ ದಾಳಿಯ ಸಂಶಯ ವ್ಯಕ್ತವಾದ ಹಿನ್ನೆಲೆಯಲ್ಲಿ ಅರಣ್ಯ ಸಿಬ್ಬಂದಿ ಕೆ.ಸಿ.ನಗರದ ಖಾಲಿ ನಿವೇಶನಗಳಲ್ಲಿ ಬೆಳೆದಿರುವ ಪೊದೆಗಳು ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ಪರಿಶೀಲನೆ ನಡೆಸಿದರು. ಈ ವೇಳೆ ಎಲ್ಲಿಯೂ ಚಿರತೆಯ ಸುಳಿವು ಪತ್ತೆಯಾಗಲಿಲ್ಲ. ಸಾಕಷ್ಟು ಶೋಧನಾ ಕಾರ್ಯಾಚರಣೆ ನಡೆಸಿದ ಅರಣ್ಯ ಸಿಬ್ಬಂದಿ ಕೊನೆಗೆ ಬರಿಗೈಯ್ಯಲ್ಲಿ ವಾಪಸಾದರು.

ಮುನ್ನೆಚ್ಚರಿಕೆಯಾಗಿ ಬೋನ್ ಇಡಲಾಗಿದೆ: ಕರುವಿನ ಮೇಲೆ ಚಿರತೆ ದಾಳಿ ನಡೆಸಿದೆ ಎಂದು ಸ್ಥಳೀಯರು ಸಂಶಯ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಜನವಸತಿ ಪ್ರದೇಶವಾಗಿರುವ ನಿಟ್ಟಿನಲ್ಲಿ ಅರಣ್ಯ ಇಲಾಖೆ ಬೋನ್‌ವೊಂದನ್ನು ಇಟ್ಟು, ಚಿರತೆ ಸೆರೆಗೆ ಕ್ರಮ ಕೈಗೊಂಡಿದ್ದಾರೆ. ಸ್ಥಳೀಯರ ದೂರನ್ನು ಗಂಭೀರವಾಗಿ ಪರಿಗಣಿಸಿ, ಬೋನ್ ಇಡಲಾಗಿದೆ.

ರಾತ್ರಿ ಗಸ್ತು: ಬೆಟ್ಟದ ತಪ್ಪಲಿನಲ್ಲಿರುವ ಕೆ.ಸಿ.ಬಡಾವಣೆ, ಜೆ.ಸಿ. ಬಡಾವಣೆಯಲ್ಲಿ ಇಂದಿನಿಂದ ರಾತ್ರಿ ವೇಳೆ ಗಸ್ತು ನಡೆಸಲು ಅರಣ್ಯ ಸಿಬ್ಬಂದಿಯಲ್ಲಿ ನಿಯೋಜಿಸಲಾಗಿದೆ. ಅಲ್ಲದೆ ಒಂದೆಡೆ ಬೋನ್ ಇಡಲಾಗಿದೆ. ಅಲ್ಲದೆ, ಕರುವಿನ ಕಳೇಬರ ಪತ್ತೆಯಾದ ಸ್ಥಳದ ಸುತ್ತಮುತ್ತಲಿನ ರಸ್ತೆಗಳಲ್ಲಿರುವ ಮನೆಗಳಲ್ಲಿ ಅಳವಡಿಸಿರುವ ಸಿಸಿ ಕ್ಯಾಮರಾ ಫುಟೇಜ್ ಪರಿಶೀಲಿಸಿ, ಚಿರತೆ ದೃಶ್ಯ ಸೆರೆಯಾಗಿದ್ದರೆ ಮಾಹಿತಿ ನೀಡುವಂತೆ ಕೋರಿದ್ದಾರೆ.

ಭಯ ಬೇಡ ಜಾಗೃತರಾಗಿರಿ: ಕರುವಿನ ಕಳೇಬರ ಪತ್ತೆಯಾದ ಸ್ಥಳಕ್ಕೆ ಶಾಸಕ ಎಸ್.ಎ.ರಾಮದಾಸ್ ಭೇಟಿ ನೀಡಿ ಪರಿಶೀಲಿಸಿದರು. ಸ್ಥಳದಲ್ಲೇ ಇದ್ದ ಅರಣ್ಯ ಇಲಾಖೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ಜನ ಆತಂಕ ಪಡುವ ಅಗತ್ಯವಿಲ್ಲ. ಈ ಭಾಗದಲ್ಲಿ ಚಿರತೆ ಸೆರೆಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸುತ್ತೇನೆ. ಸಂಜೆ ವೇಳೆ ಓಡಾಡುವಾಗ ಜನರು ಜಾಗೃತರಾಗಿರುವಂತೆ ಸಲಹೆ ನೀಡಿದರಲ್ಲದೆ, ಬೋನ್ ಇಡಲಾಗಿದೆ ಎಂದು ಹೇಳಿದರು.

ಗಂಭೀರವಾಗಿ ಪರಿಗಣಿಸಿ: ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಸಹ ಸ್ಥಳಕ್ಕೆ ಆಗಮಿಸಿ ಸ್ಥಳೀಯರಿಂದ ಮಾಹಿತಿ ಪಡೆದರು. ಅಲ್ಲದೆ, ಬೋನ್ ಇಟ್ಟಿರುವ ಸ್ಥಳಕ್ಕೆ ತೆರಳಿ, ಅರಣ್ಯ ಸಿಬ್ಬಂದಿ ಈ ವಿಷಯದಲ್ಲಿ ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ವಹಿಸಬಾರದು. ದೂರು ಬಂದ ಕೂಡಲೇ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಹೊಸ ದಾಖಲೆಯತ್ತ 'ಟಿಪ್ಪು ನಿಜಕನಸುಗಳು'

ನಾಳೆಯಿಂದ 2ನೇ ಹಂತದ ನಾಟಕ ಪ್ರದರ್ಶನ ಆರಂಭ



ಮೈಸೂರು, ಜ. 25– ರಂಗಾಯಣ ಮೈಸೂರು ಪ್ರಸ್ತುತಪಡಿಸಿದ ವಿಶೇಷ ರಂಗಪ್ರಯೋಗ 'ಟಿಪ್ಪು ನಿಜಕನಸುಗಳು' ಕನ್ನಡ ಆಧುನಿಕ ರಂಗಭೂಮಿಯಲ್ಲಿ ಹೊಸ ಇತಿಹಾಸ ಬರೆದಿದೆ. ಮೈಸೂರು ಅಲ್ಲದೆ, ರಾಜ್ಯದ ದಕ್ಷಿಣ ಭಾಗದ ಬೆಂಗಳೂರು, ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಮಂಗಳೂರು, ಹಾಸನ, ಪುತ್ತೂರು, ಕೊಡಗು ಮತ್ತು ಮಂಡ್ಯ ದಲ್ಲಿ ಒಟ್ಟು 26 ಪ್ರದರ್ಶನಗಳನ್ನು ಕಂಡಿದೆ.

ಈ ಎಲ್ಲಾ ಕಡೆ ಸಾವಿರಾರು ಸಂಖ್ಯೆಯಲ್ಲಿ ಟಿಕೆಟ್ ಖರೀದಿಸಿ ಬಂದಿದ್ದ ಪ್ರೇಕ್ಷಕರು ಪ್ರತಿ ರಂಗಮಂದಿರದಲ್ಲಿ 'ಸೋಲ್ಡ್‌ಔಟ್' ದಾಖಲೆಯನ್ನು ಬರೆದಿದ್ದಾರೆ. ಒಟ್ಟು 20 ಸಾವಿರಕ್ಕೂ ಹೆಚ್ಚು ಪ್ರೇಕ್ಷಕರು ಇದುವರೆಗೆ ನಾಟಕವನ್ನು ವೀಕ್ಷಿಸಿದ್ದಾರೆ. ನಾಟಕದ ಪ್ರದರ್ಶನದ ಆರಂಭದ ದಿನಗಳಲ್ಲಿ ನಾಟಕದ ಬಗ್ಗೆ ತಕರಾರು ಎತ್ತಿದ್ದ ಕೆಲವರು ನಾಟಕ ಪ್ರದರ್ಶನಗಳು ಸಾಗುತ್ತಿದ್ದಂತೆ ಮೌನಕ್ಕೆ ಜಾರಿದ್ದಾರೆ. ಟಿಪ್ಪು ಸುಲ್ತಾನನ ಇನ್ನೊಂದು ಕರಾಳ ಮುಖದ ಅನಾವರಣ ಸಾಕ್ಷಿ ಸಹಿತ ಪ್ರದರ್ಶನವಾಗುತ್ತಿದ್ದಂತೆ ಅವರಿಗೂ ಸತ್ಯದ ಅರಿವಾಗಿದೆ. ಇತ್ತೀಚೆಗೆ ಸಿಕ್ಕ ಅಧಿಕೃತ ಮಾಹಿತಿಯಂತೆ ಟಿಪ್ಪು ಸುಲ್ತಾನ ಕರ್ನಾಟಕದ ಆನೆಗುಂದಿ ಮತ್ತು ಹಂಪೆಯಲ್ಲಿ ಅನೇಕ ದೇವಾಲಯಗಳನ್ನು ನಾಶಪಡಿಸಿದ್ದು, ಬಯಲಾಗಿದೆ. ಈ ಎಲ್ಲಾ ಮುಚ್ಚಿಟ್ಟ ಸತ್ಯಗಳು ಈ ನಾಟಕದ ಮೂಲಕ ರಾಜ್ಯದಲ್ಲಿ ಹೊಸ ಅಲೆಯನ್ನು ಎಬ್ಬಿಸಿದೆ. ಇದೊಂದು ಆಧುನಿಕ ರಂಗಭೂಮಿಯ ಗೆಲುವಾಗಿದೆ ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇದೀಗ ರಂಗಾಯಣ ಉತ್ತರದ ಕಲ್ಯಾಣ ಕರ್ನಾಟಕದಲ್ಲಿ ಪ್ರದರ್ಶನ ಪ್ರವಾಸವನ್ನು ಜ.27ರಿಂದ ಫೆಬ್ರವರಿ 15ರವರೆಗೆ 2ನೇ ಹಂತದಲ್ಲಿ ಆರಂಭಿಸಿದೆ. ಜನವರಿ 27ರಂದು ಹುಬ್ಬಳ್ಳಿ, 29 ಧಾರವಾಡ, 31 ಬೆಳಗಾವಿ, ಫೆಬ್ರವರಿ 2 ವಿಜಯಪುರ, 5 ಬಾಗಲಕೋಟೆ, 8 ಬೀದರ್, 9 ಮತ್ತು 10 ಕಲಬುರಗಿ, 12 ರಾಯಚೂರು, 14 ಬಳ್ಳಾರಿ ಹೀಗೆ ಪ್ರದರ್ಶನ ನೀಡಲಿದ್ದು, ಈ ಎಲ್ಲಾ ಕಡೆ ಬಹುತೇಕ ಟಿಕೆಟ್‌ಗಳು ಖರೀದಿಯಾಗಿವೆ.

ಒಟ್ಟು ನೂರು ಪ್ರದರ್ಶನಗಳ ಗುರಿಯೊಂದಿಗೆ ಹೊರಟಿರುವ ರಂಗಾಯಣ ಫೆಬ್ರವರಿಯ ಅಂತ್ಯಕ್ಕೆ 50 ಪ್ರದರ್ಶನಗಳನ್ನು ಮುಗಿಸಲಿದೆ. 'ಟಿಪ್ಪು ನಿಜಕನಸುಗಳು' ನಾಟಕ ಕೃತಿ ಮಾರಾಟದಲ್ಲೂ ದಾಖಲೆ ಬರೆದಿದೆ. ಈಗಾಗಲೇ 12ನೇ ಆವೃತ್ತಿ ಮುದ್ರಣ ಕಂಡಿದ್ದು, ಈ ಆವೃತ್ತಿಯನ್ನು ಮಾಜಿ ಸಚಿವ ಶಾಸಕ ಸಿ.ಟಿ. ರವಿ, ಧಾರವಾಡದಲ್ಲಿ ಬಿಡುಗಡೆ ಮಾಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ತನ್ನದೇ ಹಣ ಕದ್ದ ಖದೀಮನ ಸ್ನೇಹಿತನ ಸಹಾಯದಿಂದ ಹಿಡಿದ ಪೊಲೀಸ್ ಅಧಿಕಾರಿ!

ಮೈಸೂರು, ಜ. 25– ಪೊಲೀಸ್ ಅಧಿಕಾರಿಯ ಕೈಯಿಂದ ಹಣ ಕಿತ್ತುಕೊಂಡು ಪರಾರಿಯಾಗುತ್ತಿದ್ದ ಖದೀಮನನ್ನು ಸ್ನೇಹಿತನ ಸಹಕಾರದೊಂದಿಗೆ ಪೊಲೀಸ್ ಅಧಿಕಾರಿಯೇ ಹಿಡಿದ ಘಟನೆ ಮೈಸೂರಿನ ಜಗನ್ಮೋಹನ ಪ್ಯಾಲೇಸ್ ಆವರಣದಲ್ಲಿ ನಡೆದಿದೆ.

ಕೆಎಸ್‌ಆರ್‌ಪಿ 5ನೇ ಪಡೆಯಲ್ಲಿ ಶಾಖಾಧೀಕ್ಷರಾಗಿರುವ ಹೆಚ್.ಪಿ. ಮಧುಸೂದನ್ ಅವರು ಜನವರಿ 22ರಂದು ಸಂಜೆ 4.30ರ ಸುಮಾರಿನಲ್ಲಿ ಜಗನ್ಮೋಹನ ಪ್ಯಾಲೇಸ್‌ನಲ್ಲಿ ನಡೆಯುತ್ತಿದ್ದ ಹಳೇ ಚಿತ್ರಗೀತೆಗಳ ರಸಮಂಜರಿ ಕಾರ್ಯಕ್ರಮ ವೀಕ್ಷಿಸಲು ಸ್ನೇಹಿತ ಆನಂದ್ ಅವರೊಂದಿಗೆ ತೆರಳಿದ್ದರು. ಜಗನ್ಮೋಹನ ಅರಮನೆಯ ಪಾರ್ಕಿಂಗ್ ಸ್ಥಳದಲ್ಲಿ ಸ್ನೇಹಿತನಿಗೆ ಕೊಡಲು 2 ಸಾವಿರ ರೂ.ಗಳನ್ನು ಅವರು ಕೈಯ್ಯಲ್ಲಿ ಹಿಡಿದಿದ್ದಾಗ ಬೆಂಗಳೂರಿನ ರವಿ ಎಂಬ ಖದೀಮ ಅವರ ಕೈಯಿಂದ ಹಣ ಕಿತ್ತುಕೊಂಡು ಓಡಿ ಹೋಗಿದ್ದಾನೆ. ತಕ್ಷಣ ಮಧುಸೂದನ್ ಅವರು ಕಳ್ಳ ಕಳ್ಳ ಎಂದು ಕೂಗುತ್ತಾ ಬೆನ್ನತ್ತಿ ಸ್ನೇಹಿತ ಆನಂದ್ ಸಹಕಾರದೊಂದಿಗೆ ಆತನನ್ನು ಹಿಡಿದು, ದೇವರಾಜ ಠಾಣೆ ಪೊಲೀಸರಿಗೆ ಒಪ್ಪಿಸಿದ್ದಾರೆ. ಈ ಸಂಬಂಧ ದೇವರಾಜ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಜೆಕೆ ಟೈರ್ಸ್ ಕಾರ್ಮಿಕ ಸಾವು

ಮೈಸೂರು, ಜ. 25– ಬೈಕ್‌ಗೆ ಮಾರುತಿ ಓಮ್ನಿ ಡಿಕ್ಕಿ ಹೊಡೆದ ಪರಿಣಾಮ ಜೆಕೆ ಟೈರ್ಸ್ ಕಾರ್ಮಿಕ ಸಾವನ್ನಪ್ಪಿದ ಘಟನೆ ಮೈಸೂರು ರಿಂಗ್ ರಸ್ತೆಯ ಪುಷ್ಪಾಶ್ರಮ ಜಂಕ್ಷನ್‌ನಲ್ಲಿ ಸಂಭವಿಸಿದೆ.

ಮೆಣಸಿಕ್ಯಾತನಹಳ್ಳಿ ನಿವಾಸಿ ಎಂ.ಎನ್.ಮಹೇಶ್ ಮೃತಪಟ್ಟ ಜೆಕೆ ಟೈರ್ಸ್ ಕಾರ್ಮಿಕ. ಇವರು ಕೆಲಸಕ್ಕೆ ಹೋಗುವ ಸಲುವಾಗಿ ಜ.23ರಂದು ಮಧ್ಯಾಹ್ನ ಗ್ರಾಮದಿಂದ ಕಾರ್ಖಾನೆಗೆ ಹೀರೋ ಹೋಂಡಾ ಸ್ಪ್ಲೆಂಡರ್ ಪ್ರೊ ಬೈಕ್ (ಕೆಎ 11–ಡಬ್ಲ್ಯೂ 6111)ನಲ್ಲಿ ತೆರಳಿದ್ದಾರೆ. ಪುಷ್ಪಾಶ್ರಮ ಜಂಕ್ಷನ್ ಬಳಿ ಬರುತ್ತಿದ್ದಾಗ ಎದುರಿನಿಂದ ಬಂದ ಮಾರುತಿ ಓಮ್ನಿ (ಕೆಎ 03–ಎಂಬಿ 6826) ಇವರ ಬೈಕ್‌ಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ.

23 ಡಿವೈಎಸ್ಪಿ, 103 ಪೊಲೀಸ್ ಇನ್ಸ್‌ಪೆಕ್ಟರ್ ವರ್ಗಾವಣೆ



ಮೈಸೂರು, ಜ. 25– ರಾಜ್ಯ ಸರ್ಕಾರ 23 ಡಿವೈಎಸ್ಪಿ ಮತ್ತು 103 ಪೊಲೀಸ್ ಇನ್ಸ್‌ಪೆಕ್ಟರ್‌ಗಳನ್ನು ವರ್ಗಾವಣೆ ಮಾಡುವ ಮೂಲಕ ಪೊಲೀಸ್ ಇಲಾಖೆಗೆ ಮೇಜರ್ ಸರ್ಜರಿ ಮಾಡಿದೆ.

ಮೈಸೂರು ನಗರ ವ್ಯಾಪ್ತಿಯಲ್ಲಿ ಹೊಸದಾಗಿ ಸೃಷ್ಟಿಸಲಾಗಿರುವ ವಿಜಯನಗರ ಉಪವಿಭಾಗಕ್ಕೆ ಮಡಿಕೇರಿ ಡಿವೈಎಸ್ಪಿಯಾಗಿದ್ದ ಗಜೇಂದ್ರ ಪ್ರಸಾದ್ ಅವರನ್ನು ನಿಯುಕ್ತಿಗೊಳಿಸಲಾಗಿದೆ. ಈ ಮೂಲಕ ಗಜೇಂದ್ರಪ್ರಸಾದ್ ವಿಜಯನಗರ ಉಪವಿಭಾಗದ ಪ್ರಥಮ ಎಸಿಪಿಯಾಗಿದ್ದಾರೆ. ಮೈಸೂರಿನ ಪೊಲೀಸ್ ಅಕಾಡೆಮಿ ಡಿವೈಎಸ್ಪಿ ಪುಟ್ಟಸ್ವಾಮಿಗೌಡ ಅವರನ್ನು ಬೆಂಗಳೂರು ಸಿಸಿಬಿಗೆ, ಮೈಸೂರಿನ ಸಿಸಿಬಿ ಎಸಿಪಿ ಅಶ್ವಥನಾರಾಯಣ ಅವರನ್ನು ಎನ್‌ಆರ್ ಉಪವಿಭಾಗಕ್ಕೆ, ಶ್ರೀರಂಗಪಟ್ಟಣ ಡಿವೈಎಸ್ಪಿ ಸಂದೇಶ್‌ಕುಮಾರ್ ಅವರನ್ನು ಮೈಸೂರಿನ ಸಿಸಿಬಿಗೆ, ಸಿಐಡಿಗೆ ವರ್ಗಾವಣೆ ಆದೇಶದಲ್ಲಿದ್ದ ಎಂ.ಜಗದೀಶ್ ಅವರನ್ನು ಮಡಿಕೇರಿ ಡಿವೈಎಸ್ಪಿಯಾಗಿ ಹಾಗೂ ಎಸಿಬಿ ಡಿವೈಎಸ್ಪಿ ಬಿ.ಆರ್. ಗೋಪಿ ಅವರನ್ನು ಅರಸೀಕೆರೆಗೆ ವರ್ಗಾವಣೆ ಮಾಡಲಾಗಿದೆ.

ಪೊಲೀಸ್ ಇನ್ಸ್‌ಪೆಕ್ಟರ್: ಮಂಡ್ಯ ಪಶ್ಚಿಮ ಠಾಣೆಯ ಇನ್ಸ್‌ಪೆಕ್ಟರ್ ಜಿ.ಎನ್. ರಮೇಶ್ ಅವರನ್ನು ಮೈಸೂರಿನ ಅಶೋಕಪುರಂ ಠಾಣೆಗೆ, ಎಸಿಬಿ ಇನ್ಸ್‌ಪೆಕ್ಟರ್ ಜಿ.ಪುರುಷೋತ್ತಮ್ ಅವರನ್ನು ಮೈಸೂರು ಸೆನ್ ಠಾಣೆಗೆ, ಎನ್‌ಆರ್ ಇನ್ಸ್‌ಪೆಕ್ಟರ್ ಅಜರುದ್ದೀನ್ ಅವರನ್ನು, ಚಾಮರಾಜನಗರ ಚೆಸ್ಕಾಂ ಜಾಗೃತ ದಳಕ್ಕೆ ವರ್ಗಾಯಿಸಲಾಗಿದ್ದು, ಅವರ ಸ್ಥಳಕ್ಕೆ ನಂಜನಗೂಡು ನಗರ ಠಾಣೆಯ ಇನ್ಸ್‌ಪೆಕ್ಟರ್ ಲಕ್ಷ್ಮೀಕಾಂತ ತಳವಾರ್ ಅವರನ್ನು ವರ್ಗಾಯಿಸಲಾಗಿದ್ದು, ಸಾಲಿಗ್ರಾಮ ಠಾಣೆಯ ಇನ್ಸ್‌ಪೆಕ್ಟರ್ ಆರ್. ಶ್ರೀಕಾಂತ್ ಅವರನ್ನು ಚಾಮರಾಜ ನಗರ ಪೂರ್ವ ಠಾಣೆಗೆ, ಸಂತೇ ಮರಳ್ಳಿ ಇನ್ಸ್‌ಪೆಕ್ಟರ್ ಬಿ.ಮಹೇಶ್ ಅವರನ್ನು ತಿ.ನರಸೀಪುರಕ್ಕೆ ವರ್ಗಾಯಿಸಲಾಗಿದ್ದು, ಅವರ ಸ್ಥಳಕ್ಕೆ ಹೆಚ್.ಡಿ.ಕೋಟೆಯ ಬಸವರಾಜ್ ಅವರನ್ನು ವರ್ಗಾವಣೆ ಮಾಡಲಾಗಿದೆ. ರಾಜ್ಯ ಗುಪ್ತ ವಾರ್ತೆಗೆ ವರ್ಗಾವಣೆ ಆದೇಶದಲ್ಲಿದ್ದ ಎಂ.ಎಲ್.ಶೇಖರ್ ಅವರನ್ನು ಮೈಸೂರು ದಕ್ಷಿಣ ಠಾಣೆಗೆ, ಅಲ್ಲಿದ್ದ ಬಿ.ಎಸ್. ಶಶಿಕುಮಾರ್ ಅವರನ್ನು ಹನೂರು ಠಾಣೆಗೆ ವರ್ಗಾವಣೆ ಮಾಡಲಾಗಿದೆ. ಹನೂರಿನ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ಅವರನ್ನು ರಾಮಾಪುರಕ್ಕೆ, ಅಲ್ಲಿದ್ದ ಎಂ.ನಂಜುಂಡಸ್ವಾಮಿ ಅವರನ್ನು ಮಹದೇಶ್ವರ ಬೆಟ್ಟಕ್ಕೆ ವರ್ಗಾಯಿಸಿದ್ದು, ರಾಜ್ಯ ಗುಪ್ತವಾರ್ತೆಯ ಎ. ಜಾಯ್ ಅಂತೋಣಿ ಅವರನ್ನು ಮಂಡ್ಯ ನಗರ ವೃತ್ತಕ್ಕೆ, ಕೊಡಗು ಸೆನ್ ಠಾಣೆಯ ಇನ್ಸ್‌ಪೆಕ್ಟರ್ ಎನ್.ಜಿ. ಕೃಷ್ಣಪ್ಪ ಅವರನ್ನು ಕೊಳ್ಳೇಗಾಲ ಬೆಟ್ಟಕ್ಕೆ, ಐಎಸ್‌ಡಿ ವರ್ಗಾವಣೆ ಆದೇಶದಲ್ಲಿರುವ ಕೆ.ಎಸ್.ನಿರಂಜನ್ ಅವರನ್ನು, ನಾಗಮಂಗಲ ವೃತ್ತಕ್ಕೆ, ಮೈಸೂರು ಪಿಟಿಎಸ್‌ನಲ್ಲಿದ್ದ ಎಸ್.ಗಂಗಾಧರ್ ಅವರನ್ನು ಹಾಸನ ಜಿಲ್ಲೆ ಆಲೂರು ಠಾಣೆಗೆ, ಹಾಸನ ಗ್ರಾಮಾಂತರ ಠಾಣೆಯ ಇನ್ಸ್‌ಪೆಕ್ಟರ್ ಎಸ್. ಆರೋಕಿಯಪ್ಪ ಅವರನ್ನು ಹಾಸನ ಪಿಟಿಎಸ್‌ಗೆ, ಬೆಂಗಳೂರಿನ ಎಸ್‌ಸಿಆರ್‌ಬಿ ಇನ್ಸ್‌ಪೆಕ್ಟರ್ ಸ್ವಾಮಿನಾಥ್ ಅವರನ್ನು ಹಾಸನ ಬಡಾವಣೆ ಠಾಣೆಗೆ, ಬೆಂಗಳೂರಿನ ಜೆಜೆ ನಗರ ಠಾಣೆ ಇನ್ಸ್‌ಪೆಕ್ಟರ್ ಡಿ.ಜಿ. ಮಂಜು ಅವರನ್ನು ಹಾಸನ ಗ್ರಾಮಾಂತರ ಠಾಣೆಗೆ ವರ್ಗಾವಣೆ ಮಾಡಿ ಆದೇಶ ಹೊರಡಿಸಲಾಗಿದೆ.

ಮೂರು ಪ್ರಕರಣದಲ್ಲಿ ಸರ ಕಳೆದುಕೊಂಡ ಗೃಹಿಣಿಯರು

ಎರಡರಲ್ಲಿ ಖದೀಮರು ಕಿತ್ತುಕೊಂಡರೆ, ಮತ್ತೊಂದರಲ್ಲಿ ನೂಕುನುಗ್ಗಲಲ್ಲಿ ಸರ ನಾಪತ್ತೆ

ಮೈಸೂರು, ಜ. 25– ಪ್ರತ್ಯೇಕ ಪ್ರಕರಣಗಳಲ್ಲಿ ಮೂವರು ಮಹಿಳೆಯರು ಸರ ಕಳೆದುಕೊಂಡಿದ್ದಾರೆ. ಎರಡರಲ್ಲಿ ಖದೀಮರು ಕಿತ್ತುಕೊಂಡು ಪರಾರಿಯಾಗಿದ್ದರೆ, ಮೊತ್ತೊಂದರಲ್ಲಿ ನೂಕುನುಗ್ಗಲಲ್ಲಿ ಸರ ನಾಪತ್ತೆಯಾಗಿದೆ.

ಪ್ರಕರಣ–1: ದೇವರ ದರ್ಶನಕ್ಕಾಗಿ ಚಾಮುಂಡಿಬೆಟ್ಟಕ್ಕೆ ಬಂದಿದ್ದ ಮಹಿಳೆಯ ಚಿನ್ನದ ಸರ ಕಳವು ಮಾಡಿರುವ ಘಟನೆ ವರದಿಯಾಗಿದೆ. ಕೆ.ಆರ್.ಪೇಟೆಯ ಹೇಮಾವತಿ ಬಡಾವಣೆ ನಿವಾಸಿ ಭಾಗ್ಯಮ್ಮ(47) ಮತ್ತಿತರರು ಕೆಎಸ್‌ಆರ್‌ಟಿಸಿ ಬಸ್ (ಕೆಎ 11–ಎಫ್ 0172) ಅನ್ನು ಬಾಡಿಗೆಗೆ ಪಡೆದು ಚಾಮುಂಡಿಬೆಟ್ಟಕ್ಕೆ ಜ.22ರಂದು ಆಗಮಿಸಿದ್ದರು. ದೇವರ ದರ್ಶನ ಮುಗಿಸಿ ಸಂಜೆ 7.15ರ ಸುಮಾರಿನಲ್ಲಿ ಬಸ್ ನಿಂತಿದ್ದ ಸ್ಥಳಕ್ಕೆ ಬರುವುದರೊಳಗಾಗಿ ಅವರ ಕತ್ತಿನಲ್ಲಿದ್ದ 40 ಗ್ರಾಂ ತೂಕದ ಚಿನ್ನದ ಸರವನ್ನು ಕಳವು ಮಾಡಲಾಗಿದೆ. ಕೆಆರ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಕರಣ–2: ಪತಿಯೊಂದಿಗೆ ಶಾಪಿಂಗ್‌ಗೆ ತೆರಳಿದ್ದ ಗೃಹಿಣಿಯ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾದ ಬಗ್ಗೆ ವರದಿಯಾಗಿದೆ. ಮೈಸೂರಿನ ಗಂಗೋತ್ರಿ ಲೇಔಟ್ ನಿವಾಸಿ ಎಂ.ಎನ್. ಚಂದ್ರಮತಿ(67) ಸರ ಕಳೆದುಕೊಂಡವರಾಗಿದ್ದು, ಇವರು ತಮ್ಮ ಪತಿಯೊಂದಿಗೆ ಲಾಯಲ್ ವರ್ಲ್ಡ್‌ನಲ್ಲಿ ಮನೆ ಸಾಮಗ್ರಿ ಖರೀದಿಸಲು ಜ.23ರಂದು ಸಂಜೆ ಗಂಗೋತ್ರಿ ಲೇಔಟ್ 1ನೇ ಕ್ರಾಸ್‌ನಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಎದುರಿನಿಂದ ಬಂದ ಖದೀಮ ಮಾಂಗಲ್ಯ ಸರ ಕಿತ್ತಿದ್ದಾನೆ. ಸರವು ಅವರ ಬ್ಯಾಗ್‌ನಲ್ಲಿ ಸಿಕ್ಕಿಕೊಂಡಿದ್ದರಿಂದ ತುಂಡಾಗಿ 30 ಗ್ರಾಂನಷ್ಟು ಸರ ಖದೀಮನ ಪಾಲಾಗಿದೆ. ಸರ ಕಿತ್ತ ಖದೀಮ ಅನತಿ ದೂರದಲ್ಲಿ ಸ್ಟಾರ್ಟ್ ಮಾಡಿ ನಿಲ್ಲಿಸಿಕೊಂಡಿದ್ದ ಮತ್ತೊಬ್ಬನ ಬೈಕ್ ಹತ್ತಿ ಪರಾರಿಯಾಗಿದ್ದಾನೆ. ಈ ಸಂಬಂಧ ಸರಸ್ವತಿಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಕರಣ–3: ಸುತ್ತೂರು ಜಾತ್ರೆಯ ವಸ್ತುಪ್ರದರ್ಶನಕ್ಕೆ ತೆರಳಿದ್ದ ಗೃಹಿಣಿಯ ಮಾಂಗಲ್ಯ ಸರ ಕಳುವಾದ ಬಗ್ಗೆ ವರದಿಯಾಗಿದೆ.

ಚಾಮರಾಜನಗರ ತಾಲೂಕು ಬಡಗಲಪುರ ಗ್ರಾಮದ ಗೃಹಿಣಿ ವಿಮಲಾ ಸರ ಕಳೆದುಕೊಂಡವರಾಗಿದ್ದು, ಇವರು ಪತಿ ಬಿ.ಟಿ. ರಾಜೇಂದ್ರ ಪ್ರಸಾದ್ ಅವರೊಂದಿಗೆ ಸುತ್ತೂರು ಜಾತ್ರಾ ಮಹೋತ್ಸವ ವಸ್ತುಪ್ರದರ್ಶನ ವೀಕ್ಷಿಸಲು ಜ.22ರಂದು ಮಧ್ಯಾಹ್ನ ತೆರಳಿದ್ದಾರೆ. ಮಧ್ಯಾಹ್ನ 2 ಗಂಟೆ ಸುಮಾರಿನಲ್ಲಿ ವಸ್ತುಪ್ರದರ್ಶನದ ಗೇಟ್‌ನಲ್ಲಿ ಜನಸಂದಣಿ ಹೆಚ್ಚಾಗಿದ್ದು, ನೂಕುನುಗ್ಗಲಿನಲ್ಲಿ ಅವರು ಧರಿಸಿದ್ದ 55 ಗ್ರಾಂ ತೂಕದ ಮಾಂಗಲ್ಯ ಸರ ಕಳವಾಗಿದೆ. ಈ ಸಂಬಂಧ ವಿಮಲಾ ಪತಿ ರಾಜೇಂದ್ರ ಪ್ರಸಾದ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಬಿಳಿಗೆರೆ ಠಾಣೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಕಾರ್ಮಿಕರಿಗೆ ಶಾಸಕ ರಾಮದಾಸ್ ಕಿಟ್ ವಿತರಣೆ



ಮೈಸೂರು,ಜ.25(ಆರ್‌ಕೆಬಿ)– ಅಸಂಘಟಿತ ವಲಯದಲ್ಲಿ ಕಾರ್ಯನಿರ್ವಹಿಸುವ ಕಾರ್ಮಿಕರಿಗೆ ಸರ್ಕಾರದ ಸವಲತ್ತುಗಳನ್ನು ತಲುಪಿಸುವ ನಿಟ್ಟಿನಲ್ಲಿ ಕಾರ್ಯಯೋಜನೆ ರೂಪಿಸಿರುವ ಶಾಸಕ ರಾಮದಾಸ್, ಅದರ ಅಂಗವಾಗಿ ಬುಧವಾರ ಕಿಟ್‌ಗಳನ್ನು ವಿತರಿಸಿದರು.

ಕೆ.ಆರ್.ಕ್ಷೇತ್ರ ವ್ಯಾಪ್ತಿಯ ಕುವೆಂಪುನಗರ ಹುಡ್ಕೋ ಬಡಾವಣೆಯ ಗಣಪತಿ ದೇವಾಲಯದ ಪಾರ್ಕಿನಲ್ಲಿ ಏರ್ಪಡಿಸಿದ್ದ ಸರ್ಕಾರಿ ಸವಲತ್ತುಗಳ ಅದಾಲತ್, ವಾರ್ಡಿನ ಸಮಸ್ಯೆಗಳ ಪರಿಹಾರ ಕಾರ್ಯಕ್ರಮ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮದಲ್ಲಿ ವಿತರಣೆ ಮಾಡಲಾಯಿತು. ಕಾರ್ಮಿಕ ಇಲಾಖೆ ವತಿಯಿಂದ ಪೇಂಟರ್‌ಗಳಿಗೆ, ಕಟ್ಟಡ ಕಟ್ಟುವ ಕಾರ್ಮಿಕರಿಗೆ, ಮಕ್ಕಳಿಗೆ ಶಿಕ್ಷಣದ ಕಿಟ್ ಹಾಗೂ ನೂರು ಮಂದಿಗೆ ಕೊರೊನಾ ಸೋಂಕಿನ ವಿರುದ್ಧ ಹೋರಾಡುವ ಬೂಸ್ಟರ್ ಡೋಸ್ ಅನ್ನು 100 ಮಂದಿಗೆ ವಿತರಣೆ ಮಾಡುವ ಮೂಲಕ ಹೊಸದೊಂದು ಕಾರ್ಯಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಶಾಸಕ ರಾಮದಾಸ್, ಸವಲತ್ತುಗಳಿಗಾಗಿ ಸರ್ಕಾರಿ ಕಚೇರಿ ಅಲೆಯುವುದನ್ನು ತಪ್ಪಿಸುವ ಸಲುವಾಗಿಯೇ ಈ ಮಾದರಿಯ ಕಾರ್ಯಕ್ರಮವನ್ನು ಕ್ಷೇತ್ರದಾದ್ಯಂತ 19 ದಿನಗಳ ಕಾಲ ಆಯೋಜಿಸಲಾಗಿದೆ. ಅದರ ಮುಂದುವರಿದ ಭಾಗವಾದ ಇಂದು ಕಾರ್ಮಿಕ ವರ್ಗಕ್ಕೆ ಅತೀ ಹೆಚ್ಚಿನ ನೆರವು ನೀಡಲಾಗಿದೆ ಎಂದರು. ಕಂದಾಯ, ಪಡಿತರ, ಸ್ವಚ್ಛತೆ, ಒಳ ಚರಂಡಿ, ಆಧಾರ್ ಕಾರ್ಡ್, ಹಕ್ಕುಪತ್ರ, ಆರೋಗ್ಯ ಸೇರಿದಂತೆ ಎಲ್ಲಾ ಬಗೆಯ ಸವಲತ್ತುಗಳನ್ನು ಒಂದೇ ಸೂರಿನಡಿ ಕಲ್ಪಿಸಲಾಗುತ್ತಿದ್ದು, ಸಾರ್ವಜನಿಕರು ಕಾರ್ಯಕ್ರಮದ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ಮೇಯರ್ ಶಿವಕುಮಾರ್, ಪಾಲಿಕೆ ಸದಸ್ಯರು, ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಪಾಂಡವಪುರದ ಚಾಗಶೆಟ್ಟಿಹಳ್ಳಿಯಲ್ಲಿ ಹೊಯ್ಸಳರ ಕಾಲದ ವೀರಗಲ್ಲು ಶಾಸನ ಶಿಲ್ಪ ಪತ್ತೆ

ಮೈಸೂರು, ಜ. 25(ಆರ್‌ಕೆ)– ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕು, ಚಾಗಶೆಟ್ಟಿಹಳ್ಳಿ ಗ್ರಾಮದಲ್ಲಿ 13ನೇ ಶತಮಾನದ ಹೊಯ್ಸಳರ ಕಾಲದ ವೀರಗಲ್ಲು ಶಾಸನ ಶಿಲ್ಪ ಪತ್ತೆಯಾಗಿದೆ.

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ (Centre of Excellence for Studies in Classical Kannada)ದ ವತಿಯಿಂದ ನಡೆಸಿದ ಅನ್ವೇಷಣೆಯಲ್ಲಿ ಪುರಾತನ ಐತಿಹಾಸಿಕ ಹಾಗೂ ಮಹತ್ವಪೂರ್ಣ ವೀರಗಲ್ಲು ಪಾಂಡವಪುರದಿಂದ ಪಶ್ಚಿಮ ದಿಕ್ಕಿಗೆ 6 ಕಿ.ಮೀ. ದೂರದಲ್ಲಿರುವ ಚಾಗಶೆಟ್ಟಿಹಳ್ಳಿಯ ಪೂರ್ವ ದಿಕ್ಕಿನಲ್ಲಿ ವಿಜಯನಗರ ಅರಸರ ಕಾಲದಲ್ಲಿ ನಿರ್ಮಾಣಗೊಂಡಿರುವ ಶ್ರೀ ಶಂಭುಲಿಂಗೇಶ್ವರ ದೇವಾಲಯದ ಬಲಪಾರ್ಶ್ವದಲ್ಲಿ ಪೂರ್ವ ದಿಕ್ಕಿಗೆ ಮುಖ ಮಾಡಿ ನಿಲ್ಲಿಸಿರುವ ಹೊಯ್ಸಳರ ವೀರ ಬಲ್ಲಾಳನ ಕಾಲದ ವೀರಗಲ್ಲನ್ನು ಪತ್ತೆ ಮಾಡಲಾಗಿದೆ.

ಮೈಸೂರಿನ ಮಾನಸ ಗಂಗೋತ್ರಿಯಲ್ಲಿರುವ ಶಾಸ್ತ್ರೀಯ ಕನ್ನಡ ಅತ್ಯುತ್ತಮ ಅಧ್ಯಯನ ಕೇಂದ್ರದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ. ಎನ್.ಎಂ. ತಳವಾರ ಹಾಗೂ ಪುರಾತತ್ವ ಹಾಗೂ ಪಾರಂಪರಿಕ ತಜ್ಞ ಪ್ರೊ.ಎನ್.ಎಸ್. ರಂಗರಾಜು, ಜನವರಿ 6ರಂದು ಈ ವೀರಗಲ್ಲನ್ನು ಭೂಮಿಯಿಂದ ಸುರಕ್ಷಿತವಾಗಿ ಹೊರ ತೆಗೆದು ಶಾಸನದ ಪಡಿಯಚ್ಚನ್ನು ತೆಗೆದುಕೊಳ್ಳಲಾಯಿತು ಎಂದರು.

ಯುದ್ಧದಲ್ಲಿ ಹೋರಾಡಿ ಮಡಿದ ವೀರರ ಸ್ಮರಣಾರ್ಥ ವೀರಗಲ್ಲುಗಳನ್ನು ನಿಲ್ಲಿಸಲಾಗುತ್ತಿತ್ತು. ಅದೇ ರೀತಿ ಮಡಿದ ಪತಿಯನ್ನನುಸರಿಸಿ ಪತ್ನಿಯೂ ಸಹ ಸಾವನ್ನಪ್ಪುತ್ತಿದ್ದರಿಂದ ಅವರ ನೆನಪಿಗೂ ಮಹಾಸತಿ ಕಲ್ಲುಗಳನ್ನೂ ನಿಲ್ಲಿಸಲಾಗುತ್ತಿತ್ತು. ಆದರೆ, ಚಾಗಶೆಟ್ಟಿಯಲ್ಲಿ ಸಿಕ್ಕಿರುವ ವೀರಗಲ್ಲು, ತನ್ನ ಪತ್ನಿಯನ್ನು ಕೊಂದು ಪತಿಯು ಮಡಿದಿರುವ ನೆನಪಿಗಾಗಿ ನಿಲ್ಲಿಸಿರಬಹುದೆಂದು ಊಹಿಸಲಾಗಿದೆ.

ಹೊಯ್ಸಳರು ಸೋಪುಗಲ್ಲುಗಳನ್ನು ದೇವಾಲಯ ಹಾಗೂ ಶಾಸನಗಳ ಕೆತ್ತನೆಯಲ್ಲಿ ಬಳಸುತ್ತಿದ್ದರು. ಪಾಂಡವಪುರ ತಾಲೂಕಿನಾದ್ಯಂತ ಇರುವ ಹೊಯ್ಸಳರ ಕಾಲದ ದೇವಾಲಯಗಳಲ್ಲಿ ಕೆಲ ಭಾಗಗಳನ್ನು ಮಾತ್ರ ಸೋಪುಗಲ್ಲಿನಿಂದ ಕೆತ್ತಲಾಗಿದೆ. ಈಗ ಪತ್ತೆಯಾಗಿರುವ ಶಾಸನ ಶಿಲ್ಪವು 4 ಅಡಿ 10 ಇಂಚು ಉದ್ದ, ಮೂರು ಅಡಿ ಶಿಲ್ಪಪಟ್ಟಿಕೆಗಳನ್ನು ಹೊಂದಿದೆ. ಪಟ್ಟಿಕೆಗಳ ಮಧ್ಯೆ ಎಂಟು ಸಾಲುಗಳಲ್ಲಿ ಬರೆದಿರುವ ಹೊಯ್ಸಳರ ಕಾಲದ ಕನ್ನಡ ಲಿಪಿಯ ಶಾಸನ ಪಾಠವಿದೆ ಎಂದು ಪ್ರೊ. ರಂಗರಾಜು ತಿಳಿಸಿದರು.

ಶಾಸನ ಪಾಠದಲ್ಲಿ ಹೊಯ್ಸಳ ದೊರೆ 2ನೇ ವೀರ ಬಲ್ಲಾಳನ ಬಿರುದಾವಳಿಗಳನ್ನು ಹೊಂದಿದ್ದು, ಸತಿ ವೀರಮಾಸ್ತಿ ಮತ್ತು ಪತಿ ಮಸನಯ್ಯ ಹಾಗೂ ಆತನ ತಂದೆ ರಾಮಾಜೀ ಹೆಸರನ್ನು ಉಲ್ಲೇಖಿಸಲಾಗಿದೆ. ಚಾಗಶೆಟ್ಟಿಯಳ್ಳಿಯು ಹೊಯ್ಸಳರ ಕಾಲದ ಪ್ರಮುಖ ಆಡಳಿತ ಕೇಂದ್ರವಾಗಿತ್ತು. ಮಸಣಯ್ಯ ಸ್ಥಾನಿಕನಾಗಿದ್ದ. ಆತ ಯುದ್ಧದಲ್ಲಿ ಕಾದಾಡಿ ಗಾಯಗೊಂಡು ಮರಣ ಹೊಂದುವುದು ಖಚಿತವಾದಾಗ ಪತಿಯನ್ನು ಅಗಲಿ ಬದುಕಲಾರದೆ ವೀರಪತ್ನಿ ಸಹ ಮಸಣಯ್ಯನ ಜೊತೆ ಸಾವನ್ನಪ್ಪಲಿಚ್ಛಿಸಿ ತನ್ನನ್ನು ತಾನು ಚುಚ್ಚಿಕೊಳ್ಳುವ ಜೊತೆಗೆ ಪತಿಯಿಂದಲೂ ಚುಚ್ಚಿಸಿಕೊಂಡು ಮರಣ ಹೊಂದಿದ್ದಾಳೆ. ಅವರಿಬ್ಬರ ತ್ಯಾಗ, ಬಲಿದಾನದ ಸ್ಮರಣಾರ್ಥ ಅಲ್ಲಿ ವೀರಗಲ್ಲುಗಳನ್ನು ನಿಲ್ಲಿಸಲಾಗಿದೆ ಎಂಬುದು ತಿಳಿದುಬಂದಿದೆ ಎಂದರು.

ಈ ಅಪರೂಪದ ವೀರಗಲ್ಲನ್ನು ಮೈಸೂರಿನ ಪುರಾತತ್ವ ಇಲಾಖೆ ಸಂಗ್ರಹಾಲಯದಲ್ಲಿ ಸಂರಕ್ಷಿಸಲು ಮುಂದಾಗಿದ್ದು, ಪಾರಂಪರಿಕ ಆಯುಕ್ತರೊಂದಿಗೆ ಚರ್ಚಿಸುತ್ತಿದ್ದೇವೆ ಎಂದು ಪ್ರೊ. ರಂಗರಾಜು ತಿಳಿಸಿದರು. ಪುರಾತತ್ವ ಸಂಶೋಧಕರಾದ ಡಾ. ಸಿ.ಎ.ಶಶಿಧರ, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಯೋಜನಾ ನಿರ್ದೇಶಕ ಪ್ರೊ.ಎನ್.ಎಂ.ತಳವಾರ, ಕಚೇರಿ ಅಧೀಕ್ಷಕ ಹೆಚ್.ಸಿ.ಲಿಂಗರಾಜು, ಕಿರಿಯ ಸಂಶೋಧಕ ಡಾ.ಎ.ಪಿ.ರಕ್ಷಿತ್ ಈ ಶಾಸನ ಶಿಲ್ಪ ಕಂಡು ಹಿಡಿಯಲು ಅನ್ವೇಷಣೆ ನಡೆಸಿದ್ದಾರೆ. ಅದನ್ನು ಹೊರತೆಗೆಯಲು ಸಹಕರಿಸಿದ ಗ್ರಾಮದ ಮುಖಂಡರಾದ ಜಯಶಂಕರ, ಬಸಪ್ಪ ಹಾಗೂ ಇತರರಿಗೆ ಕೃತಜ್ಞತೆ ಸಲ್ಲಿಸುತ್ತೇವೆ ಎಂದು ಅವರು ನುಡಿದರು.





" ಈ ಬಗೆಯ ಸ್ಮಾರಕ ಶಾಸನ ಶಿಲ್ಪಗಳು ಹೊಯ್ಸಳರ ಕಾಲದಲ್ಲಾಗಲೀ ಅಥವಾ ಬೇರೆ ರಾಜಮನೆತನಗಳ ಕಾಲದಲ್ಲಿ ಈವರೆಗೆ ಕಂಡುಬಂದಿಲ್ಲ. ಜೊತೆಗೆ ರಾಜ್ಯದ ಹಲವು ಗ್ರಾಮಗಳಲ್ಲಿ ವೀರಗಲ್ಲು ಮತ್ತು ಮಹಾಸತಿ ಕಲ್ಲುಗಳು ಪತ್ತೆಯಾಗಿವೆಯಾದರೂ, ಹೆಂಡತಿಯನ್ನು ಇರಿದು ಕೊಂದು ಪತಿ ಮರಣ ಹೊಂದಿರುವ ಶಾಸನ ಹಾಗೂ ಶಿಲ್ಪ ದೊರೆತಿರುವುದು ಇದೇ ಮೊದಲು.

–ಪ್ರೊ. ಎನ್.ಎಂ. ತಳವಾರ, ಪ್ರೊ. ಎನ್.ಎಸ್.ರಂಗರಾಜು

ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಶಾಶ್ವತ ನೆಲೆಗೆ ಯತ್ನ

ಯೋಜನಾ ನಿರ್ದೇಶಕ ಪ್ರೊ.ಎನ್.ಎಂ.ತಳವಾರ್

ಮೈಸೂರು, ಜ. 25(ಆರ್‌ಕೆ)– ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರಕ್ಕೆ ಸ್ವಂತ ಶಾಶ್ವತ ನೆಲೆ ಕಂಡುಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಕೇಂದ್ರದ ಯೋಜನಾ ನಿರ್ದೇಶಕ ಪ್ರೊ. ಎನ್.ಎಂ. ತಳವಾರ ತಿಳಿಸಿದ್ದಾರೆ.

ಮೈಸೂರಿನ ಬಿ.ಎಂ. ಆಸ್ಪತ್ರೆ ಎದುರು ಭಾರತೀಯ ಭಾಷಾ ಸಂಸ್ಥಾನ (CIIL) ಕಚೇರಿಯಲ್ಲಿದ್ದ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ನಂತರ ಮಾನಸ ಗಂಗೋತ್ರಿಯ ರಾಷ್ಟ್ರೀಯ ವಿಜ್ಞಾನ ಇತಿಹಾಸ ಕೇಂದ್ರದ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ಸಿಐಐಎಲ್ ಕೋರಿಕೆ ಮೇರೆಗೆ ಮೈಸೂರು ವಿಶ್ವವಿದ್ಯಾನಿಲಯವು ಹಳೇ ತಹಶೀಲ್ದಾರ್ ಕಚೇರಿ ಪಕ್ಕದಲ್ಲಿ ನಾಲ್ಕೂವರೆ ಎಕರೆ ಜಾಗ ನೀಡಲು ಸಮ್ಮತಿಸಿತ್ತು ಎಂದರು.

ಅಲ್ಲಿ ಸ್ವಂತ ಕಟ್ಟಡ ನಿರ್ಮಿಸಿ ಕೇಂದ್ರಕ್ಕೆ ಶಾಶ್ವತ ನೆಲೆ ಕಂಡುಕೊಳ್ಳಲು ಪ್ರಯತ್ನ ನಡೆದಿತ್ತಲ್ಲದೆ, ಕನ್ನಡ ಮತ್ತು ಸಂಸ್ಕೃತಿ ಸಚಿವರೂ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆಯನ್ನೂ ನಡೆಸಿದ್ದರು. ಆದರೆ ಬೇರೆ ಬೇರೆ ಕಾರಣಗಳಿಂದಾಗಿ ಅದು ಸಾಕಾರಗೊಂಡಿಲ್ಲ. ಈ ನಡುವೆ ಮಾನಸ ಗಂಗೋತ್ರಿಯಲ್ಲಿರುವ ಜಯಲಕ್ಷ್ಮಿ ವ್ಯಾನ್ಷನ್ ಅರಮನೆ ಪಾರಂಪರಿಕ ಕಟ್ಟಡಕ್ಕೆ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಸ್ಥಳಾಂತರಿಸುವ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆ ಎಂದು ಪ್ರೊ. ತಳವಾರ ನುಡಿದರು.

ಮತ್ತೊಂದೆಡೆ ಸಂಸದ ಪ್ರತಾಪ್ ಸಿಂಹ ಅವರು, ಶಿಥಿಲಾವಸ್ಥೆಯಲ್ಲಿರುವ ಜಯಲಕ್ಷ್ಮೀ ವಿಲಾಸ ಮ್ಯಾನ್ಷನ್ ಬಿಲ್ಡಿಂಗ್ ರಿಪೇರಿ ಮಾಡಿಸಲು ಅನುದಾನ ಮಂಜೂರು ಮಾಡುವಂತೆ ಕೋರಿಕೊಂಡ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗ್ರೀನ್ ಸಿಗ್ನಲ್ ನೀಡಿದ್ದರಾದರೂ ಇನ್ನೂ ಸಾಕಾರಗೊಳ್ಳದಿರುವುದರಿಂದ ಈ ನಿಟ್ಟಿನಲ್ಲಿ ಸಂಸದರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಪ್ರಯತ್ನ ಮುಂದುವರಿಸಿದ್ದಾರೆ.

ಸಿದ್ದರಾಮಯ್ಯ ಸರ್ವಾಧಿಕಾರಿ, ಪ್ರಧಾನಿ ಮೋದಿಯಲ್ಲ...

ಬಿಜೆಪಿ ಮಾಧ್ಯಮ ವಕ್ತಾರ ಡಾ.ವಸಂತಕುಮಾರ್ ವಾಗ್ದಾಳಿ



ತಿ.ನರಸೀಪುರ ಪಟ್ಟಣದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಮಾಧ್ಯಮ ವಕ್ತಾರ ಡಾ.ವಸಂತ್ ಕುಮಾರ್ ಮಾತನಾಡಿದರು.

ತಿ.ನರಸೀಪುರ, ಜ.25– ಪಕ್ಷದಿಂದ ಪಕ್ಷಕ್ಕೆ ವಲಸೆ ಬಂದು ಮೂಲ ಕಾಂಗ್ರೆಸ್ಸಿಗರನ್ನು ತುಳಿಯುವ ಕೆಲಸ ಮಾಡುತ್ತಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ವಾಧಿಕಾರಿಯೇ ಹೊರತು ಸರ್ವ ಜನಾಂಗದ, ಜಾತಿಯ, ಸರ್ವ ರಾಜ್ಯದ ಉದ್ಧಾರಕ್ಕಾಗಿ ಶ್ರಮಿಸುತ್ತಿರುವ ದೇಶದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಯವರಲ್ಲ ಎಂದು ಬಿಜೆಪಿ ಜಿಲ್ಲಾ ಮಾಧ್ಯಮ ವಕ್ತಾರ ಹಾಗೂ ಸೆನೆಟ್ ಸದಸ್ಯ ಡಾ. ವಸಂತಕುಮಾರ್ ವಾಗ್ದಾಳಿ ನಡೆಸಿದ್ದಾರೆ.

ಪಟ್ಟಣದ ಕಬಿನಿ ಅತಿಥಿ ಗೃಹದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಸಿದ್ದರಾಮಯ್ಯ ಅವರು ಮೋದಿಯವರನ್ನು ಸರ್ವಾಧಿಕಾರಿ ಎಂದು ಟೀಕಿಸಿ ನೀಡಿದ್ದ ಹೇಳಿಕೆಯನ್ನು ಖಂಡಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಮುಖ್ಯಮಂತ್ರಿಗಳಾಗಿ ಆಡಳಿತ ನಡೆಸಿ ಅನುಭವವಿರುವ ಸಿದ್ದರಾಮಯ್ಯರವರು ದೇಶದ ಪ್ರಧಾನಿಯವರದ್ದು ಸರ್ವಾಧಿಕಾರಿ ಧೋರಣೆ ಎಂಬ ಶಬ್ದವನ್ನು ಯಾತಕ್ಕಾಗಿ ಬಳಕೆ ಮಾಡುತ್ತಾರೆ, ಯಾವ ವಿಷಯದಲ್ಲಿ ಮೋದಿಯವರು ಸರ್ವಾಧಿಕಾರಿಯಂತೆ ವರ್ತಿಸಿದ್ದಾರೆ, ಪ್ರಧಾನಿಯವರು ದೇಶದ ಸರ್ವ ಜನತೆಯ ಉದ್ಧಾರಕ್ಕಾಗಿ ಹಗಲಿರುಳು ಶ್ರಮಿಸುತ್ತಿದ್ದಾರೆ ಎಂದರು.

ಜೆಡಿಎಸ್ ಮುಗಿಸಿ ಬಂದದ್ದು ಸಿದ್ದು! : ಅಹಿಂದ ಪರವಾಗಿರುವಂತಹ ನಾಟಕವಾಡಿ ಜೆಡಿಎಸ್ ಪಕ್ಷವನ್ನು ಮುಗಿಸಿ ಕಾಂಗ್ರೆಸ್ ಪಕ್ಷಕ್ಕೆ ಬಂದ ಸಿದ್ದರಾಮಯ್ಯ ಪರಮೇಶ್ವರ್, ಮಲ್ಲಿಕಾರ್ಜುನ ಖರ್ಗೆ ಹಾಗೂ ಕೋಲಾರದ ಮುನಿಯಪ್ಪರನ್ನು ಸೋಲಿಸುವ ಕೆಲಸ ಮಾಡಿದ್ದು ಸಾರ್ವಕಾಲಿಕ ಸತ್ಯವಾಗಿದೆ. ಈಗ ಅದೇ ಪಕ್ಷದ ಡಿ.ಕೆ.ಶಿವಕುಮಾರ್‌ರನ್ನು ಸೋಲಿಸಲು ಸಂಚು ರೂಪಿಸುತ್ತಿದ್ದಾರೆ ಎಂದು ವ್ಯಂಗ್ಯವಾಡಿದ ಅವರು, ಪಕ್ಷದಿಂದ ಪಕ್ಷಕ್ಕೆ ಬಂದು ತನ್ನ ರಾಜಕೀಯ ಗುರಿ ಸಾಧನೆ ಅಡ್ಡ ಬಂದವರನ್ನು ತುಳಿಯುತ್ತಾ ಸರ್ವಾಧಿಕಾರಿಯಂತೆ ಮೆರೆಯುತ್ತಿರುವ ಸಿದ್ದುರವರಿಗೆ ಮೋದಿಯವರನ್ನು ಸರ್ವಾಧಿಕಾರಿ ಎನ್ನಲು ನೈತಿಕ ಹಕ್ಕಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ ಪಕ್ಷದ ಸರ್ಕಾರದಲ್ಲಿ ಶೇ.40 ರಷ್ಟು ಕಮಿಷನ್ ಹಗರಣದ ಬಗ್ಗೆ ಹೋದೆಡೆಯೆಲ್ಲಾ ಮಾತಾಡುವ ಸಿದ್ದರಾಮಯ್ಯ ತಾವೇ ಮುಖ್ಯಮಂತ್ರಿಗಳಾಗಿದ್ದ 5 ವರ್ಷಗಳ ಅವಧಿಯಲ್ಲಿ ಎಸ್‌ಸಿ, ಎಸ್‌ಟಿ ಮಕ್ಕಳಿಗೆ ನೀಡಬೇಕಾದ ಲ್ಯಾಪ್‌ಟಾಪ್ ಹಣದಲ್ಲಿ 300 ಕೋಟಿ ರೂ.ಗಳನ್ನು ಗುಳುಂ ಮಾಡಲಿಲ್ಲವೇ, ಪಜಾತಿ, ವರ್ಗದ ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಕೊಡಬೇಕಾದ ತಲೆದಿಂಬು ಕೊಡುವುದಲ್ಲಿ ಅವ್ಯವಹಾರ ಮಾಡಲಿಲ್ಲವೇ ಎಂದು ಪ್ರಶ್ನಿಸಿದರು.

ಮಾನಸಿಕ ಸ್ಥಿಮಿತ ಕಳೆದು ಕೊಂಡ ಕಾಂಗ್ರೆಸ್ಸಿಗರು: ಕಾಂಗ್ರೆಸ್ ನಾಯಕರು ಮಾನಸಿಕ ಸ್ಥಿಮಿತ ಕಳೆದು ಕೊಂಡು ಬೀದಿಯಲ್ಲಿ ನಿಂತು ಮಾತನಾಡುವ ಸ್ಥಿತಿಗೆ ಬಂದು ನಿಂತಿದ್ದಾರೆ ಎಂದು ಆರೋಪಿಸಿದ ವಸಂತ್‌ಕುಮಾರ್ ಕಾಂಗ್ರೆಸ್‌ನ ಡಿ.ಕೆ.ಶಿವಕುಮಾರ್ ಅವರು ಬಿಜೆಪಿ ಸರ್ಕಾರದ ಆಡಳಿತಾವಧಿಯ ನಂತರ ಗಂಜಲ ಹಾಕಿ ವಿಧಾನ ಸೌಧವನ್ನು ಸ್ವಚ್ಛಗೊಳಿಸುವ ಹೇಳಿಕೆ ನೀಡುವ ಮೂಲಕ ತಮಗೆ ಸಾಮಾನ್ಯ ಜ್ಞಾನ ಸಹ ಇಲ್ಲ ಎಂಬಂತೆ ವರ್ತಿಸುತ್ತಿದ್ದಾರೆ. ಪ್ರಜಾಪ್ರಭುತ್ವದ ದೇಗುಲವಾಗಿರುವ ವಿಧಾನಸೌಧವನ್ನು ಶುದ್ಧಗೊಳಿಸುತ್ತೇವೆ ಎನ್ನುವ ಮೂಲಕ ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಣಕಿಸಲು ಹೊರಟಿರುವುದು ಖಂಡನೀಯ ಎಂದರು.

ಸಿದ್ದು ಗೌರವದಿಂದ ಮಾತಾಡಲಿ!: ಕ್ಷೇತ್ರಾಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್ ಮಾತನಾಡಿ, ಮುಖ್ಯಮಂತ್ರಿಯಾಗಿ ರಾಜ್ಯದಲ್ಲಿ ಆಡಳಿತ ನಡೆಸಿದ ಸಿದ್ದರಾಮಯ್ಯ ದೇಶದ ಪ್ರಧಾನಿ ಹಾಗೂ ರಾಜ್ಯದ ಮುಖ್ಯಮಂತ್ರಿಗಳಿಗೆ ಮೊದಲು ಗೌರವ ಕೊಡುವುದನ್ನು ಕಲಿಯಬೇಕು.ಯಾರ ಮೇಲೆ ಆರೋಪ ಮಾಡಬೇಕಾದರೆ ದಾಖಲೆ ಇಟ್ಟು ಕೊಳ್ಳಬೇಕು,ಆದರೆ ಬಿಜೆಪಿ ಪಕ್ಷ ಹಗರಣ ರಹಿತವಾಗಿ ಅಧಿಕಾರ ನಡೆಸುತ್ತಿರುವುದನ್ನು ಸಹಿಸದ ಕಾಂಗ್ರೆಸ್‌ನವರು ಕ್ಷುಲ್ಲಕ ವಿಚಾರವನ್ನು ದೊಡ್ಡದನ್ನಾಗಿಸಿ ವಿವಾದವಾಗಿಸುತ್ತಿದ್ದಾರೆ, ಆ ಮೂಲಕ ರಾಜ್ಯದ ಚುಕ್ಕಾಣಿ ಹಿಡಿಯುವ ಕನಸು ಹೊತ್ತು ಬೀದಿಯಲ್ಲಿ ನಿಂತು ಹೋರಾಟ ನಡೆಸುತ್ತಿದ್ದಾರೆ ಎಂದರು.

ರಾಜ್ಯದ ಜನತೆ ಎರಡೂ ಪಕ್ಷಗಳ ನಡೆಯನ್ನು ಗಮನಿಸುತ್ತಿದ್ದಾರೆ. ಅಭಿವೃದ್ಧಿ ಯಾವ ಪಕ್ಷದಿಂದಾಗಿದೆ ಎಂಬುದನ್ನು ತುಲನೆ ಮಾಡುತ್ತಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮತ್ತೆ ವಿರೋಧ ಪಕ್ಷದ ಸ್ಥಾನವೇ ಕಟ್ಟಿಟ್ಟಬುತ್ತಿ ಎಂದು ವ್ಯಂಗ್ಯವಾಡಿದರು. ಮುಂದುವರೆದು ಮಾತನಾಡಿ, ಸಿದ್ದರಾಮಯ್ಯ 5 ವರ್ಷಗಳ ಕಾಲ ಸಿಎಂ ಆಗಿದ್ದಾಗ ರಾಜ್ಯದ ಅಭಿವೃದ್ಧಿ ಮಾಡಿದ್ದರೆ, ಮತ್ತೆ ಪಕ್ಷ ಯಾಕೆ ಮೆಜಾರಿಟಿಗೆ ಬರಲಿಲ್ಲ ಎಂದು ಪ್ರಶ್ನಿಸಿದ ಅವರು, ಭ್ರಷ್ಟಾಚಾರದ ಬಗ್ಗೆ ಉದ್ದುದ್ದ ಭಾಷಣ ಬಿಗಿಯುವ ಸಿದ್ದುಗೆ ಅವರದೇ ಪಕ್ಷದಲ್ಲಿ "ಭ್ರಷ್ಟಾಚಾರದ ಮನೆ" ಯಂತಿರುವ ಡಿ.ಕೆ.ಶಿವಕುಮಾರ್ ಕಣ್ಣಿಗೆ ಕಾಣುತ್ತಿಲ್ಲವೇ ಎಂದರು. ವಕ್ಫ್ ಬೋರ್ಡ್ ಹಗರಣದಲ್ಲಿ ಮಲ್ಲಿಕಾರ್ಜುನ ಖರ್ಗೆ ಹೆಸರು ಸಹ ಉಲ್ಲೇಖವಾಗಿತ್ತು. 29 ಸಾವಿರ ಎಕರೆಯಲ್ಲಿ 2 ಲಕ್ಷ 30 ಕೋಟಿ ರೂ.ಗಳ ಲಂಚ ಪಡೆದಿರಲಿಲ್ಲವೇ? ನಗರಾಭಿವೃದ್ಧಿ ಸಚಿವರಾಗಿದ್ದ ಜಾರ್ಜ್ ಅವಧಿಯಲ್ಲಿ ಸೋಲಾರ್ ಯೋಜನೆಯಲ್ಲಿ 2100 ಕೋಟಿ ರೂ.ಗಳ ಟೆಂಡರ್ ಅನ್ನು ಕೇವಲ 7 ನಿಮಿಷದಲ್ಲಿ ತಮಗೆ ಬೇಕಾದವರಿಗೆ ನೀಡಿ ಭ್ರಷ್ಟಾಚಾರ ಮಾಡಿರಲಿಲ್ಲವೇ ಎಂದರು.

ಮಹದೇವಪ್ಪರಿಗೆ ನೈತಿಕ ಹಕ್ಕಿಲ್ಲ: ತಾಲೂಕು ಮಾಧ್ಯಮ ಸಂಚಾಲಕ ಶಿವಕುಮಾರ್ ಬಡ್ಡು ಮಾತನಾಡಿ, ಕ್ಷೇತ್ರದ ಮಾಜಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಬಿಜೆಪಿ ಸರ್ಕಾರ ದಲಿತ ವಿರೋಧಿ ಪಕ್ಷ ಎಂದು ಟೀಕಿಸುತ್ತಾರೆ. ಆದರೆ ಅವರೇ ಪ್ರಭಾವಿ ಖಾತೆಗಳನ್ನು ಹೊಂದಿದ್ದಾಗ ಎಷ್ಟು ಮಂದಿ ದಲಿತರಿಗೆ ರಾಜಕೀಯ ಸ್ಥಾನಮಾನಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಕೇವಲ ಜಿ.ಪಂ ಸ್ಥಾನಕ್ಕಷ್ಟೇ ದಲಿತರಿಗೆ ರಾಜಕೀಯ ಸ್ಥಾನಮಾನಕ್ಕೆ ಅವಕಾಶವಿತ್ತು, ಅವರಿಗೇನಿದ್ದರೂ ಅವರ ಮಗ ಸುನೀಲ್ ಬೋಸ್ ರಾಜಕೀಯ ಭವಿಷ್ಯವಷ್ಟೇ ಮುಖ್ಯವಾಗಿದ್ದು, ಬಿಜೆಪಿ ಪಕ್ಷವನ್ನು ದಲಿತ ವಿರೋಧಿ ಪಕ್ಷ ಎನ್ನುವ ಯಾವುದೇ ನೈತಿಕ ಹಕ್ಕು ಅವರಿಗಿಲ್ಲ ಎಂದು ಕಿಡಿಕಾರಿದರು.

ಜನರಿಗೆ ನೋವಾಗಿಲ್ಲ, ನಿಮಗೆ ಎಲ್ಲಿ ನೋವಾಗಿದೆ ಹೇಳಿ, ಮುಲಾಮು ಹಚ್ಚುತ್ತೇವೆ

ಮಾಜಿ ಸಂಸದ ಧ್ರುವನಾರಾಯಣ್‌ಗೆ ಶಾಸಕ ಬಿ.ಹರ್ಷವರ್ಧನ್ ಟಾಂಗ್



ನಂಜನಗೂಡು ತಾಲೂಕಿನ ಮುಳ್ಳೂರು ಗ್ರಾಮದ ಬಸವೇಶ್ವರ ನಗರದಲ್ಲಿ ಬಿಜೆಪಿ ಪಕ್ಷದ ವಿಜಯ ಸಂಕಲ್ಪಯಾತ್ರೆ ಅಭಿಯಾನದಲ್ಲಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿದರು

ನಂಜನಗೂಡು, ಜ.25– ಕ್ಷೇತ್ರದ ಎಲ್ಲಾ ಗ್ರಾಮಗಳಲ್ಲಿ ನಡೆದಿರುವ ಅಭಿವೃದ್ಧಿ ಕೆಲಸಗಳು ಗ್ರಾಮಸ್ಥರಿಗೆ ಖುಷಿ ತಂದಿದೆಯೋ ಅಥವಾ ನೋವು ತಂದಿದೆಯೋ ಎಂಬುದನ್ನು ಕ್ಷೇತ್ರದ ಜನರೇ ತೀರ್ಮಾನಿಸುತ್ತಾರೆ. ನಂಜನಗೂಡು ಕ್ಷೇತ್ರದಲ್ಲಿ ಬಿಜೆಪಿ ಪಕ್ಷ ಸದೃಢವಾಗಿದೆ. ನೀವು ನಿಮ್ಮ ಪಕ್ಷವನ್ನು ಸರಿಪಡಿಸಿಕೊಳ್ಳಿ ಎಂದು ಶಾಸಕ ಬಿ.ಹರ್ಷವರ್ಧನ್, ಕಾಂಗ್ರೆಸ್ ಮುಖಂಡ ಧ್ರುವನಾರಾಯಣ್‌ಗೆ ಟಾಂಗ್ ನೀಡಿದರು.

ತಾಲೂಕಿನ ಹೊರಳವಾಡಿ ಗ್ರಾಪಂ ವ್ಯಾಪ್ತಿಯ ಮುಳ್ಳೂರು ಗ್ರಾಮದ ಬಸವೇಶ್ವರ ನಗರದಲ್ಲಿ ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಅಭಿಯಾನದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ನ ಪ್ರಜಾಧ್ವನಿ ಯಾತ್ರೆಯ ಪೂರ್ವಭಾವಿ ಸಭೆಯಲ್ಲಿ ಧ್ರುವನಾರಾಯಣ್ ಶಾಸಕರಿಂದ ಕ್ಷೇತ್ರದ ಜನರಿಗೆ ನೋವುಂಟಾಗಿದೆ ಎಂದು ಹೇಳಿಕೆ ನೀಡಿದ್ದಾರೆ. ಜನರಿಗೆ ನೋವಾಗಿಲ್ಲ. ನಿಮಗೆ ಎಲ್ಲಿ ನೋವಾಗಿದೆ ಎಂಬುದನ್ನು ಹೇಳಿ. ನಾವು ಮುಲಾಮು ಹಚ್ಚುತ್ತೇವೆ. ಬೆನ್ನಿಗೆ ಚೂರಿ ಹಾಕಿದವರು ನೋವು ಉಂಟಾಗಿರುವ ಬಗ್ಗೆ ಮಾತನಾಡುತ್ತಿರುವುದು ಹಾಸ್ಯಸ್ಪದ. ಉಪ ಚುನಾವಣೆಯಲ್ಲಿ ನನ್ನ 40 ವರ್ಷದ ಮರ್ಯಾದೆಯನ್ನು ಉಳಿಸಿ ಎಂದು ಪ್ರಸಾದ್ ಅವರು ಚುನಾವಣೆಗೆ ಹೋದರು. ಬರೀ 48 ಗಂಟೆಯಲ್ಲಿ ಕೈಚಳಕ ತೋರಿಸಿ ಸೋಲಿಸಿದಿರಿ. ಯಾರಿಂದ ಯಾರಿಗೆ ನೋವು ಉಂಟಾಗಿದೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಿ. ನಿಮ್ಮ ಈ ದುಸ್ಥಿತಿಗೆ ನೀವೇ ಕಾರಣ ಎಂದು ಹರಿಹಾಯ್ದರು.

ವಿ.ಶ್ರೀನಿವಾಸ ಪ್ರಸಾದ್ ಅವರು ಕಂದಾಯ ಸಚಿವರಾಗಿದ್ದ ವೇಳೆ ಅವರ ಅನುದಾನದಲ್ಲಿ ನೀವು ಎಲ್ಲೆಡೆ ಗುದ್ದಲಿ ಪೂಜೆ ನೆರವೇರಿಸಿ ಹೆಸರು ಮಾಡಿಕೊಂಡಿದ್ದೀರಿ. ಕೊಳ್ಳೆಗಾಲ ಕ್ಷೇತ್ರದಲ್ಲಿ ಶಾಸಕರಾದಾಗ 12 ಸಾವಿರ ಮತಗಳಿಂದ ನೀವು ಗೆದ್ದಿದ್ದಿರಿ. ರಾಜೀನಾಮೆ ನೀಡಿ ಸಂಸದರಾದ ನಂತರ ನಿಮ್ಮ ಸ್ವ ಕ್ಷೇತ್ರವನ್ನೇ ನೀವು ಕಳೆದುಕೊಳ್ಳಬೇಕಾಯಿತು. ನಿಮ್ಮ ನಾಯಕತ್ವ ಎಲ್ಲಿ ಉಳಿದಂತಾಯಿತು. ಎಂಬುದನ್ನು ಮನನ ಮಾಡಿಕೊಳ್ಳಿ, ನೀವು ಸಂಸದರಿದ್ದಾಗ ಬಂದ ಅನುದಾನ ಎಷ್ಟು, ವಿ.ಶ್ರೀನಿವಾಸಪ್ರಸಾದ್ ಅವರ ಅನುದಾನ ತಂದಿರುವುದು ಎಷ್ಟು ಎಂಬುದನ್ನು ಮನೆ ಮನೆಗೆ ವಿಷಯ ಮುಟ್ಟಿಸುವ ಕೆಲಸವನ್ನು ಮಾಡುತ್ತೇನೆ ಎಂದರು.

ಕಾಂಗ್ರೆಸ್ ಪಕ್ಷದಲ್ಲಿನ ಪ್ರಮುಖ ನಾಯಕರ ಇಬ್ಬರ ಧ್ವನಿಯೇ ಒಂದಾಗಿಲ್ಲ, ಇನ್ನು ಪ್ರಜೆಗಳ ಧ್ವನಿಯನ್ನು ಹೇಗೆ ಒಂದು ಮಾಡಲು ಸಾಧ್ಯ? ಕ್ಷೇತ್ರದಲ್ಲಿ ಬಿಜೆಪಿ ಪಕ್ಷ ಸದೃಢವಾಗಿದೆ. ನೀವು ನಿಮ್ಮ ಪಕ್ಷದ ವೈಫಲ್ಯಗಳನ್ನು ಸರಿಪಡಿಸಿಕೊಳ್ಳಿ ಎಂದು ಟೀಕಾಪ್ರಹಾರ ನಡೆಸಿದರು. ಈ ಸಂದರ್ಭದಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್, ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ಬಿಜೆಪಿ ತಾಲೂಕು ಕಾರ್ಯದರ್ಶಿಗಳಾದ ಸಿದ್ದರಾಜು, ಗಂಗಾಧರ್, ಗ್ರಾಪಂ ಅಧ್ಯಕ್ಷ ರಮೇಶ್, ಉಪಾಧ್ಯಕ್ಷೆ ನಾಗರತ್ನ, ಸದಸ್ಯರಾದ ಮಹೇಶ್, ಶರತ್, ಸೌಭಾಗ್ಯ ರಾಮಚಂದ್ರು, ಮಹದೇವ ನಾಯಕ, ಮುಖಂಡರಾದ ಶೇಖರ್, ಕೂಸಪ್ಪ, ಸೇರಿದಂತೆ ಕಾರ್ಯಕರ್ತರು ಇದ್ದರು.

ಪಿರಿಯಾಪಟ್ಟಣದ ಬ್ಯಾಟರಿ ಅಂಗಡಿಯಲ್ಲಿ ಕಳವು ಮಾಡಿದ್ದವನ ಬಂಧನ, ಬ್ಯಾಟರಿ ವಶ

ಪಿರಿಯಾಪಟ್ಟಣ, ಜ.25– ಬ್ಯಾಟರಿ ಅಂಗಡಿಯ ಬೀಗ ಮುರಿದು ಬ್ಯಾಟರಿಗಳನ್ನು ಕಳ್ಳತನ ಮಾಡಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಪಟ್ಟಣದ ಬಿ.ಎಂ. ರಸ್ತೆಯಲ್ಲಿರುವ ಎಸ್.ಆಟೋ ಎಲೆಕ್ಟ್ರಿಷಿಯನ್ ಅಂಗಡಿಯಲ್ಲಿ ಕಳ್ಳರು ಬೀಗವನ್ನು ಮುರಿದು ಅಂಗಡಿಯಲ್ಲಿದ್ದ ಸುಮಾರು 4.74 ಲಕ್ಷ ರೂ. ಬೆಲೆ ಬಾಳುವ ಎಕ್ಸೈಡ್, ಅಮರಾನ್ ಹಾಗೂ ಇತರೆ ಕಂಪನಿಯ ಬ್ಯಾಟರಿಗಳನ್ನು ಗೂಡ್ಸ್ ಆಟೋಗೆ ತುಂಬಿಕೊಂಡು ಹೋಗಿದ್ದು, ಮಾಲೀಕ ಸಾಧಿಕ್ ಅಹಮ್ಮದ್ ಪಿರಿಯಾಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಈ ಸಂಬಂಧ ತನಿಖೆ ನಡೆಸಿ ಆರೋಪಿಯನ್ನು ಮಾಲು ಸಮೇತ ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಮೈಸೂರಿನ ತನ್ವೀರ್‌ಸೇಟ್ ನಗರದ ಬಷೀರ್ ಅಹಮ್ಮದ್ ಅವರ ಮಗ ಸಮೀರ್ ಅಹಮ್ಮದ್(44) ಬಂಧಿತ ಆರೋಪಿ. ಆರೋಪಿಯಿಂದ ಸುಮಾರು 6 ಲಕ್ಷ ರೂ. ಬೆಲೆಬಾಳುವ ಬ್ಯಾಟರಿಗಳನ್ನು ಹಾಗೂ ಬ್ಯಾಟರಿ ಕಳ್ಳತನ ಮಾಡಲು ಉಪಯೋಗಿಸಿದ್ದ ಗೂಡ್ಸ್ ಆಪ್ ಆಟೋವನ್ನು ವಶಪಡಿಸಿಕೊಳ್ಳಲಾಗಿದೆ.

6 ಪ್ರಕರಣ ಪತ್ತೆ: ಆರೋಪಿಯನ್ನು ಹೆಚ್ಚಿನ ವಿಚಾರಣೆ ನಡೆಸಿದ ಸಂದರ್ಭದಲ್ಲಿ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ, ನಂಜನಗೂಡು, ಕೆಆರ್.ನಗರ, ಮಂಡ್ಯ ಜಿಲ್ಲೆಯ ಮಳವಳ್ಳಿ, ಕೊಡಗು ಜಿಲ್ಲೆಯ ಕುಶಾಲನಗರ, ಮೈಸೂರು ಸೇರಿದಂತೆ 6 ಕಡೆ ಕಳವು ಮಾಡಿರುವುದು ಪತ್ತೆಯಾಗಿದೆ.

ಸಿಸಿ ಟಿವಿ ಅನುಕೂಲ: ಅಂಗಡಿಯಲ್ಲಿ ಅಳವಡಿಸಲಾಗಿದ್ದ ಸಿಸಿ ಟಿವಿಯಿಂದ ಆರೋಪಿಯ ಚಹರೆ ಪತ್ತೆಯಾಗಿ, ಪಿರಿಯಾಪಟ್ಟಣ ಪೊಲೀಸರ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀಧರ್, ಅಪರಾಧ ವಿಭಾಗದ ಸಿಬ್ಬಂದಿಗಳಾದ ಲಿಂಗರಾಜಪ್ಪ.ಕೆ.ಎಸ್, ಸತೀಶ್ ಕುಮಾರ, ಅಸ್ಲಾಂ ಪಾಷ, ಅರುಣ ಭಾಗವಹಿಸಿದ್ದರು. ಜಿಲ್ಲಾ ಪೊಲೀಸ್ ಎಸ್‌ಪಿ ಸೀಮಾ ಲಾಟ್ಕರ್, ಡಿವೈಎಸ್ ಎಸ್‌ಪಿ ಎಂ.ಕೆ.ಮಹೇಶ್ ಹಾಜರಿದ್ದರು.

ಮಂಚದೇವನಹಳ್ಳಿಯಲ್ಲಿ ಪಡಿತರ ಉಪಕೇಂದ್ರಕ್ಕೆ ಚಾಲನೆ

ಬೈಲಕುಪ್ಪೆ, ಜ.25– ರೈತಾಪಿ ಬಡ ಕುಟುಂಬ ಸದಸ್ಯರು ಕೂಲಿ ಕೆಲಸ ಬಿಟ್ಟು ಪಡಿತರ ಆಹಾರಕ್ಕಾಗಿ ಪರದಾಡುವುದನ್ನು ತಪ್ಪಿಸಲು ಮಂಚದೇವನಹಳ್ಳಿ ಗ್ರಾಮದಲ್ಲಿ ಪಡಿತರ ಉಪ ಕೇಂದ್ರ ತೆರೆಯಲಾಗಿದೆ ಎಂದು ಶಾಸಕ ಕೆ.ಮಹದೇವ್ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನಾದ್ಯಂತ ಪಡಿತರ ಉಪಕೇಂದ್ರಗಳನ್ನು ತೆರೆದು ಬಡಜನರು ಪಡಿತರಕ್ಕೆ ಅಲೆದಾಡುವುದನ್ನು ತಪ್ಪಿಸಲಾಗಿದೆ ಎಂದು ಅವರು ತಿಳಿಸಿದರು.

ಪಿರಿಯಾಪಟ್ಟಣದ ಮಂಚದೇವನಹಳ್ಳಿ ಗ್ರಾಮದಲ್ಲಿ ನೂತನ ಪಡಿತರ ಉಪಕೇಂದ್ರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜನರು ಸರ್ಕಾರದ ಉಚಿತ ಪಡಿತರ ಆಹಾರ ತರಲು ಬೈಲುಕೊಪ್ಪಕ್ಕೆ ಆಟೋ ಬಾಡಿಗೆ ಮಾಡಿಕೊಂಡು ಹೋಗಿ ಪಡಿತರ ಪಡೆದು ಬರಲು ಸುಮಾರು 200 ರೂ. ವೆಚ್ಚ ಬೀಳುತ್ತದೆ. ಜೊತೆಗೆ ಒಂದು ದಿನದ ಕೂಲಿ ಕೆಲಸ ಬಿಟ್ಟು ಕಾಯುವ ಪರಿಸ್ಥಿತಿ ಇರುವುದನ್ನು ತಿಳಿದು ಪಡಿತರಕ್ಕೆ ಅಲೆಯಬಾರದು ಎಂಬ ಉದ್ದೇಶದಿಂದ ಈ ಗ್ರಾಮದಲ್ಲಿಯೇ ಪಡಿತರ ಉಪಕೇಂದ್ರ ಸ್ಥಾಪಿಸಿ ಪಡಿತರ ವಿತರಣೆಗೆ ಕ್ರಮವಹಿಸಲಾಗಿದೆ ಎಂದರು. ಈ ವೇಳೆ ಆಹಾರ ಶಿರಸ್ತೆದಾರ್ ಸಣ್ಣಸ್ವಾಮಿ, ಆಹಾರ ನಿರೀಕ್ಷಕ ಮಂಜುನಾಥ್, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಮಾಜಿ ತಾಪಂ ಸದಸ್ಯ ರಘು, ಗ್ರಾಪಂ ಸದಸ್ಯ ಚೆಲುವರಾಜು, ಚಂದು, ಬೈಲುಕೊಪ್ಪ ಗ್ರಾಪಂ ಪಿಡಿಓ ಬೋರೇಗೌಡ, ವೆಂಕಟೇಶ್ ನಾಯಕ, ಮುಖಂಡರಾದ ಸುರೇಶ್ ಹಾಜರಿದ್ದರು.

ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಅಗತ್ಯ

ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಸಲಹೆ



ತಿ.ನರಸೀಪುರ ತಾಲೂಕಿನ ಸೋಮನಾಥಪುರ ಗ್ರಾಮದ ಬಳಿಯಿರುವ ಆರೋಹಣ ಸೆಂಟ್ರಲ್ ಸ್ಕೂಲ್‌ನಲ್ಲಿ ನಡೆದ ಆರೋಹಿ ಆನ್ಯುಯಲ್ ಫೆಸ್ಟ್ ಶಾಲಾ ವಾರ್ಷಿಕೋತ್ಸವವನ್ನು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊಜಿ.ಹೇಮಂತ್ ಕುಮಾರ್ ಉದ್ಘಾಟಿಸಿದರು. ಶಾಸಕ ಎಂ.ಅಶ್ವಿನ್ ಕುಮಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಮರಿಸ್ವಾಮಿ, ಟ್ರಸ್ಟ್ ಅಧ್ಯಕ್ಷ ವೈ.ಹೆಚ್.ಹನುಮಂತೇಗೌಡ, ಕಾರ್ಯದರ್ಶಿ ಎನ್.ಎಂ.ರಾಮಚಂದ್ರ ಇನ್ನಿತರರು ಇದ್ದಾರೆ.

ತಿ.ನರಸೀಪುರ, ಜ.25– ಭವಿಷ್ಯದ ಜಗತ್ತಿನಲ್ಲಿ ಭಾರತ ಅಭಿವೃದ್ಧಿ ಹೊಂದಿದ ದೇಶವಾಗಲು ಗ್ರಾಮೀಣ ಪ್ರದೇಶಗಳ ಮಕ್ಕಳಿಗೆ ಮೌಲ್ಯಯುತ ಗುಣಮಟ್ಟದ ಶಿಕ್ಷಣವನ್ನು ನೀಡಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಹೇಳಿದರು.

ತಾಲೂಕಿನ ಸೋಮನಾಥಪುರ ಗ್ರಾಮದ ಬಳಿಯಿರುವ ಆರೋಹಣ ಸೆಂಟ್ರಲ್ ಸ್ಕೂಲ್‌ನಲ್ಲಿ ನಡೆದ ಆರೋಹಿ ಆನ್ಯುಯಲ್ ಫೆಸ್ಟ್ ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಶಿಕ್ಷಣ ಮೂಲಭೂತ ಹಕ್ಕಾದ ನಂತರ ಎಲ್ಲಾ ಮಕ್ಕಳಿಗೂ ಸಿಗುತ್ತಿದೆಯಾದರೂ ಸ್ಪರ್ಧಾತ್ಮಕತೆ ತಕ್ಕಂತೆ ಗುಣಮಟ್ಟದ ಶಿಕ್ಷಣವನ್ನು ನೀಡುವಂತಾಗಬೇಕು ಎಂದರು. ವಿಶಾಲವಾದ ಭೂ ಪ್ರದೇಶದಲ್ಲಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳ ಮೇಲೆ ಬದ್ಧತೆಯಿರುವ ಹಲವು ಮಂದಿ ಆರೋಹಣ ಶಿಕ್ಷಣ ಸಂಸ್ಥೆಯನ್ನು ತೆರೆದು, ಗುಣಮಟ್ಟದ ಶಿಕ್ಷಣವನ್ನು ನೀಡಲು ಶ್ರಮಿಸುತ್ತಿದ್ದಾರೆ. ಹಳ್ಳಿಯಲ್ಲೊಂದು ನಗರ ಮಾದರಿಯ ಶಾಲೆಯನ್ನು ನೋಡಿದ್ದು ನಿಜಕ್ಕೂ ಹೆಮ್ಮೆಯಾಗುತ್ತದೆ. ಮುಂದಿನ ದಿನಗಳಲ್ಲಿ ಶಾಲೆಯಿಂದ ಹೆಚ್ಚಿನ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಸಿಗುವಂತಾಗಲಿ ಎಂದು ತಿಳಿಸಿದರು. ಶಾಲೆಯ ನೂತನ ವರ್ಷದ ಕ್ಯಾಲೆಂಡರನ್ನು ಬಿಡುಗಡೆ ಮಾಡಿದ ಶಾಸಕ ಎಂ.ಅಶ್ವಿನ್ ಕುಮಾರ್ ಮಾತನಾಡಿ, ಜಾಗತೀಕರಣ ಪ್ರಭಾವವಿರುವ ಈಗಿನ ಕಾಲಘಟ್ಟದ ಪೀಳಿಗೆ ವೇಗವಾಗಿರುವುದರಿಂದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಜವಾಬ್ದಾರಿ ಸರ್ಕಾರದಷ್ಟೆ ಪೋಷಕರ ಮೇಲೂ ಇದೆ. ಗ್ರಾಮೀಣ ಪ್ರದೇಶಗಳಲ್ಲಿನ ಮಕ್ಕಳಿಗೆ ನಗರಗಳಲ್ಲಿ ಸಿಗುವ ಶಿಕ್ಷಣವನ್ನು ಆರೋಹಣ ಸೆಂಟ್ರಲ್ ಸ್ಕೂಲ್ ನೀಡುತ್ತಿದೆ. ಟ್ರಸ್ಟ್‌ನ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಈ ಭಾಗದ ಜನಪ್ರತಿನಿಧಿಯಾಗಿ ಸಂಪೂರ್ಣವಾದ ಸಹಕಾರವನ್ನು ನೀಡುತ್ತೇನೆ ಎಂದು ಭರವಸೆ ನೀಡಿದರು.

ಪೂರ್ಣಕುಂಭ ಸ್ವಾಗತದೊಂದಿಗೆ ಗಣ್ಯರನ್ನು ವೇದಿಕೆಗೆ ಕರೆತರಲಾಯಿತು. ವಾರ್ಷಿಕೋತ್ಸವ ಹಿನ್ನೆಲೆಯಲ್ಲಿ ನಡೆದಿದ್ದ ವಿವಿಧ ಕ್ರೀಡಾಕೂಟಗಳಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಲಾಯಿತು. ಶಾಲೆಯ ಮಕ್ಕಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸಿದರು. ಶಾಲೆಯ ಮುಖ್ಯ ಶಿಕ್ಷಕಿ ಕೆ.ಎನ್.ರೂಪ ವಾರ್ಷಿಕ ವರದಿಯನ್ನು ಮಂಡಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಮರಿಸ್ವಾಮಿ, ಆರೋಹಣ ಎಜುಕೇಶನಲ್ ಅಂಡ್ ಕಲ್ಚರಲ್ ಟ್ರಸ್ಟ್ ಅಧ್ಯಕ್ಷ ವೈ.ಹೆಚ್.ಹನುಮಂತೇಗೌಡ, ಉಪಾಧ್ಯಕ್ಷ ಬಿ.ಎನ್.ಸುರೇಶ್, ಕಾರ್ಯದರ್ಶಿ ಎನ್.ಎಂ.ರಾಮಚಂದ್ರ, ಗೌರವ ಕಾರ್ಯದರ್ಶಿ ಬಿ.ಎಸ್. ಯೋಗೇಂದ್ರ, ಖಜಾಂಚಿ ಮಾಣಕ್ ಚಂದ್, ಟ್ರಸ್ಟಿಗಳಾದ ವೈ.ಆರ್.ಅರವಿಂದ್, ಬಿ.ಕೆ. ವೆಂಕಟೇಶ್ ಪ್ರಸಾದ್, ಬಿ.ಕೆ.ದೀಪಕ್ ಕುಮಾರ್ ಜೈನ್, ಟಿ.ವಾಸುದೇವ್, ಎಸ್.ಬಸವೇಗೌಡ, ರಾಕೇಶ್ ಕುಮಾರ್, ಸುಭಾಷ್ ಚೌದರಿ, ಸೂರಜ್, ವೆಂಕಟೇಶ್, ಪೂಜಾ, ಆಡಳಿತಾಧಿಕಾರಿ ಎಂ.ಆರ್.ಸುಹಾಸ್, ಮುಖ್ಯ ಶಿಕ್ಷಕಿ ಅನಿತಾ ಸೇರಿದಂತೆ ಸಹ ಶಿಕ್ಷಕರು, ಪೋಷಕರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಮುಕ್ತ, ಕಡ್ಡಾಯವಾಗಿ ಮತದಾನ ಮಾಡಿ, ಹಕ್ಕು ಚಲಾಯಿಸಿ...

ನಂಜನಗೂಡು, ಜ.25–ಸಾರ್ವಜನಿಕರು, ಯುವಕರು ಯಾವುದೇ ಆಮಿಷಗಳಿಗೆ ಬಲಿಯಾಗದೆ, ಮತದಾನ ಪ್ರಕ್ರಿಯೆಯಿಂದ ದೂರ ಉಳಿಯದೆ, ಮುಕ್ತವಾಗಿ ಕಡ್ಡಾಯವಾಗಿ, ಮತದಾನ ಮಾಡುವ ಮೂಲಕ ನಿಮ್ಮ ಹಕ್ಕು ಚಲಾಯಿಸಿ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಅನುಪಮ ಲಕ್ಷ್ಮಿ ಹೇಳಿದರು.

ಅವರು ನಗರದ ಪ್ರಥಮ ದರ್ಜೆ ಕಾಲೇಜಿನಲ್ಲಿ ತಾಲೂಕು ಆಡಳಿತ ಏರ್ಪಡಿಸಿದ್ದ ರಾಷ್ಟ್ರೀಯ ಮತದಾರರ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು. ಮತದಾನದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು. ಮತದಾನಕ್ಕಿಂತ ಶ್ರೇಷ್ಠವಾದುದ್ದು ಮತ್ತೊಂದಿಲ್ಲ, ನಾವು ಯಾವುದೇ ಭಾವನಾತ್ಮಕ ವಿಷಯಗಳಿಗೆ ಬಲಿಯಾಗದೆ ಮತ ಮಾರಾಟ ಮಾಡಿಕೊಳ್ಳದೆ ನಿರ್ಭೀತಿಯಿಂದ ಮತದಾನ ಮಾಡಬೇಕು ಎಂದರು. 1ನೇ ಅಪರ ಸಿವಿಲ್ ನ್ಯಾಯಾಧೀಶರಾದ ಕಿಶೋರ್ ಕುಮಾರ್ ಮಾತನಾಡಿ, ದೇಶದಲ್ಲಿ ಭ್ರಷ್ಟಾಚಾರ ರಹಿತವಾಗಿ, ಮುಕ್ತ ಚುನಾವಣೆಗಳು ನಡೆದಾಗ ಮಾತ್ರ ಪ್ರಜಾಪ್ರಭುತ್ವ, ಸಂವಿಧಾನ ಗಟ್ಟಿಯಾಗಲು ಸಾಧ್ಯ ಆದ್ದರಿಂದಲೇ ಬಾಬಾ ಸಾಹೇಬರು ಸ್ವಾಯತ್ತ ಚುನಾವಣಾ ಆಯೋಗದ ಸ್ಥಾಪನೆಗೆ ಅವಕಾಶ ಕಲ್ಪಿಸಿದ್ದಾರೆ. ಜೊತೆಗೆ ಎಲ್ಲರಿಗೂ ಮತದಾನದ ಅವಕಾಶ ಕಲ್ಪಿಸಿದ್ದಾರೆ. ನಿಮಗೆ ಯಾವುದೇ ಅಭ್ಯರ್ಥಿ, ಪಕ್ಷದ ಪರವಾಗಿ ಮತಚಲಾಯಿಸಲು ಇಷ್ಟವಿಲ್ಲದಿದ್ದರೂ ಸಹ ನೋಟಾ ಆಯ್ಕೆ ಬಳಸಬಹುದು ಆದ್ದರಿಂದ ಮತದಾನ ಪ್ರಕ್ರಿಯೆಯಲ್ಲಿ ಕಡ್ಡಾಯವಾಗಿ ಹಕ್ಕು ಚಲಾಯಿಸಿ ಸದೃಢ ದೇಶ ಕಟ್ಟಲು ಸಹಕರಿಸಿ ಎಂದರು. ತಹಶೀಲ್ದಾರ್ ಎಂ.ಶಿವಮೂರ್ತಿ ಮಾತನಾಡಿ, ಎಲ್ಲರೂ ಸಂವಿಧಾನದ ಆಶಯಗಳನ್ನು ಅರಿತು ನಮ್ಮ ಹಕ್ಕುಗಳನ್ನು ಕಳೆದುಕೊಳ್ಳದೆ ಹಕ್ಕು ಚಲಾವಣೆ ಮಾಡಬೇಕು ಎಂದರು.

ಪೋಷಕರು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ: ಡಾ.ಹೆಚ್‌ಸಿಎಂ ಕರೆ




ಮಲ್ಕುಂಡಿ, ಜ.25– ಪೋಷಕರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಉತ್ತಮ ಶಿಕ್ಷಣ ಕೊಡಿಸಿ ಸ್ವಾವಲಂಬಿಗಳಾಗಿ ಜೀವನ ನಡೆಸುವಂತೆ ಮಾಡಬೇಕು ಎಂದು ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕರೆ ನೀಡಿದರು. ಸಮೀಪದ ಹುರ ಗ್ರಾಮದ ಗಾಯಿತ್ರಿ ವಿದ್ಯಾ ಸಂಸ್ಥೆಯ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡೆ ಚಟುವಟಿಕೆ ಹಾಗೂ ವಿದ್ಯಾಭ್ಯಾಸದಲ್ಲಿ ಪ್ರಗತಿ ಹೆಚ್ಚಿಸಿಕೊಳ್ಳಬೇಕು ಪೋಷಕರು ತಮ್ಮ ಮಕ್ಕಳಿಗೆ ವಿಶೇಷ ಕೌಶಲ ತರಬೇತಿಯನ್ನು ಕೊಡಿಸುವ ಮೂಲಕ ತಮ್ಮ ಭವಿಷ್ಯ ಕಟ್ಟಿಕೊಳ್ಳಲು ದಾರಿ ತೋರಿಸಬೇಕು ಎಂದರು.

ದೇಶದಲ್ಲಿ ಯಾವುದೇ ಪ್ರಜೆಯಾಗಲು ಶಿಕ್ಷಣ ಮುಖ್ಯ. ಡಾ. ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದಲ್ಲಿ ನೀಡಿರುವ ಶಿಕ್ಷಣ, ಸಂಘಟನೆ, ಹೋರಾಟ ಎಂಬ ಪದಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಶಿಕ್ಷಣದಲ್ಲಿ ಮುಂದೆ ಬರಲು ಸಾಧ್ಯ. ಪ್ರತಿಯೊಬ್ಬರು ಮೊದಲು ಶಿಕ್ಷಣ. ಪಡೆದು ಸಂಘಟನೆ ಮಾಡಿ ಹೋರಾಟದ ಮೂಲಕ ತಮ್ಮ ಬರುವ ಸವಲತ್ತುಗಳನ್ನು ಪಡೆದುಕೊಳ್ಳಬಹುದು ಎಂದು ತಿಳಿಸಿದರು.

ಮಾದಾಪಟ್ಟಣ ಮಠಾಧ್ಯಕ್ಷರಾದ ತೋಂಟದಾರ್ಯ, ಹಲ್ಲರೆ ಮಠಾಧ್ಯಕ್ಷ ಮಹೇಶ್ ಸ್ವಾಮೀಜಿ, ವೀರಶೈವ ತಾಲೂಕು ಅಧ್ಯಕ್ಷ ದೇವನೂರು ಮಹದೇವಪ್ಪ, ಯುವ ಕಾಂಗ್ರೆಸ್ ಮುಖಂಡ ಗಣೇಶ ಪ್ರಸಾದ್, ಸಂಸ್ಥೆಯ ಸಂಸ್ಥಾಪಕ ನಟರಾಜ್, ತಾಪಂ ಮಾಜಿ ಸದಸ್ಯ ಮೂಗಶೆಟ್ಟಿ, ಮುಖಂಡರುಗಳಾದ ತರಗನಹಳ್ಳಿ ನಂಜುಂಡಸ್ವಾಮಿ, ಚನ್ನನಾಯಕ, ಸೇರಿದಂತೆ ಪ್ರಮುಖರು ಹಾಜರಿದ್ದರು.

ದಿಢೀರ್ ಸುರಿದ ಮಳೆಯಿಂದ ನೀರು ಪಾಲಾದ ಕಾಫಿ

ಅಪಾರ ನಷ್ಟ, ಮುಂದಿನ ಸಾಲಿನ ಇಳುವರಿ ಮೇಲೆ ಪರಿಣಾಮ





ಪೊನ್ನಂಪೇಟೆ, ಜ.25– ಮಂಗಳವಾರ ಸಂಜೆ ಸುರಿದ ಧಾರಾಕಾರ ಮಳೆಯಿಂದಾಗಿ ಒಣಗಿಸಲು ಹಾಕಿದ್ದ ಕಾಫಿ ಹಣ್ಣು ನೀರು ಪಾಲಾಗಿ ಬೆಳಗಾರರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಜಿಲ್ಲೆಯ ಬಹುತೇಕ ಪ್ರದೇಶಗಳಲ್ಲಿ ಮಂಗಳವಾರ ಮಳೆಯಾಗಿದ್ದು, ಕೊಡಗಿನ ಹಲವು ಪ್ರದೇಶದ ಬೆಳೆಗಾರರ ಕಾಫಿಹಣ್ಣು ಮಳೆ ನೀರಿನಲ್ಲಿ ಕೊಚ್ಚಿ ಹೋಗುವ ಮೂಲಕ ಕಾಫಿ ಕೃಷಿ ಅವಲಂಭಿತರನ್ನು ತೀವ್ರ ಚಿಂತೆಗೀಡುಮಾಡಿದೆಯಲ್ಲದೆ, ಅಪಾರ ಪ್ರಮಾಣದ ನಷ್ಟವಾಗಿದೆ.

ಮಂಗಳವಾರ ಬೆಳಿಗ್ಗೆಯಿಂದಲೇ ಮೋಡಕವಿದ ವಾತಾವರಣವಿತ್ತಾದರೂ ಧಾರಾಕಾರ ಮಳೆ ಸುರಿಯುವ ನಿರೀಕ್ಷೆಯಿರಲಿಲ್ಲ. ಇದರಿಂದ ಕೊಯ್ಲು ಮಾಡಿ ಒಣಗಿಸಲು ಹಾಕಿದ್ದ ಕಾಫಿ ಹಣ್ಣನ್ನು ಸಂಗ್ರಹಿಸುವ ಕೆಲಸಕ್ಕೆ ಯಾರೂ ಮುಂದಾಗಿರಲಿಲ್ಲ. ಸಂಜೆ 5 ಗಂಟೆಯಾಗುತ್ತಿದ್ದಂತೆ ತುಂತುರು ಹನಿ ಹಾಕುತ್ತಾ ಆರಂಭಗೊಂಡ ಮಳೆ 5.30ರ ನಂತರ ಬಿರುಸಿನಿಂದ ಸುರಿಯಿತು. ಕಾರ್ಮಿಕರೆಲ್ಲ ಕೆಲಸ ಮುಗಿಸಿ ಮನೆಗೆ ಹಿಂತಿರುಗಿದ್ದ ಕಾರಣ ಬಹುತೇಕ ಪ್ರದೇಶದಲ್ಲಿ ಒಣಗಲು ಹಾಕಿದ್ದ ಕಾಫಿಯನ್ನು ಮಳೆ ಯಿಂದ ರಕ್ಷಿಸಲು ಸಾಧ್ಯವಾಗಲಿಲ್ಲ. ಧಾರಾಕಾರವಾಗಿ ಸುರಿದ ಮಳೆಯಿಂದ ಕಣದತ್ತ ಬಂದ ಬೆಳೆಗಾರರು, ತಮ್ಮ ಕಣ್ಣ ಮುಂದೆಯೇ ಕಾಫಿ ಹಣ್ಣುಗಳು ನೀರಿನಲ್ಲಿ ಕೊಚ್ಚಿ ಹೋಗುತ್ತಿದ್ದರೂ ಏನೂ ಮಾಡಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಅಸಹಾಯಕರಾಗಿ ನಿಂತು ನೋಡಬೇಕಾಯಿತು.

ಪ್ರಸಕ್ತ ಸಾಲಿನಲ್ಲಿ ಇಳುವರಿ ಕಡಿಮೆಗೊಂಡು ಮೊದಲೇ ಕಂಗಾಲಾಗಿದ್ದ ಮಧ್ಯಮ ವರ್ಗದ ಕಾಫಿ ಬೆಳೆಗಾರರಿಗೆ ಮಂಗಳವಾರ ಸುರಿದ ಭಾರೀ ಮಳೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ಕಾಫಿ ಹಣ್ಣಿನ ಕೊಯ್ಲಿನ ಈ ಸಮಯದಲ್ಲಿ ಅಕಾಲಿಕ ಮಳೆಯಾಗಿರುವುದು ಮುಂದಿನ ಸಾಲಿನ ಇಳುವರಿಯ ಮೇಲೆಯೂ ಪರಿಣಾಮ ಬೀರಲಿದೆ ಎಂಬುದು ಬೆಳೆಗಾರರನ್ನು ಮತ್ತಷ್ಟು ಆತಂಕಗೊಳಿಸಿದೆ. ಜಿಲ್ಲೆಯ ಹಲವು ಭಾಗಗಳಲ್ಲಿ ಕಾಫಿ ಕೊಯ್ಲಿನ ಕೆಲಸ ಭರದಿಂದ ಸಾಗುತ್ತಿದ್ದು, ಈ ಸಮಯದಲ್ಲಿ ಮಳೆಯಾದರೆ ನಷ್ಟದ ಮೇಲೆ ನಷ್ಟವೇ ಅನುಭವಿಸಬೇಕಾಗುತ್ತದೆ ಎಂಬುದು ಬೆಳೆಗಾರರ ಅಳಲಾಗಿದೆ.

ಕಾಫಿ ಹಣ್ಣಾಗುವ ಸಂದರ್ಭದಲ್ಲಿ ಮಳೆಯಾದ ಕಾರಣ ವ್ಯಾಪಕವಾದ ಉದುರುವಿಕೆ ಆರಂಭಗೊಂಡು ಈ ವರ್ಷ ದೊಡ್ಡ ಪ್ರಮಾಣದಲ್ಲಿ ಇಳುವರಿ ಕಡಿಮೆಯಾಗಿತ್ತು. ಈ ಆತಂಕದಲ್ಲೇ ಇದ್ದ ಸಂದರ್ಭದಲ್ಲಿ ಮಂಗಳವಾರದ ಮಳೆ ಕಾಫಿ ಬೆಳೆಗಾರನ್ನು ಮತ್ತಷ್ಟು ಘಾಸಿಗೊಳಿಸಿದೆ ಎಂದು ಅಭಿಪ್ರಾಯಪಟ್ಟಿರುವ ವಿರಾಜಪೇಟೆ ಸಮೀಪದ ಹೊಸಕೋಟೆಯ ಡಿಎಚ್‌ಎಸ್ ಎಸ್ಟೇಟ್ ಮಾಲೀಕರಾದ ದುದ್ದಿಯಂಡ ಸೂಫಿ ಹಾಜಿ ಅವರು, ಈ ಅಕಾಲಿಕ ಮಳೆಯಿಂದಾಗಿ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ ಎಂದು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.

ಈ ಭಾಗದಲ್ಲಿ ಸಾಕಷ್ಟು ತೋಟದ ಕಾಫಿಗಳು ಕೊಚ್ಚಿ ಹೋಗಿದೆ. ಒಮ್ಮೆ ಕಣದಿಂದ ನೀರು ಮಿಶ್ರಣಗೊಂಡು ಕೊಚ್ಚಿ ಹೋದ ಕಾಫಿಯನ್ನು ಮಣ್ಣಿನಿಂದ ಬೇರ್ಪಡಿಸಿ ಮತ್ತೆ ಅವುಗಳನ್ನು ಸುಸ್ಥಿತಿಗೆ ತರುವುದು ಬಹುದೊಡ್ಡ ಕಷ್ಟದ ಕೆಲಸ. ಒಣಗಿದ ಕಾಫಿಗೆ ನೀರು ಮಿಶ್ರಣಗೊಂಡರೆ ಅದರ ನೈಜತೆ ನಷ್ಟಗೊಳ್ಳುತ್ತದೆ ಎಂದು ವಿವರಿಸಿದ ಸೂಫಿ ಹಾಜಿ, ಕಾಫಿ ಹಣ್ಣು ಒಣಗುವ ಹಂತದಲ್ಲಿ ಮಳೆಯಾದರೆ ಬೀಜದ ಗುಣಮಟ್ಟ ಕಡಿಮೆಯಾಗುತ್ತದೆ. ಅಲ್ಲದೆ ಕಾಫಿ ಪುಡಿಯ ರುಚಿಯಲ್ಲಿ ಸಾಕಷ್ಟು ವ್ಯತ್ಯಾಸವಾಗುತ್ತದೆ. ಜೊತೆಗೆ ಮುಂದಿನ ಸಾಲಿನ ಇಳುವರಿಯೂ ಕುಂಠಿತವಾಗಲಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

ಕರ್ತವ್ಯಕ್ಕೆ ಅಡ್ಡಿಪಡಿಸಿ, ನೆಲ್ಯಹುದಿಕೇರಿ ಪಿಡಿಓ ಮೇಲೆ ಹಲ್ಲೆ

ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲು, ಇಬ್ಬರ ಬಂಧನ

ಸಿದ್ದಾಪುರ, ಜ.25– ಕರ್ತವ್ಯದಲ್ಲಿದ್ದ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮೇಲೆ ಹಲ್ಲೆ ನಡೆಸಿ ಕರ್ತವ್ಯಕ್ಕೆ ಅಡ್ಡಿಪಡಿಸಿರುವ ಘಟನೆ ನೆಲ್ಯಹುದಿಕೇರಿಯಲ್ಲಿ ನಡೆದಿದೆ.



ಪಿಡಿಓ ಅನಿಲ್‌ಕುಮಾರ್

ಹಲ್ಲೆಗೊಳಗಾದ ಕುಶಾಲನಗರ ತಾಲೂಕಿನ ನೆಲ್ಯಹುದಿಕೇರಿ ಗ್ರಾಮ ಪಂಚಾಯತಿ ಪಿಡಿಓ ಹೆಚ್.ಎಸ್ ಅನಿಲ್ ಕುಮಾರ್ ಸಿದ್ದಾಪುರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬಸವ ವಸತಿ ಯೋಜನೆಯ ಫಲಾನುಭವಿಯೊಬ್ಬರ ಮನೆಯ ಜಿಪಿಎಸ್ ಮಾಡಲು ನೆಲ್ಯಹುದಿಕೇರಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಮೂರನೆಯ ವಾರ್ಡಿಗೆ ಮೋಟಾರು ಸೈಕಲ್‌ನಲ್ಲಿ ತೆರಳಿ ವಾಪಾಸು ಬರುತ್ತಿದ್ದ ಸಂದರ್ಭ ಇದೇ ಗ್ರಾಮದ ಶಿವ ಕುಮಾರ್ ಹಾಗೂ ಪದ್ಮನಾಭ ಎಂಬವರು ದಾರಿ ತಡೆದು ಇದು ಖಾಸಗಿ ರಸ್ತೆ, ಇಲ್ಲಿ ಯಾಕೆ ಬಂದಿದ್ದೀರಿ ಎಂದು ಮೋಟಾರ್ ಸೈಕಲ್ ನ ಕೀಯನ್ನು ಕಿತ್ತುಕೊಂಡು ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ನಡೆಸಿರುವುದಲ್ಲದೆ ಕೊಲೆ ಬೆದರಿಗೆ ಒಡ್ಡಿರುವುದಾಗಿ ಪಿಡಿಓ ಅನಿಲ್ ಕುಮಾರ್ ಸಿದ್ದಾಪುರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಹಲ್ಲೆ ಪ್ರಕರಣ ಆರೋಪದಡಿಯಲ್ಲಿ ಇಬ್ಬರನ್ನು ಬಂಧಿಸಿ ಕ್ರಮ ಕೈಗೊಂಡಿದ್ದಾರೆ. ಹಲ್ಲೆ ಸಂದರ್ಭದಲ್ಲಿ ಪಿಡಿಓ ಅನೀಲ್ ಕುಮಾರ್ ಮೊಬೈಲ್ ಮೂಲಕ ಚಿತ್ರೀಕರಣ ಮಾಡಿಕೊಂಡಿದ್ದಾರೆ. ಅಧಿಕಾರಿಯ ಮೇಲೆ ಅಟ್ಟಾಡಿಸಿಕೊಂಡು ಹೊಡೆಯುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಖಂಡನೆ: ಕೊಡಗು ಪಿಡಿಓ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ರವೀಶ್ ಘಟನೆಯನ್ನು ಖಂಡಿಸಿದಲ್ಲದೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಇಲಾಖೆಯನ್ನು ಒತ್ತಾಯಿಸಿದ್ದಾರೆ.

ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಕೊಡಗು ಜಿಲ್ಲಾಧ್ಯಕ್ಷ ಕೆ.ಪಿ ಸೋಮಣ್ಣ ಘಟನೆಯನ್ನು ಖಂಡಿಸಿ ಸಿದ್ದಾಪುರ ಪೊಲೀಸರಿಗೆ ಮನವಿ ನೀಡಿದ್ದಾರೆ ಪಿಡಿಓ ಮೇಲೆ ನಡೆದ ಹಲ್ಲೆಯನ್ನ ಪೊಲೀಸರು ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳೂವದರೊಂದಿಗೆ ಅಧಿಕಾರಿಗೆ ರಕ್ಷಣೆ ನೀಡಬೇಕೆಂದು ಮನವಿ ಮಾಡಿದ್ದಾರೆ.

ಫೆ.5,ಆಫ್ ರೋಡ್ ರ್‍ಯಾಲಿ

ಮಡಿಕೇರಿ,ಜ.25– ರೊಬೆಸ್ಟಾ ಎಡ್ವೆಂಚರಸ್ ಆಂಡ್ ಸ್ಪೋರ್ಟ್ಸ್ ಅಕಾಡೆಮಿ ವತಿಯಿಂದ ಫೆ.5ರಂದು ಮಡಿಕೇರಿ ತಾಲೂಕಿನ ಬೆಟ್ಟತ್ತೂರಿನಲ್ಲಿ ರಾಷ್ಟ್ರಮಟ್ಟದ 4x4 ಆಫ್ ರೋಡ್ ರ್‍ಯಾಲಿ ನಡೆಯಲಿದೆ ಎಂದು ಆಯೋಜಕರಾದ ಉದ್ದಪ್ಪಂಡ ತಿಮ್ಮಣ್ಣ ತಿಳಿಸಿದ್ದಾರೆ.

ಕ್ಯಾಂಪ್ ಎಟ್ ಬೆಟ್ಟತ್ತೂರಿನಲ್ಲಿ (ಜಿಪಿಎಸ್ ಲೊಕೇಶನ್: ತ್ರಿಹಿಲ್ಸ್ ರೆಸಾರ್ಟ್) ಅಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯ ವರೆಗೆ ರ್‍ಯಾಲಿ ನಡೆಯಲಿದ್ದು, ಹೊರ ರಾಜ್ಯಗಳ ಪ್ರತಿಭಾವಂತ ಸ್ಪರ್ಧಿಗಳು ಪಾಲ್ಗೊಳ್ಳಲಿದ್ದಾರೆ. ರೊಬೆಸ್ಟಾ 4x4 ಆಫ್ ರೋಡ್ ರ್‍ಯಾಲಿ ಯಲ್ಲಿ ಭಾಗವಹಿಸಲು ಇಚ್ಛಿಸುವ ವರು ಜ.30ರೊಳಗಾಗಿ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಬಹುದು. ಮಾಹಿತಿಗೆ 9901312776, 9448448399 ಸಂಪರ್ಕಿಸುವಂತೆ ಉದ್ದಪ್ಪಂಡ ತಿಮ್ಮಣ್ಣ ಕೋರಿದ್ದಾರೆ.

ತಿತಿಮತಿ ಬಳಿಯ ಜಂಗಲ್ ಹಾಡಿಯಲ್ಲಿ ಹುಲಿ ದಾಳಿಗೆ ಹಸು ಬಲಿ

ಗೋಣಿಕೊಪ್ಪ, ಜ.25– ತಿತಿಮತಿ ಪಂಚಾಯಿತಿ ಜಂಗಲ್ ಹಾಡಿಯಲ್ಲಿ ಹುಲಿ ದಾಳಿಗೆ ಹಸು ಬಲಿಯಾಗಿದೆ ಹಾಡಿಯ ನಿವಾಸಿ ದಿನೇಶ್ ಅವರ ನಾಲ್ಕು ವರ್ಷದ ಹಸುವನ್ನು ಮೇಯಲು ಬಿಡಲಾಗಿತ್ತು. ಸಂಜೆ ನಾಲ್ಕು ಗಂಟೆಗೆ ಹಸುವಿನ ಮೇಲೆ ಹುಲಿ ದಾಳಿ ನಡೆಸಿದೆ ಎಂದು ಸ್ಥಳೀಯರು ಅರಣ್ಯ ಅಧಿಕಾರಿಗಾಳಿಗೆ ಮಾಹಿತಿ ನೀಡಿದ್ದಾರೆ.

ಕಳೆದ ಒಂದು ತಿಂಗಳ ಹಿಂದೆ ದಿನೇಶ್ ಅವರ ಹಸುವನ್ನು ಹುಲಿ ಭಕ್ಷಿಸಿತ್ತು. ತಿಂಗಳಲ್ಲಿ ಎರಡು ಹಸುವನ್ನು ಕಳೆದುಕೊಂಡು ಬಾರಿ ನಷ್ಟ ಅನುಭವಿಸಿದ್ದಾರೆ. ಅರಣ್ಯ ಸಿಬ್ಬಂದಿಗಳು ಘಟನ ಸ್ಥಳಕ್ಕೆ ಬರುತ್ತಾರೆ ಹೊರತು ಅಧಿಕಾರಿಗಳು ಬೇಟಿ ನೀಡುತ್ತಿಲ್ಲ. ಈ ಕಾರಣದಿಂದ ಸೂಕ್ತವಾದ ಪರಿಹಾರ ಒದಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಕಳೆದ ಮೂವತ್ತು ದಿನಗಳಲ್ಲಿ ದಿನೇಶ್ ಅವರ ಎರಡು ಹಸು ಮತ್ತು ಚುಬ್ರು ಅವರ ಒಂದು ಹಸು ಸೇರಿದಂತೆ ಮೂರು ಹಸುಗಳ ಮೇಲೆ ಹುಲಿ ದಾಳಿ ನಡೆಸಿದೆ. ಗ್ರಾಮ ಮತ್ತು ಹಾಡಿಗಳಲ್ಲಿ ನಿರಂತರವಾಗಿ ಹುಲಿ ಹಾವಳಿ ಮಿತಿಮೀರಿದ್ದು, ಜಾನುವಾರುಗಳನ್ನು ಭಕ್ಷಿಸುತ್ತಿ ರುವುದು ಜನರಲ್ಲಿ ಆತಂಕ ಸೃಷ್ಟಿಸಿದೆ. ಅರಣ್ಯ ಇಲಾಖೆ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ತೆಗೆದುಕೊಳ್ಳದಿದ್ದರೆ ಇಲಾಖೆ ಎದುರು ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದ್ದಾರೆ.

ಇಂದಿನಿಂದ ಜ.30ರವರೆಗೆ ಫಲಪುಷ್ಪ ಪ್ರದರ್ಶನ

ಮಂಡ್ಯ, ಜ.25– ಜಿಲ್ಲಾಡಳಿತ, ಜಿಪಂ ಮತ್ತು ತೋಟಗಾರಿಕೆ ಇಲಾಖೆ ಸಂಯುಕ್ತಾಶ್ರಯದಲ್ಲಿ ಜ.26 ರಿಂದ 30 ರವರೆಗೆ ಜಿಲ್ಲಾ ತೋಟಗಾರಿಕೆ ಕಚೇರಿ ಆವರಣದಲ್ಲಿ 2022–23ರ ಫಲಪುಷ್ಪ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಪ್ರತಿದಿನ ಬೆಳಗ್ಗೆ 10 ಗಂಟೆಯಿಂದ ರಾತ್ರಿ 8.30 ರವರೆಗೆ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಅವಕಾಶವಿರುತ್ತದೆ. ಪ್ರತಿದಿನ ಸಂಜೆ 6ರಿಂದ ರಾತ್ರಿ 8.30ರವರೆಗೆ ಸಾಂಸ್ಕೃತಿಕ ಹಾಗೂ ಮನರಂಜನಾ ಕಾರ್ಯಕ್ರಮ ಏರ್ಪಡಿಸಲಾಗಿದೆ.

ವಿಶೇಷ ಆಕರ್ಷಣೆಗಳು: ರೈತರಿಂದ–ಗ್ರಾಹಕರಿಗೆ ನೇರ ಮಾರಾಟ ಶೀರ್ಷಿಕೆಯಡಿ ಜಿಲ್ಲೆಯ ರೈತ ಉತ್ಪಾದಕ ಕಂಪನಿಗಳ ವಿವಿಧ ಉತ್ಪನ್ನಗಳ ರಿಟೇಲ್ ಬ್ರಾಂಡ್‌ಗಳ ಪ್ರದರ್ಶನ ಮತ್ತು ಮಾರಾಟ, ವೈವಿಧ್ಯಮಯ ಅಲಂಕಾರಿಕ ಹೂ ಕುಂಡಗಳ ಜೋಡಣೆ, ವಿವಿಧ ಆಕರ್ಷಕ ಬೋನ್ಸಾಯ್ ಜೋಡಣೆ ಮತ್ತು ಪ್ರದರ್ಶನ, ವಿವಿಧ ಅಲಂಕಾರಿಕ ತರಕಾರಿ ಕೆತ್ತನೆ ಪ್ರದರ್ಶನ, ಪೌಷ್ಠಿಕ ಕೈತೋಟದ ಮಾದರಿ ಪ್ರದರ್ಶನ, ಜಿಲ್ಲೆಯ ವಿವಿಧ ಪ್ರಗತಿಪರ ರೈತರ ತೋಟಗಾರಿಕೆ ಬೆಳೆಗಳ ವೈವಿಧ್ಯತೆ ಮಾದರಿಗಳ ಪ್ರದರ್ಶನ, ಅಕ್ವೇರಿಯಂ ಮತ್ತು ವಿವಿಧ ಮೀನಿನ ತಳಿಗಳ ಪ್ರದರ್ಶನ ನಡೆಯಲಿದೆ.

ಕಾರ್ಯಕ್ರಮವನ್ನು ಜ.26ರಂದು ಬೆಳಗ್ಗೆ 10.30ಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಉದ್ಘಾಟಿಸಲಿದ್ದಾರೆ. ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ರೇಷ್ಮೆ ಇಲಾಖೆ ಸಚಿವ ಡಾ.ಕೆಸಿ ನಾರಾಯಣಗೌಡ, ತೋಟಗಾರಿಕೆ ಸಚಿವ ಮುನಿರತ್ನ ಉಪಸ್ಥಿತರಿದ್ದು, ಶಾಸಕರಾದ ಎಂ.ಶ್ರೀನಿವಾಸ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದೆ ಸುಮಲತಾ, ಶಾಸಕರಾದ ಡಿ.ಸಿ.ತಮ್ಮಣ್ಣ, ಸಿ.ಎಸ್.ಪುಟ್ಟರಾಜು, ಸುರೇಶ್‌ಗೌಡ, ಡಾ.ಕೆ.ಅನ್ನದಾನಿ, ರವೀಂದ್ರ ಶ್ರೀಕಂಠಯ್ಯ, ವಿಧಾನ ಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಮಧು ಜಿ.ಮಾದೇಗೌಡ, ದಿನೇಶ್ ಗೂಳಿಗೌಡ, ನಗರಸಭೆ ಅಧ್ಯಕ್ಷ ಹೆಚ್.ಎಸ್.ಮಂಜು, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಶ್ರೀನಿವಾಸ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಯರಾಮ ರಾಯಪುರ, ನಗರಸಭೆ ಉಪಾಧ್ಯಕ್ಷೆ ಇಷ್ರಾತ್ ಫಾತೀಮಾ, ತೋಟಗಾರಿಕೆ ಇಲಾಖೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಠಾರಿಯಾ, ತೋಟಗಾರಿಕೆ ಇಲಾಖೆ ನಿರ್ದೇಶಕರಾದ ಕೆ.ನಾಗೇಂದ್ರ ಪ್ರಸಾದ್, ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲಕೃಷ್ಣ, ಎಸ್ಪಿ ಎನ್.ಯತೀಶ್, ಜಿಪಂ ಸಿಇಓ ಶಾಂತ ಎಲ್.ಹುಲ್ಮನಿ, ಅಪರ ಜಿಲ್ಲಾಧಿಕಾರಿ ಡಾ.ಹೆಚ್ ಎಲ್ ನಾಗರಾಜು, ವಿಶೇಷ ಅಹ್ವಾನಿತರಾಗಿ ಅಂತರಾಷ್ಟ್ರೀಯ ಮಟ್ಟದ ಬೋನಾಯ್ ಪರಿಣಿತರಾದ ಅನುಪಮಾ ವೇದಾಚಲ ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ.

ನಿವೃತ್ತ ಪ್ರಾಧ್ಯಾಪಕ ಡಾ.ಕೆ.ವಿ.ಪ್ರಭಾಕರ್ ಇನ್ನಿಲ್ಲ



ಮಂಡ್ಯ: ಮೈಸೂರು ವಿಶ್ವವಿದ್ಯಾಲಯದ ವಾಣಿಜ್ಯ ವಿಭಾಗದಲ್ಲಿ ಪ್ರಪ್ರಥಮ ಪಿಎಚ್‌ಡಿ ಪದವೀಧರರು, ಗುಲ್ಬರ್ಗ ವಿವಿಯ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರಾಗಿ ನಿವೃತ್ತರಾಗಿದ್ದ ಡಾ.ಕೆ.ವಿ. ಪ್ರಭಾಕರ್ (83) ಅವರು ಮಂಗಳವಾರ ರಾತ್ರಿ ನಿಧನ ಹೊಂದಿದರು.

ಮೃತರಿಗೆ ಪತ್ನಿ ಸರೋಜಮ್ಮ, ಮೂವರು ಪುತ್ರರು, ಓರ್ವ ಪುತ್ರಿ ಇದ್ದಾರೆ. ಅವರ ನಿಧನಕ್ಕೆ ಮಂಡ್ಯ ಪಿಇಎಸ್ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಡಾ.ಡಿ.ಶ್ರೀನಿವಾಸ್, ಪ್ರೊ.ಜಿ.ಟಿ. ವೀರಪ್ಪ, ಎಂ.ಎಸ್.ಚಂದ್ರಶೇಖರ್ ಸಂತಾಪ ಸೂಚಿಸಿದ್ದಾರೆ.

ನಾಳೆ ಮಂಡ್ಯದಲ್ಲಿ ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆ

75 ಸಾವಿರ ಜನ ಭಾಗಿ ನಿರೀಕ್ಷೆ, ಸಕ್ಕರೆ ನಾಡಲ್ಲಿ ರಾರಾಜಿಸುತ್ತಿರುವ ಕೈ ನಾಯಕರ ಪ್ಲೆಕ್ಸ್‌ಗಳು

ಮಂಡ್ಯ, ಜ.24– ಕೆಪಿಸಿಸಿ ನೇತೃತ್ವದಲ್ಲಿ ನಡೆಯುತ್ತಿರುವ ಪ್ರಜಾಧ್ವನಿ ಯಾತ್ರೆ ಜ.27ರಂದು ಮಂಡ್ಯ ಜಿಲ್ಲೆಯಲ್ಲಿ ಹಮ್ಮಿಕೊಂಡಿದ್ದು, ನಗರದ ಬಾಯ್ಸ್ ಕಾಲೇಜು (ಮಂಡ್ಯ ವಿವಿ) ಮೈದಾನದಲ್ಲಿ ಬೃಹತ್ ವೇದಿಕೆಯನ್ನು ನಿರ್ಮಾಣ ಮಾಡಲಾಗುತ್ತಿದೆ.



ಬುಧವಾರ ಮಂಡ್ಯ ನಗರದ ಬಾಯ್ಸ್ ಕಾಲೇಜು ಆವರಣಕ್ಕೆ ಭೇಟಿ ನೀಡಿದ ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ಹಾಗೂ ಕಾಂಗ್ರೆಸ್ ಮುಖಂಡರು ವೇದಿಕೆಯನ್ನು ಪರಿಶೀಲಿಸಿದರು. ಜೊತೆಗೆ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸುವ ಬಗ್ಗೆ ಸಿಬ್ಬಂದಿಗಳಿಗೆ ಹಲವು ಸೂಚನೆಗಳನ್ನು ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಸಚಿವ ಎನ್.ಚಲುವರಾಯಸ್ವಾಮಿ, ಸುಮಾರು 75 ಸಾವಿರ ಜನ ಯಾತ್ರೆಯಲ್ಲಿ ಭಾಗವಹಿಸುವ ನಿರೀಕ್ಷೆ ಇದ್ದು, ಪ್ರಮುಖವಾಗಿ ಮಂಡ್ಯ ತಾಲೂಕು ಸೇರಿದಂತೆ ಏಳು ಕ್ಷೇತ್ರದಿಂದ ನಿರೀಕ್ಷೆಗೂ ಮೀರಿದ ಜನರನ್ನು ಕರೆ ತರಬೇಕೆಂಬ ಹಂಬಲ ಹೊಂದಿದ್ದೇವೆ. ಈ ಸಭೆ ಯಶಸ್ವಿಯಾಗಿ ಆಗುತ್ತದೆ. ಒಂದು ತಾಲೂಕಿಗೆ ಕನಿಷ್ಟ ನೂರು ಬಸ್‌ಗಳ ವ್ಯವಸ್ಥೆ ಮಾಡಿದ್ದು, ಒಟ್ಟಾರೆ 800 ಬಸ್‌ಗಳನ್ನು ವ್ಯವಸ್ಥೆ ಮಾಡಿದ್ದು, ಮಂಡ್ಯದಲ್ಲಿ ಮಾತ್ರ ಬಸ್, ಬೈಕ್, ಆಟೋ, ಅಥೆ ಆಟೋ ಮೂಲಕ ಜನರನ್ನು ಕರೆ ತರಲು ತೀರ್ಮಾನಿಸಿದ್ದೇವೆ ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಗಣಿಗ ರವಿ ಕುಮಾರ್ ಮಾತನಾಡಿ, ಇದೊಂದು ಐತಿಹಾಸಿಕ ಸಮಾವೇಶವಾಗಿದ್ದು, ಮಂಡ್ಯ ವಿಧಾನಸಭಾ ಕ್ಷೇತ್ರದಿಂದಲೇ ಕನಿಷ್ಟ 30 ಸಾವಿರ ಜನರನ್ನು ಸೇರಿಸಬೇಕೆಂಬ ಉದ್ದೇಶ ಹೊಂದಿದ್ದೇವೆ. ಇದಕ್ಕಾಗಿ ಎಲ್ಲಾ ರೀತಿ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಯಾತ್ರೆಯನ್ನು ಯಶಸ್ವಿ ಮಾಡುವುದೇ ನಮ್ಮ ಗುರಿಯಾಗಿದೆ ಎಂದು ಹೇಳಿದರು.

ಮಂಡ್ಯ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ಕೀಲಾರ ರಾಧಾಕೃಷ್ಣ ಮಾತನಾಡಿ, ಮಂಡ್ಯ ಜಿಲ್ಲೆಯಲ್ಲಿ ಏಳಕ್ಕೆ ಏಳು ಕ್ಷೇತ್ರದಲ್ಲೂ ಕಾಂಗ್ರೆಸ್ ಅನ್ನು ಗೆಲ್ಲಿಸುವ ಗುರಿ ಹೊಂದಿದ್ದೇವೆ. ಇದಕ್ಕೆ ಪ್ರಜಾಧ್ವನಿ ಯಾತ್ರೆ ಮುನ್ನುಡಿಯಾಗಲಿದ್ದು, ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ಜನವಿರೋಧಿ ಆಡಳಿತದ ವಿರುದ್ಧ ಈ ಯಾತ್ರೆ ನಡೆಯಲಿದ್ದು, ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಜನರಿಗಾಗಿ ಯಾವ್ಯಾವ ಕೆಲಸ ಮಾಡಲಿದೆ ಎಂಬುದನ್ನು ನಮ್ಮ ನಾಯಕರು ಯಾತ್ರೆಯಲ್ಲಿ ತಿಳಿಸಿಕೊಡಲಿದ್ದಾರೆ. ಈಗಾಗಲೇ ನಿರೀಕ್ಷೆಗೂ ಮೀರಿದ ಜನರನ್ನು ಕರೆತರಲು ಹಲವು ಕಡೆ ಪೂರ್ವಭಾವಿ ಸಭೆಗಳನ್ನು ಮಾಡಿದ್ದು, ಈ ಸಮಾವೇಶ ಯಶಸ್ವಿಯಾಗಲಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಮುಖಂಡ ಎಂ.ಎಸ್. ಚಿದಂಬರ್ ಮಾತನಾಡಿ, ಪ್ರಜಾಧ್ವನಿ ಯಾತ್ರೆ ಯಶಸ್ವಿಗೊಳಿಸಲು ನಾವು ಸಿದ್ಧರಾಗಿದ್ದು, ನಮ್ಮ ನಾಯಕರು ಒಬ್ಬೊಬ್ಬರಿಗೆ ಒಂದೊಂದು ಜವಾಬ್ದಾರಿಯನ್ನು ವಹಿಸಿದ್ದಾರೆ. ಈ ನಿಟ್ಟಿನಲ್ಲಿ ನಾವು ಶ್ರಮಿಸುತ್ತಿದ್ದು, ಅಂದಿನ ಯಾತ್ರೆಗೆ ಮಾಜಿ ಸಿಎಂ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ರಾಜ್ಯದ ಎಲ್ಲಾ ಹಿರಿಯ ಕಾಂಗ್ರೆಸ್ಸಿಗರು ಭಾಗಿಯಾಗಲಿದ್ದು, ಸಮಾವೇಶವನ್ನು ಯಶಸ್ವಿಗೊಳಿಸಲು ನಾವು ಟೊಂಕ ಕಟ್ಟಿ ನಿಂತಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ಮುಖಂಡರಾದ ಅಮರಾವತಿ ಚಂದ್ರಶೇಖರ್, ಸಿದ್ದಾರೂಢ ಸತೀಶ್‌ಗೌಡ, ಉಮ್ಮಡಹಳ್ಳಿ ಶಿವಪ್ಪ, ಕೆಬ್ಬಳ್ಳಿ ಆನಂದ್, ಹಾಲಹಳ್ಳಿ ರಾಮಲಿಂಗಯ್ಯ, ಬಿ.ಸಿ.ಶಿವಾನಂದ, ವಿಜಯ್ ಕುಮಾರ್, ಸುರೇಶ್ ಕಂಠಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಇನ್ನಿತರರಿದ್ದರು.

ಯಾತ್ರೆ ಯಶಸ್ಸಿಗೆ ವಿಜಯರಾಮೇಗೌಡ ಮನವಿ

ಮಂಡ್ಯ: ಜ.27ರಂದು ಮಂಡ್ಯ ನಗರದಲ್ಲಿ ನಡೆಯಲಿರುವ ಪ್ರಜಾಧ್ವನಿ ಯಾತ್ರೆಯನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ, ಕೆ.ಆರ್.ಪೇಟೆ ತಾಲ್ಲೂಕಿನಿಂದ ನೂರಕ್ಕೂ ಹೆಚ್ಚು ಬಸ್‌ಗಳಲ್ಲಿ ಸುಮಾರು 10 ಸಾವಿರ ಮಂದಿಯನ್ನು ಕಾರ್ಯಕ್ರಮಕ್ಕೆ ಕರೆದೊಯ್ಯಲು ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ ಎಂದು ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡ ವಿಜಯ ರಾಮೇಗೌಡ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದೊಂದು ಐತಿಹಾಸಿಕ ಕಾರ್ಯಕ್ರಮವಾಗಿದ್ದು, ಕಾರ್ಯಕ್ರಮವನ್ನು ಯಶಸ್ವಿ ಮಾಡುವುದೇ ನಮ್ಮ ಅಝುಂಡವಾಗಿದೆ. ಜಿಲ್ಲಾ ನಾಯಕರ ಸೂಚನೆಯಂತೆ ಕೆ.ಆರ್.ಪೇಟೆಯಿಂದ ಹತ್ತು ಸಾವಿರಕ್ಕೂ ಅಧಿಕ ಜನರನ್ನು ಕರೆದೊಯ್ಯಲು ನಿರ್ಧರಿಸಿದ್ದು, ಕೆ.ಆರ್.ಪೇಟೆಯಿಂದ ಮುಖಂಡರು ಹಾಗೂ ಕಾರ್ಯಕರ್ತರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದರು.

ಪ್ರಜಾಧ್ವನಿ ಯಶಸ್ವಿಗೆ ಡಾ.ಕೃಷ್ಣ ನೇತೃತ್ವದಲ್ಲಿ ಸಭೆ

ಮಂಡ್ಯ: ಶುಕ್ರವಾರ ನಡೆಯಲಿರುವ ಪ್ರಜಾಧ್ವನಿ ಯಾತ್ರೆ ಯಶಸ್ವಿಗೆ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಡಾ.ಕೃಷ್ಣ ನೇತೃತ್ವದಲ್ಲಿ ಮಂಡ್ಯ ನಗರ ಸಭಾ ಸದಸ್ಯರು ಹಾಗೂ ಗ್ರಾಮಾಂತರ ಕಾಂಗ್ರೆಸ್ ಪಕ್ಷದ ಮುಖಂಡರ ಸಭೆ ನಡೆಯಿತು.

ತಮ್ಮ ಕಚೇರಿಯಲ್ಲಿ ಸಭೆ ನಡೆಸಿ ಮಾತನಾಡಿದ ಡಾ.ಕೃಷ್ಣ, ಮಂಡ್ಯ ವಿಧಾನಸಭಾ ಕ್ಷೇತ್ರದಿಂದ ಸರಿ ಸುಮಾರು 30 ಸಾವಿರ ಜನರನ್ನು ಕರೆ ತರಲು ತೀರ್ಮಾನಿಸಿದ್ದು, ಇದಕ್ಕಾಗಿ ಮಂಡ್ಯ ನಗರಸಭೆಯ ಹಾಲಿ ಹಾಗೂ ಮಾಜಿ ಸದಸ್ಯರೊಂದಿಗೆ ಚರ್ಚಿಸಿದ್ದು, ಗ್ರಾಮಾಂತರ ಪ್ರದೇಶದಲ್ಲಿ ತಾ.ಪಂ. ಹಾಗೂ ಗ್ರಾ.ಪಂ. ಸದಸ್ಯರೊಟ್ಟಿಗೂ ಚರ್ಚೆ ನಡೆಸಿದ್ದೇನೆ. ಎರಡು ಕಡೆಯಿಂದ 30 ಸಾವಿರ ಜನ ಸೇರಿಸಿ ಕಾರ್ಯಕ್ರಮ ಯಶಸ್ವಿಗೆ ತೀರ್ಮಾನಿಸಿದ್ದೇವೆ ಎಂದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಮುನಾವರ್ ಖಾನ್, ಮಂಜುನಾಥ್, ರಾಮಲಿಂಗಯ್ಯ, ನಹೀಂ, ಶ್ರೀಧರ್, ಅಮ್ಜದ್ ಪಾಷಾ ಸೇರಿದಂತೆ ಹಲವರಿದ್ದರು.

ಜ.28 ಸಾಮೂಹಿಕ ಸೂರ್ಯ ನಮಸ್ಕಾರ



ಚಾಮರಾಜನಗರ, ಜ.24– ರಥ ಸಪ್ತಮಿಯ ಅಂಗವಾಗಿ ಜ.28ರಂದು ಬೆಳಗ್ಗೆ 6ರಿಂದ 8 ಗಂಟೆಯವರೆಗೆ ಚಾಮರಾಜನಗರ ಮತ್ತು ಮರಿಯಾಲ ಗ್ರಾಮದಲ್ಲಿ ಸಾಮೂಹಿಕ ಸೂರ್ಯ ನಮಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀಪತಂಜಲಿ ಯೋಗ ಶಿಕ್ಷಣ ಸಮಿತಿ ಅಧ್ಯಕ್ಷ ಹೆಚ್.ಜಿ. ಶಿವಕುಮಾರಸ್ವಾಮಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ನಗರದ ಚೆನ್ನಿಪುರ ಮೋಳೆ ಬಳಿಯ ಸೇವಾಭಾರತಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ಹಾಗೂ ಮರಿಯಾಲದ ಶ್ರೀ ಮುರುಘ ರಾಜೇಂದ್ರಸ್ವಾಮಿ ಮಠದ ಆವರಣದಲ್ಲಿ ಸಾಮೂಹಿಕ 108 ಸೂರ್ಯ ನಮಸ್ಕಾರ ಹಮ್ಮಿಕೊಳ್ಳಲಾಗಿದೆ ಎಂದರು.

ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯ ವತಿಯಿಂದ ಕಳೆದ 12 ವರ್ಷ ಗಳಿಂದಲೂ ಸಾಮೂಹಿಕ ಸೂರ್ಯ ನಮಸ್ಕಾರ ನಡೆಸಲಾಗುತ್ತಿದೆ. ಅದರಂತೆ ಈ ವರ್ಷವೂ ಸಹ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಉಚಿತವಾಗಿ ಯೋಗವನ್ನು ಕಲಿಸಲಾಗುತ್ತಿದ್ದು, ಇದನ್ನು ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಕೋರಿದರು.

ನಂತರ ಯೋಗ ಶಿಕ್ಷಣ ನಿಜಗುಣ ಮಾತನಾಡಿ, ಪ್ರತಿದಿನ ನಗರದ ಸೇವಾ ಭಾರತಿ ಕನ್ನಡ ಮಾಧ್ಯಮ ಶಾಲೆ, ರೋಟರಿ ಭವನ ಹಾಗೂ ಮಹಾಮನೆಯಲ್ಲಿ ಬೆಳಗ್ಗೆ ಯೋಗ ತರಗತಿಗಳು ನಡೆಯುತ್ತಿದೆ. ಸಂಜೆ ವೇಳೆ ಮಹಿಳೆಯರಿಗಾಗಿ ನಗರದ ಕೊಳದ ಬೀದಿಯಲ್ಲಿರುವ ಯಾತ್ರಿ ನಿವಾಸ ಹಾಗೂ ಚಿಕ್ಕ ಅಂಗಡಿ ಬೀದಿಯಲ್ಲಿರುವ ರಾಮ ಮಂದಿರದಲ್ಲಿ ಯೋಗ ತರಗತಿಗಳು ಉಚಿತವಾಗಿ ನಡೆಯುತ್ತದೆ. ಆದರೆ, ಜಿಲ್ಲೆಯಲ್ಲಿ ಯೋಗಕ್ಕೆ ಜನರ ಬೆಂಬಲ ಕಡಿಮೆ ಇದೆ ಎಂದು ವಿಷಾಧಿಸಿದರು. ಸುದ್ದಿಗೋಷ್ಠಿಯಲ್ಲಿ ಯೋಗ ಶಿಕ್ಷಕರಾದ ಕೆ.ಜಿ. ಪ್ರಕಾಶ್, ಅಜಿತ್, ಸಿದ್ದರಾಜು, ದೊರೆಸ್ವಾಮಿ ಇದ್ದರು.

ಅಪರಿಚಿತ ವ್ಯಕ್ತಿ ಶವ ಪತ್ತೆ

ಮೈಸೂರು, ಜ.25– ಮೈಸೂರು ರೈಲ್ವೆ ನಿಲ್ದಾಣದ ಯಾರ್ಡ್ಸ್ ಸೆಕ್ಟರ್ ನಂ.3ರ ಹತ್ತಿರ ಅಸ್ವಸ್ಥನಾಗಿ ಬಿದ್ದಿದ್ದ ಸುಮಾರು 60–65 ವರ್ಷದ ವ್ಯಕ್ತಿಯನ್ನು ಚಿಕಿತ್ಸೆಗೆ ಕೆ.ಆರ್ ಆಸ್ಪತ್ರೆಗೆ ದಾಖಲಿಸಲಾಗಿದ್ದು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುತ್ತಾರೆ ಎಂದು ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತ ವ್ಯಕ್ತಿಯ ಚಹರೆ: 5.6 ಅಡಿ ಎತ್ತರ ಗೋಧಿ ಮೈ ಬಣ್ಣ, ದೃಢಕಾಯ ಶರೀರ, ಕೋಲು ಮುಖ, ಕಪ್ಪು ಬಿಳಿ ಕೂದಲು ಬಿಟ್ಟಿರುತ್ತಾರೆ. ಕೆಂಪು ಬಣ್ಣದ ಆಸ್ಪತ್ರೆಯ ಬೆಡ್ ಶೀಟ್ ಧರಿಸಿರುತ್ತಾರೆ. ಕಾಣೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆ ದೂ.ಸಂ: 0821–2516579 ಅನ್ನು ಸಂಪರ್ಕಿಸಿ ಎಂದು ಮೈಸೂರು ರೈಲ್ವೆ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಡು ಪ್ರಾಣಿಗಳ ಹಾವಳಿ, ಕುಡಿಯಲು ನೀರಿಲ್ಲ, ರಸ್ತೆಯಿಲ್ಲ, ಚರಂಡಿಯೂ ಇಲ್ಲ

ಗ್ರಾಮದ ಸಮಸ್ಯೆ ಬಗೆಹರಿಸಲು ಆಗ್ರಹಿಸಿ ರೈತರು, ಗ್ರಾಮಸ್ಥರ ಪ್ರತಿಭಟನೆ



ಬೇಗೂರು(ಗುಂಡ್ಲುಪೇಟೆ), ಜ.25– ಕಾಡು ಪ್ರಾಣಿಗಳ ಹಾವಳಿ, ಕುಡಿಯಲು ನೀರಿಲ್ಲ, ಓಡಾಡಲು ರಸ್ತೆಯಿಲ್ಲ, ನೀರು ಹರಿಯಲು ಚರಂಡಿಗಳಿಲ್ಲ... ಗ್ರಾಮದ ಈ ಸಮಸ್ಯೆಗಳನ್ನು ಬಗೆಹರಿಸುವಂತೆ ಆಗ್ರಹಿಸಿ ಸಮೀಪದ ಕೋಟೆಕೆರೆ ಗ್ರಾಮದಲ್ಲಿ ಕರ್ನಾಟಕ ರಾಜ್ಯ ರೈತಸಂಘ ಹಾಗೂ ಹಸಿರು ಸೇನೆಯ ವತಿಯಿಂದ ಗ್ರಾಮಪಂಚಾಯಿತಿ ಕಛೇರಿ ಎದುರು ಪ್ರತಿಭಟನಾ ಧರಣಿ ನಡೆಸಲಾಯಿತು.

ಗ್ರಾಮದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದ ಬಳಿ ಸಮಾವೇಶಗೊಂಡ ರೈತ ಸಂಘದ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಪ್ರಮುಖ ಬೀದಿಗಳಲ್ಲಿ ಗ್ರಾಮ ಪಂಚಾಯಿತಿ ಆಡಳಿತ ಹಾಗೂ ಗ್ರಾಮದ ಸಮಸ್ಯೆಗಳ ವಿರುದ್ಧ ಧಿಕ್ಕಾರ ಕೂಗುತ್ತ ಗ್ರಾಪಂ ಕಛೇರಿ ಆವರಣಕ್ಕೆ ತೆರಳಿ ಧರಣಿ ನಡೆಸಿ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಬರುವವರೆಗೂ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ಪಟ್ಟು ಹಿಡಿದರು. ಈ ವೇಳೆ ಸ್ಥಳಕ್ಕೆ ಆಗಮಿಸಿದ ಇ.ಓ ಶ್ರೀಕಂಠ ರಾಜೇಅರಸ್, ಪಿ.ಡಿ.ಓ ಶಾಂತರಾಜು, ಚೆಸ್ಕಾಂನ ಎ.ಇ.ಇ ರಾಮಚಂದ್ರ ರಾವ್ ಹಾಗೂ ಓಂಕಾರ ಅರಣ್ಯವಲಯದ ಆರ್‌ಎಫ್‌ಓ ಸತೀಶ್ ಅವರುಗಳನ್ನು ರೈತರು ತರಾಟೆಗೆ ತಗೆದುಕೊಂಡರು.

ಕಾಡಂಚಿನ ಗ್ರಾಮಗಳಿಗೆ ಕಾಡಾನೆ, ಜಿಂಕೆ, ಕರಡಿ, ಚಿರತೆ ಸೇರಿದಂತೆ ಮತ್ತಿತರ ಪ್ರಾಣಿಗಳು ದಾಳಿ ನಡೆಸಿ ಬೆಳೆಗಳನ್ನು ಹಾಳು ಮಾಡುತ್ತಿವೆ. ಜೊತೆಗೆ ಸೂಕ್ತ ಪರಿಹಾರವು ಸಿಗುತ್ತಿಲ್ಲ ಹಾಗೂ ರಾತ್ರಿವೇಳೆ ವಾಚರ್‌ಗಳು ಗಸ್ತು ತಿರುಗದೆ ಕಾಡಾನೆಗಳು ಜಮೀನಿನತ್ತ ದಾವಿಸಿ ಬೆಳೆಗಳನ್ನೆಲ್ಲ ತಿಂದು ಹಾಕುತ್ತಿವೆ. ಇವುಗಳ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕಾದ ಅಧಿಕಾರಿಗಳು ಕಛೇರಿಗೆ ತೆರಳಿ ಸಮಸ್ಯೆಗಳನ್ನು ತೋಡಿಕೊಂಡರೆ ಬೇಜವಬ್ದಾರಿಯ ಉತ್ತರ ನೀಡುತ್ತಾರೆ ಎಂದು ಆರ್‌ಎಫ್‌ಓ ಸತೀಶ್‌ರನ್ನು ತರಾಟೆಗೆ ತಗೆದುಕೊಂಡರು

ರೈತರ ನೀರಾವರಿ ಜಮೀನಿಗೆ ಟಿ.ಸಿ ದುರಸ್ತಿಗೆ 10 ರಿಂದ 15 ದಿನ ಕಾಯಿಸುವುದರಿಂದ ಬೆಳೆ ಒಣಗಿಹೋಗುತ್ತವೆ ಹಾಗೂ ಗ್ರಾಪಂ ಅಧ್ಯಕ್ಷ ಹಾಗೂ ಪಿಡಿಓ ಗ್ರಾಮದ ಮೂಲಭೂತ ಸೌಲಭ್ಯವನ್ನು ಒದಗಿಸುವಲ್ಲಿ ನಿರ್ಲಕ್ಷಿಸುತ್ತಿದ್ದಾರೆ. ಚರಂಡಿ ರಸ್ತೆ ಕುಡಿಯುವ ನೀರಿನ ಕೈ ಬೋರ್‌ಗಳು ಕೆಟ್ಟಿದ್ದರೂ ದುರಸ್ತಿ ಮಾಡಿಸುತ್ತಿಲ್ಲ ಪಿಡಿಓ ಕಛೇರಿಗೆ ಬರದೆ ಗೈರು ಹಾಜರಾಗುತ್ತಾರೆ. ಇ–ಸ್ವತ್ತು ನೀಡುವಲ್ಲಿ ಸಾರ್ವಜನಿಕರಿಂದ ಹಣ ವಸೂಲಿ ಮಾಡುತ್ತಿದ್ದಾರೆ. ಇಂತಹ ಭ್ರಷ್ಟ ಅಧಿಕಾರಿ ಹಾಗೂ ಗ್ರಾಪಂ ಅಧ್ಯಕ್ಷರನ್ನು ಸೇವೆಯಿಂದ ವಜಾಗೊಳಿಸಿ ಎಂದು ಆಗ್ರಹಿಸಿದರಲ್ಲದೆ, ನಾಳೆ (ಗುರುವಾರ) ನಡೆಯುವ ಗಣರಾಜ್ಯೋತ್ಸವದಲ್ಲಿ ಭ್ರಷ್ಟ ಗ್ರಾಪಂ ಅಧ್ಯಕ್ಷ ಧ್ವಜಾರೋಹಣ ನೆರವೇರಿಸಬಾರದು. ಬೇರೆ ಯಾರಾದರು ಧ್ವಜಾರೋಹಣ ನೇರವೇರಿಸುವಂತಾಗಲಿ ಎಂದು ಪ್ರತಿಭಟನೆ ವೇಳೆ ಆಗ್ರಹಿಸಲಾಯಿತು.

ಪ್ರತಿಭಟನೆಯಲ್ಲಿ ರೈತಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್, ಜಿಲ್ಲಾ ಕಾರ್ಯಧ್ಯಕ್ಷ ಮಹದೇವಪ್ಪ, ಕೋಟೆಕೆರೆ ಗ್ರಾಮ ಘಟಕದ ಅಧ್ಯಕ್ಷ ಮಹದೇವನಾಯ್ಕ ಪಿ.ಎಸ್.ಐ ಜಗದೀಶ ದೂಳಶೆಟ್ಟಿ, ಉಪಾಧ್ಯಕ್ಷ ಸಿದ್ದರಾಜು, ಸೀನಾ, ಮಹದೇವ ನಾಯ್ಕ ಹಾಗೂ ರೈತಸಂಘದ ಪದಾಧಿಕಾರಿಗಳು ಮತ್ತು ಗ್ರಾಮಸ್ಥರು ಹಾಜರಿದ್ದರು

ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲು ಕ್ರಮಕ್ಕೆ ಸೂಚನೆ

ಗುಂಡ್ಲುಪೇಟೆ, ಜ.24– ಅರ್ಹ ಫಲಾನುಭವಿಗಳಿಗೆ ಹಕ್ಕು ಪತ್ರ ನೀಡಲು ತುರ್ತಾಗಿ ಕ್ರಮ ಕೈಗೊಳ್ಳುವಂತೆ ಕಂದಾಯ ಇಲಾಖೆ ಅಧಿಕಾರಿಗಳಿಗೆ ಶಾಸಕ ಸಿ.ಎಸ್.ನಿರಂಜನ ಕುಮಾರ್ ಸೂಚನೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಅಕ್ರಮ ಸಕ್ರಮ ಅರ್ಜಿ ಹಾಗೂ ಪಟ್ಟಣದಲ್ಲಿ ಇ–ಸ್ವತ್ತು ಮಾಡಿಕೊಡುವ ಬಗ್ಗೆ ಸಾರ್ವಜನಿಕರು ದೂರು ನೀಡಿದ ಹಿನ್ನೆಲೆಯಲ್ಲಿ ಶಾಸಕ ನಿರಂಜನ್ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ಈ ಸೂಚನೆ ನೀಡಿದರು.

ಹಿಂದೆ ಸಲ್ಲಿಸಿದ್ದ ನಾಲ್ಕು ಸಾವಿರ ಅರ್ಜಿಗಳನ್ನು ಖುದ್ದಾಗಿ ಪರಿಶೀಲನೆ ನಡೆಸಿ ಎರಡು ಸಾವಿರ ಅರ್ಹ ಫಲಾನುಭವಿಗಳನ್ನು ಗುರ್ತಿಸಿ ಈಗಾಗಲೇ ಕೆಲವರಿಗೆ ಸಾಂಕೇತಿಕವಾಗಿ ಹಕ್ಕು ಪತ್ರ ವಿತರಿಸಲಾಗಿದ್ದು, ಇತ್ತೀಚಿಗೆ ಅರ್ಜಿ ಸಲ್ಲಿಸಿದವರಿಗೂ ವಿತರಣೆ ಮಾಡಲು ಕಂದಾಯ, ಸರ್ವೇ, ಅರಣ್ಯ ಇಲಾಖೆಯ ಅಧಿಕಾರಿಗಳು ಕ್ರಮ ಕೈಗೊಳ್ಳಿ ಎಂದು ಕೊಳ್ಳೇಗಾಲ ಉಪವಿಭಾಗಾದಿಕಾರಿ ಗೀತಾ ಉಡೇದ್ ಅವರಿಗೆ ಸೂಚಿಸಿದರು.

ಟೌನ್ ಪ್ಲಾನಿಂಗ್ ನಿಯಮಗಳನ್ನು ಪಾಲಿಸದೆ ನಿರ್ಮಾಣದ ಪಟ್ಟಣದ ವಿವಿಧ ಬಡಾವಣೆಯ ನಿವೇಶನ ಇ–ಸ್ವತ್ತು ಮಾಡಿಕೊಡುವ ಬಗ್ಗೆ ಸರ್ಕಾರ ತೀರ್ಮಾನ ಕೈಗೊಂಡಿದ್ದು ಸದ್ಯದಲ್ಲಿ ನೆನೆಗುದಿಗೆ ಬಿದ್ದಿರುವ ಇ–ಸ್ವತ್ತುಗಳನ್ನು ಕೂಡಲೇ ಮಾಡಿ ಎಂದು ಪುರಸಭೆ ಮುಖ್ಯಾಧಿಕಾರಿ ಆರ್.ಹೇಮಂತರಾಜು ಅವರಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಬಗರ್ ಹುಕುಂ ಸಮಿತಿಯ ಉಪಾಧ್ಯಕ್ಷ ನಿಟ್ರೆ ನಾಗರಾಜಪ್ಪ, ಹಾಪ್ ಕಾಮ್ಸ್ ಜಿಲ್ಲಾಧ್ಯಕ್ಷ ಕೆ.ಆರ್. ಲೋಕೇಶ್, ಸೆಸ್ಕ್ ಎಇಇ ಕೆ.ಎಂ.ಸಿದ್ದಲಿಂಗಪ್ಪ ಕೃಷಿ ಅಧಿಕಾರಿ ಕೆ.ಎನ್. ಪರಮೇಶ್ವರಪ್ಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಚೆಲುವರಾಜು, ಕುಡಿಯುವ ನೀರು ವಿಭಾಗದ ಜೆಇ ಸುನಿಲ್ ಹಾಗೂ ಇತರರು ಇದ್ದರು.



ಗುಂಡ್ಲುಪೇಟೆ ಪಟ್ಟಣದ ಪ್ರವಾಸಿಮಂದಿರದಲ್ಲಿ ನಡೆದ ಜನಸಂಪರ್ಕ ಸಭೆಯಲ್ಲಿ ಶಾಸಕ ನಿರಂಜನಕುಮಾರ್ ಸಾರ್ವಜನಿಕರ ದೂರು ಪರಿಹರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಗೀತಾ ಹುಡೇದ್, ನಾಗರಾಜಪ್ಪ ಇದ್ದರು.

ನಾಳೆ ರಾಜ್ಯ ಜಾನಪದ ಪ್ರಪಂಚ ಪ್ರಶಸ್ತಿ ಪ್ರದಾನ

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಉದ್ಘಾಟನೆ



ಮೈಸೂರು,ಜ.25(ಪಿಎಂ)– ಕನ್ನಡ ಜಾನಪದ ಪರಿಷತ್ ರಾಜ್ಯ ಘಟಕ, ಮೈಸೂರು ಜಿಲ್ಲಾ ಘಟಕದ ವತಿಯಿಂದ ಜ.27ರಂದು ರಾಜ್ಯ ಜಾನಪದ ಪ್ರಪಂಚ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಘಟಕದ ಅಧ್ಯಕ್ಷ ಹೆಚ್.ಕ್ಯಾತನಹಳ್ಳಿ ಪ್ರಕಾಶ್ ತಿಳಿಸಿದರು. ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಮಾನಸ ಗಂಗೋತ್ರಿಯ ಲಲಿತ ಕಲಾ ಕಾಲೇಜು ಸಭಾಂಗಣದಲ್ಲಿ ಅಂದು ಬೆಳಗ್ಗೆ 10ಕ್ಕೆ ಸಮಾರಂಭ ಏರ್ಪಡಿಸಲಾಗಿದೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮಾರಂಭ ಉದ್ಘಾಟಿಸಲಿದ್ದು, ಶಾಸಕ ಹೆಚ್.ಪಿ.ಮಂಜುನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ. ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. 'ಸೃಷ್ಟಿ' ಕಾದಂಬರಿಯನ್ನು ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬಿಡುಗಡೆ ಮಾಡಲಿದ್ದಾರೆ ಎಂದರು.

'ಮದರಂಗಿ' ಜನಪದ ಕಥೆಗಳ ಪುಸ್ತಕವನ್ನು ಮಾಜಿ ಸಂಸದ ಆರ್.ಧ್ರುವನಾರಾಯಣ್ ಬಿಡುಗಡೆ ಮಾಡಲಿದ್ದು, 'ಅಪರೂಪದ ಒಡವೆ' ಕವನ ಸಂಕಲನವನ್ನು ಮಾಜಿ ಶಾಸಕ ವಾಸು ಬಿಡುಗಡೆ ಮಾಡಲಿದ್ದಾರೆ. ಇದೇ ವೇಳೆ ಹಲವು ಜಾನಪದ ತಜ್ಞರಿಗೆ ರಾಜ್ಯ ಜಾನಪದ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ತಿಳಿಸಿದರು. ಲೇಖಕ ಡಾ.ಬೆಸೂರು ಮೋಹನ್ ಪಾಳೇಗಾರ, ಪರಿಷತ್‌ನ ಮೈಸೂರು ವಿಭಾಗೀಯ ಸಂಚಾಲಕಿ ಡಾ.ಕಾವೇರಿ ಪ್ರಕಾಶ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

ಜ.28ರಂದು ಸಾಮೂಹಿಕ 108 ಸೂರ್ಯ ನಮಸ್ಕಾರ, ಸೂರ್ಯಯಜ್ಞ ಕಾರ್ಯಕ್ರಮ

ಮೈಸೂರು,ಜ.25(ಪಿಎಂ)– ಮೈಸೂರು ಯೋಗ ಒಕ್ಕೂಟದ ವತಿಯಿಂದ ಒಕ್ಕೂಟದ 22ನೇ ವಾರ್ಷಿಕೋತ್ಸವ ಮತ್ತು ರಥಸಪ್ತಮಿ ಅಂಗವಾಗಿ ಜ.28ರಂದು ಸಾಮೂಹಿಕ 108 ಸೂರ್ಯ ಸಮಸ್ಕಾರಗಳು ಹಾಗೂ ಸೂರ್ಯಯಜ್ಞ ಸಮಾರಂಭ ಏರ್ಪಡಿಸಲಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ಟಿ.ಜಲೇಂದ್ರಕುಮಾರ್ ತಿಳಿಸಿದರು.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 5.30ಕ್ಕೆ ಮೈಸೂರು ಅರಮನೆ ಉತ್ತರ ದ್ವಾರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಆವರಣದಲ್ಲಿ ಸಮಾರಂಭ ನಡೆಯಲಿದೆ. ಮೇಯರ್ ಶಿವಕುಮಾರ್ ಉದ್ಘಾಟಿಸಲಿದ್ದು, ಒಕ್ಕೂಟದ ಗೌರವಾಧ್ಯಕ್ಷ ಡಾ.ಎ.ಎಸ್.ಚಂದ್ರಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ. ಅತಿಥಿಗಳಾಗಿ ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪಾ, ಒಕ್ಕೂಟದ ಕಾರ್ಯಾಧ್ಯಕ್ಷರಾದ ಡಾ.ಬಿ.ಪಿ.ಮೂರ್ತಿ, ಶಾಂತರಾಮ್, ಉಪಾಧ್ಯಕ್ಷರಾದ ಎಂ.ಎಸ್.ರಮೇಶ್, ಎಂ.ಎಸ್.ಶಿವಪ್ರಕಾಶ್, ಕಾರ್ಯದರ್ಶಿ ಕೆ.ಜಿ.ದೇವರಾಜು ಪಾಲ್ಗೊಳ್ಳಲಿದ್ದಾರೆ ಎಂದರು.

ಸಾವಿರಕ್ಕೂ ಹೆಚ್ಚು ಯೋಗಪಟುಗಳು ಭಾಗವಹಿಸುವ ನಿರೀಕ್ಷೆ ಇದೆ. ಭಾಗವಹಿಸಲಿಚ್ಛಿಸುವ ಯೋಗಪಟುಗಳು ಶ್ವೇತವರ್ಣದ ಉಡುಪು ಧರಿಸಿ ಬರಬೇಕು. ಉಚಿತ ಪ್ರವೇಶವಿದ್ದು, ಭಾಗವಹಿಸುವ ಪ್ರತಿಯೊಬ್ಬರಿಗೂ ಪ್ರಮಾಣಪತ್ರ ನೀಡಲಾಗುವುದು. ವಿವರಗಳಿಗೆ ಮೊ.ಸಂ. 98860 83118 ಸಂಪರ್ಕಿಸಬಹುದು ಎಂದರು. ಒಕ್ಕೂಟದ ಕಾರ್ಯಾಧ್ಯಕ್ಷ ಡಾ.ಬಿ.ಪಿ.ಮೂರ್ತಿ, ಉಪಾಧ್ಯಕ್ಷ ಶಿವಪ್ರಕಾಶ್ ಗೋಷ್ಠಿಯಲ್ಲಿದ್ದರು.

ಕ್ಷೇತ್ರದ ಶಾಸಕರಿಂದ ಮಿರ್ಲೆ ಗ್ರಾಮ ನಿರ್ಲಕ್ಷ್ಯ, ಆರೋಪ

ಮೈಸೂರು,ಜ.25(ಪಿಎಂ)– ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದಲ್ಲಿ ಇಲ್ಲಿನ ಶಾಸಕರು ಹೇಳಿಕೊಳ್ಳುವಷ್ಟು ಪ್ರಮಾಣದ ಅಭಿವೃದ್ಧಿಯನ್ನು ಮಾಡಿಲ್ಲ. ಅದರಲ್ಲಿಯೂ ಇವರು ಕ್ಷೇತ್ರದ ಮಿರ್ಲೆ ಗ್ರಾಮವನ್ನು ನಿರ್ಲಕ್ಷ್ಯ ಮಾಡಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಎಂ.ಹೆಚ್.ನಂದೀಶ್ ಮಿರ್ಲೆ ಆರೋಪಿಸಿದರು.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಸಾ.ರಾ.ಮಹೇಶ್ 3 ಬಾರಿ ಕ್ಷೇತ್ರದಲ್ಲಿ ಆಯ್ಕೆಯಾಗಿದ್ದಾರೆ. ಸ್ವಯಂಘೋಷಿತ ಅಭಿವೃದ್ಧಿ ಹರಿಕಾರರೂ ಆಗಿದ್ದಾರೆ. ಇತ್ತೀಚೆಗೆ ಮಿರ್ಲೆ ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನಡೆದಿದ್ದು, ಆದರೆ ಅವು ಇಂದಿಗೂ ಕಾರ್ಯಗತವಾಗಿಲ್ಲ. ಇವರ ಮೂರು ಬಾರಿಯ ಶಾಸಕರ ಅವಧಿಯಲ್ಲಿ ಒಂದು ಉದ್ಯೋಗ ಮೇಳವೂ ಆಗಿಲ್ಲ ಎಂದು ದೂರಿದರು.

ಮಿರ್ಲೆಯಲ್ಲಿ ಧನಂಜಯ ಎಂಬ ಶಿಕ್ಷಕರೊಬ್ಬರು ಸಾ.ರಾ.ಮಹೇಶ್ ಅವರ ಕಾರ್ಯಕ್ರಮಗಳಲ್ಲಿ ನಿರೂಪಣೆ ಮಾಡುತ್ತಾರೆ. ಸರ್ಕಾರಿ ನೌಕರರಾಗಿ ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ. ಈ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಮೇಲಾಧಿಕಾರಿಗಳಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಕೆಆರ್ ನಗರದಲ್ಲಿ ಬಹುತೇಕ ಅಧಿಕಾರಿಗಳು ಶಾಸಕರ ಅನುಮತಿ ಇಲ್ಲದೇ ಯಾವುದೇ ದೂರು ಹಾಗೂ ಮನವಿ ಸ್ವೀಕರಿಸುವುದಿಲ್ಲ. ಇವರು ಜೆಡಿಎಸ್ ಪಕ್ಷದ ಸೇವಕರಂತೆ ವರ್ತಿಸುತ್ತಿದ್ದಾರೆ ಎಂದು ಆಪಾದಿಸಿದರು.

ಗರ್ಭಕಂಠದ ಕ್ಯಾನ್ಸರ್; ಪ್ರಾರಂಭದಲ್ಲೇ ಪತ್ತೆ ಹಚ್ಚಿ ತಡೆಗಟ್ಟಲು ಪ್ಯಾಪ್, ಹೆಚ್‌ಪಿವಿ ಪರೀಕ್ಷೆ ಸಹಕಾರಿ

ಬಿಹೆಚ್‌ಐಓ ಹಿರಿಯ ವಿಕಿರಣ ಆಂಕೊಲಾಜಿಸ್ಟ್ ಡಾ.ವೈ.ಎಸ್.ಮಾಧವಿ



ಮೈಸೂರು, ಜ.25 (ಪಿಎಂ)– ಗರ್ಭಕಂಠದ ಕ್ಯಾನ್ಸರ್ ಅನ್ನು ಪ್ರಾರಂಭಿಕ ಹಂತದಲ್ಲೇ ಪತ್ತೆ ಹಚ್ಚಿ ಕಾಯಿಲೆ ಬಾರದಂತೆ ತಡೆಗಟ್ಟಲು ಪ್ಯಾಪ್ ಮತ್ತು ಹೆಚ್‌ಪಿವಿ ಪರೀಕ್ಷೆಗಳು ಸಹಕಾರಿ ಎಂದು ಭಾರತ್ ಹಾಸ್ಪಿಟಲ್ ಅಂಡ್ ಇನ್‌ಸ್ಟಿಟ್ಯೂಟ್ ಆಫ್ ಆಂಕಾಲಜಿಯ (ಬಿಹೆಚ್‌ಐಓ) ಹಿರಿಯ ವಿಕಿರಣ ಆಂಕೊಲಾಜಿಸ್ಟ್ ಮತ್ತು ವೈದ್ಯಕೀಯ ಅಧೀಕ್ಷಕಿ ಡಾ.ವೈ.ಎಸ್.ಮಾಧವಿ ಹೇಳಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜನವರಿ ಮಾಸವು ವಿಶ್ವ ಗರ್ಭಕಂಠದ ಕ್ಯಾನ್ಸರ್ ಜಾಗೃತಿ ತಿಂಗಳಾಗಿದೆ. ಮಹಿಳೆಯರಲ್ಲಿ ಕಂಡುಬರುವ ಕ್ಯಾನ್ಸರ್‌ನ ಅತ್ಯಂತ ಆಕ್ರಮಣಕಾರಿ ರೂಪಗಳಲ್ಲಿ ಗರ್ಭಕಂಠದ ಕ್ಯಾನ್ಸರ್ ಸಹ ಒಂದಾಗಿದೆ. ಭಾರತದಲ್ಲಿ ಪ್ರತಿ ವರ್ಷ 1.32 ಲಕ್ಷ ಮಹಿಳೆಯರು ಗರ್ಭಕಂಠದ ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದು, ಇವರಲ್ಲಿ 74 ಸಾವಿರಕ್ಕೂ ಹೆಚ್ಚು ಮಂದಿ ಈ ಕಾಯಿಲೆಯಿಂದ ಸಾವನ್ನಪ್ಪುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ನಿಯಮಿತ ತಪಾಸಣೆ, ಪರೀಕ್ಷೆಗಳ ಮೂಲಕ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಬಹುದು. ವಿಶ್ವ ಆರೋಗ್ಯ ಸಂಸ್ಥೆಯು 2050ರ ವೇಳೆಗೆ ಭಾರತದಲ್ಲಿ 50 ಸಾವಿರ ಗರ್ಭಕಂಠದ ಕ್ಯಾನ್ಸರ್ ಪ್ರಕರಣಗಳನ್ನು ಕಡಿತಗೊಳಿಸುವ ಗುರಿ ನಿಗದಿ ಮಾಡಿದೆ. ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟಲು ಆರಂಭಿಕ ಪತ್ತೆ ಪ್ರಮುಖವಾಗಿದೆ ಎಂದು ತಿಳಿಸಿದರು.

ಪಂಜಿನ ಮೆರವಣಿಗೆ: ಆಸ್ಪತ್ರೆಯ ಸಿಇಓ ನಿರ್ಮಲಾ ಕೆ.ಮೂರ್ತಿ ಮಾತನಾಡಿ, ವಿಶ್ವ ಕ್ಯಾನ್ಸರ್ ದಿನದ ಅಂಗವಾಗಿ ಫೆ.4ರಂದು ಸಂಜೆ 5.30ಕ್ಕೆ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಎದುರಿನಿಂದ ಪಂಜಿನ ಮೆರವಣಿಗೆ ಏರ್ಪಡಿಸಲಾಗಿದೆ ಎಂದು ಹೇಳಿದರು. ಆಸ್ಪತ್ರೆ ವೈದ್ಯರಾದ ಡಾ.ಕೆ.ಜಿ.ಶ್ರೀನಿವಾಸ್, ಡಾ.ವಿನಯ್ ಮುತ್ತಗಿ ಗೋಷ್ಠಿಯಲ್ಲಿದ್ದರು.


ಗ್ರಾಹಕರಿಂದ ಸಂಗ್ರಹಿಸಿದ ಹಣ ವಂಚನೆ: ವಿಮಾ ಕಂಪನಿ ಮ್ಯಾನೇಜರ್ ವಿರುದ್ಧ ಕೇಸ್

ಮೈಸೂರು, ಜ. 25– ವಿಮೆಗಾಗಿ ಗ್ರಾಹಕರಿಂದ ಹಣ ಪಡೆದು ವಿಮೆ ಮಾಡದೇ ವಂಚಿಸಿರುವ ಆರೋಪದ ಮೇರೆಗೆ ಮೈಸೂರಿನ ಸರಸ್ವತಿಪುರಂನಲ್ಲಿರುವ ಬಜಾಜ್ ಅಲಯನ್ಸ್ ಲೈಫ್ ಇನ್ಶೂರೆನ್ಸ್ ಕಂಪನಿಯ ಹಿಂದಿನ ಸೀನಿಯರ್ ಫೈನಾನ್ಷಿಯಲ್ ಸರ್ವಿಸ್ ಮ್ಯಾನೇಜರ್ ವಿರುದ್ಧ ಪ್ರಕರಣ ದಾಖಲಾಗಿದೆ.

ಕೊಡಗಿನ ಸೋಮವಾರಪೇಟೆ ತಾಲೂಕು ಕೊಡ್ಲಿಪೇಟೆ ನಿವಾಸಿ ಪುನೀತ್(31) ಆರೋಪಕ್ಕೆ ಗುರಿಯಾದವರಾಗಿದ್ದು, ಇವರು ಬಜಾಜ್ ಅಲಯನ್ಸ್ ಲೈಫ್ ಇನ್ಶೂರೆನ್ಸ್ ಕಂಪನಿಯಲ್ಲಿ 2020ರ ಜುಲೈ 30ರಿಂದ 2022ರ ಮಾರ್ಚ್ 15ರವರೆಗೆ ಕೆಲಸ ಮಾಡುತ್ತಿದ್ದರು. ಗ್ರಾಹಕರಿಗೆ ಲೈಫ್ ಇನ್ಶೂರೆನ್ಸ್ ಪಾಲಿಸಿ ಸರ್ವಿಸ್ ಮತ್ತು ಸೇಲ್ಸ್ ಕರ್ತವ್ಯಕ್ಕೆ ನಿಯೋಜಿಸಲ್ಪಟ್ಟಿದ್ದ ಇವರು, ಗ್ರಾಹಕರಾದ ಪೌಲ್‌ಮರಿ, ಎನ್.ವಿ.ಶಾರದಾ ರಾಜಾರಾವ್, ಎ.ಬಿ.ಮರೀನಾ, ಎ.ನಿರಂಜನ್, ಕೆ.ಜಿ.ರಜನಿ ಮತ್ತು ಜಿ.ವೇದ ಎಂಬುವರಿಂದ ಒಟ್ಟು 2,09,797 ರೂ. ಸಂಗ್ರಹಿಸಿ ಈ ಹಣವನ್ನು ಇನ್ಶೂರೆನ್ಸ್ ಪಾಲಿಸಿಗೆ ಜಮಾ ಮಾಡದೆ ವಂಚಿಸಿದ್ದಾರೆ ಎಂದು ಬಜಾಜ್ ಅಲಯನ್ಸ್ ಲೈಫ್ ಇನ್ಶೂರೆನ್ಸ್ ಕಂಪನಿಯ ಬ್ರಾಂಚ್ ಮ್ಯಾನೇಜರ್ ವೈ.ಹೆಚ್.ಯಶವಂತಕುಮಾರ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಸರಸ್ವತಿಪುರಂ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಮಲೆ ಮಹದೇಶ್ವರ ಬೆಟ್ಟದಲ್ಲಿ ಪ್ರಪಾತಕ್ಕೆ ಉರುಳಿ ಬಿದ್ದ ಗುಜರಾತ್ ಯಾತ್ರಿಗಳ ಬಸ್: 15 ಮಂದಿಗೆ ಗಾಯ

- ಪಾಲಾರ್‌ನ 2ನೇ ತಿರುವಿನಲ್ಲಿ ನಡೆದ ಘಟನೆ
- ಹಿಮ್ಮುಖವಾಗಿ ಚಲಿಸಿ ಉರುಳಿ ಬಿದ್ದ ಬಸ್





ಮಲೆಮಹದೇಶ್ವರ ಬೆಟ್ಟ, ಜ.25 (ಎಂಟಿವೈ)– ಗುಜರಾತ್ ಯಾತ್ರಿಗಳಿದ್ದ ಖಾಸಗಿ ಬಸ್ಸೊಂದು ಮಲೆಮಹದೇಶ್ವರ ಬೆಟ್ಟದ ಎರಡನೇ ತಿರುವಿನಲ್ಲಿ ಪ್ರಪಾತಕ್ಕೆ ಉರುಳಿ ಬಿದ್ದ ಪರಿಣಾಮ 15 ಮಂದಿಗೆ ಗಾಯಗಳಾಗಿದ್ದು, ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

ಗುಜರಾತ್‌ನಿಂದ ಕಳೆದ 10 ದಿನದ ಹಿಂದೆ 42 ಯಾತ್ರಾರ್ಥಿಗಳನ್ನು ಕರೆತಂದಿದ್ದ ಡಬ್ಬಲ್ ಡೆಕ್ಕರ್ ಖಾಸಗಿ ಬಸ್ (ಜಿಜೆ.14, ಟಿ.0486) ಇಲ್ಲಿ ಉರುಳಿ ಬಿದ್ದಿದೆ. ಮೈಸೂರಿನ ಪ್ರೇಕ್ಷಣೀಯ ಸ್ಥಳಗಳ ನೋಡಿಕೊಂಡು ಕಳೆದ ರಾತ್ರಿ ಮಲೆಮಹದೇಶ್ವರ ಬೆಟ್ಟಕ್ಕೆ ಈ ಬಸ್ ತಲುಪಿತ್ತು. ಬೆಳಗ್ಗೆ ಮಹದೇಶ್ವರನ ದರ್ಶನ ಮಾಡಿದ್ದರು. ಬಳಿಕ ತಮಿಳುನಾಡಿನತ್ತ ಪ್ರಯಾಣ ಆರಂಭಿಸಿದ ಈ ಬಸ್, ಪಾಲಾರ್ ಮಾರ್ಗದಲ್ಲಿ ಎರಡನೇ ತಿರುವಿನಲ್ಲಿ ಚಾಲಕನ ನಿಯಂತ್ರಣ ಕಳೆದುಕೊಂಡು ಪ್ರಪಾತಕ್ಕೆ ಉರುಳಿ ಬಿದ್ದಿದೆ.

ಬಸ್ ಅನ್ನು ಚಾಲಕ ತಿರುಗಿಸುವ ವೇಳೆ ತಡೆಗೋಡೆಗೆ ಡಿಕ್ಕಿ ಆಗುವುದನ್ನು ತಪ್ಪಿಸಲು ಹಿಮ್ಮುಖವಾಗಿ ಚಲಿಸಿ ತಿರುವು ತೆಗೆದುಕೊಳ್ಳಬೇಕೆನ್ನುವಷ್ಟರಲ್ಲಿ ಬಸ್ ಹಳ್ಳಕ್ಕೆ ಜಾರಲಾರಂಭಿಸಿದೆ. ಚಾಲಕ ನಿಯಂತ್ರಿಸಲು ಪ್ರಯತ್ನ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಬಸ್ ಒಂದನೇ ತಿರುವಿನ ರಸ್ತೆ ಮೇಲೆ ಬಿದ್ದಿದೆ. ಕೂಡಲೇ ಇತರೆ ವಾಹನಗಳ ಪ್ರಯಾಣಿಕರು ಯಾತ್ರಿಗಳ ನೆರವಿಗೆ ಬಂದಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ಮಲೆಮಹದೇಶ್ವರ ಬೆಟ್ಟ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಬಸವರಾಜ್ ಹಾಗೂ ಸಿಬ್ಬಂದಿ ಗಾಯಾಳುಗಳ ಆಸ್ಪತ್ರೆಗೆ ಸಾಗಿಸಿ, ಚಿಕಿತ್ಸೆ ಕೊಡಿಸಿದರು.

ಒಂದು ವೇಳೆ ಈ ಅಪಘಾತ ಐದು ಅಥವಾ ಆರನೇ ತಿರುವಿನಲ್ಲಿ ಸಂಭವಿಸಿದ್ದರೆ ಭಾರೀ ಪ್ರಮಾಣದಲ್ಲಿ ಪ್ರಾಣ ಹಾನಿ ಸಂಭವಿಸುವ ಆತಂಕವಿತ್ತು.

ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿಯಾಗದೆ ಸಣ್ಣ ಪ್ರಮಾಣದ ಗಾಯಗಳಾಗಿ ಯಾತ್ರಿಗಳು ಪಾರಾಗಿದ್ದಾರೆ. ಈ ಸಂಬಂಧ ಮಲೆ ಮಹದೇಶ್ವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.





ಚಾಮುಂಡೇಶ್ವರಿ ಕ್ಷೇತ್ರದ ಸಿದ್ದಲಿಂಗಪುರ ಗ್ರಾಮ ಪಂಚಾಯಿತಿ ಸದಸ್ಯೆ ಶ್ರೀಮತಿ ನಿತ್ಯ ಹಾಗೂ ಕಾಳಿಸಿದ್ದನಹುಂಡಿ ಗ್ರಾಮದ ಕಾಂಗ್ರೆಸ್ ಮುಖಂಡರಾದ ಮಾದೇಗೌಡ, ದೇವರಾಜು, ಶಿವು, ಚೇತನ್, ರಾಜು, ರಾಜಶೇಖರ್, ಶಶಿಕುಮಾರ್, ಸೋಮಶೇಖರ್, ಆನಂದ, ಕಿರಣ್, ಪ್ರಸನ್ನ, ಕುಮಾರ್, ಸಿದ್ದರಾಜು, ಚಿಕ್ಕಯ್ಯ, ರಾಜೇಶ್, ಜವರಪ್ಪ, ನಂದೀಶ್, ಜಯಸ್ವಾಮಿ, ಸುನೀಲ್, ಅರುಣ್ ಇನ್ನಿತರ ಮುಖಂಡರು ಕಾಂಗ್ರೆಸ್ ತೊರೆದು ಶಾಸಕ ಜಿ.ಟಿ.ದೇವೇಗೌಡರ ಸಮ್ಮುಖದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು.

ಜ.30, ಮಾಂಸದ ಅಂಗಡಿ ಮುಚ್ಚಲು ಪಾಲಿಕೆ ಆದೇಶ

ಮೈಸೂರು,ಜ.25–ನಗರದಲ್ಲಿ ಜ.30ರಂದು ಸರ್ವೋದಯ ದಿನದ ಪ್ರಯುಕ್ತ ಪಾಲಿಕೆಗೆ ಸೇರಿದ ಕುರಿ, ಮೇಕೆಗಳ ಕಸಾಯಿಖಾನೆ ಮತ್ತು ಎಲ್ಲಾ ಮಾಂಸದ ಅಂಗಡಿಗಳನ್ನು ಮುಚ್ಚಲಾಗುತ್ತದೆ. ಈ ದಿನ ಕುರಿ, ಮೇಕೆ, ಕೋಳಿ ಮಾಂಸ, ಹಂದಿ ಮಾಂಸ ಮತ್ತು ಮೀನು ವ್ಯಾಪಾರ ವನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಆದ್ದರಿಂದ ನಗರಪಾಲಿಕೆ ವ್ಯಾಪ್ತಿಯಲ್ಲಿರುವ ವಿವಿಧ ಮಾಂಸದ ಅಂಗಡಿಗಳನ್ನು ಮುಚ್ಚಲು ಆದೇಶ ನೀಡಲಾಗಿದೆ.

ನಗರ್ತಳ್ಳಿ ಹಲವು ಯುವಮುಖಂಡರು ಬಿಜೆಪಿ ಸೇರ್ಪಡೆ

ಚಾಮುಂಡೇಶ್ವರಿಯಲ್ಲಿ ಬಿಜೆಪಿ ಬಲವರ್ಧನೆಗೆ ಅರುಣ್‌ಕುಮಾರ್‌ಗೌಡ ಅವಿರತ ಪ್ರಯತ್ನ



ಮೈಸೂರು,ಜ.25–ನಗರ್ತಳ್ಳಿಯ ಹಲವು ಯುವ ಮುಖಂಡರು ಭಾರತೀಯ ಜನತಾ ಪಾರ್ಟಿಗೆ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಬಿಜೆಪಿ ನಿಕಟ ಪೂರ್ವ ಅಧ್ಯಕ್ಷ ಹಾಗೂ ಹಿರಿಯ ಮುಖಂಡ ಎನ್.ಅರುಣ್‌ಕುಮಾರ್ ಗೌಡ ಸಮ್ಮುಖದಲ್ಲಿ ಸೇರ್ಪಡೆಗೊಂಡರು.

ನಗರ್ತಳ್ಳಿ ಗ್ರಾಮಕ್ಕೆ ಭೇಟಿ ನೀಡಿದ್ದ ಬಿಜೆಪಿ ಮುಖಂಡ ಎನ್.ಅರುಣ್‌ಕುಮಾರ್ ಗೌಡರ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆಯಾದ ಯುವ ಮುಖಂಡರಾದ ಪುನೀತ್, ಕಿರಣ್, ಪ್ರಭು, ಸಿದ್ದು, ಸತೀಶ್, ವೈರಮುಡಿ, ಆನಂದ, ಬಸವರಾಜು, ನವೀನ, ಮಂಜು, ಶಿವಪ್ಪ, ಪ್ರತಾಪ್, ಪುನೀತ್ ಇತರರನ್ನು ಪಕ್ಷಕ್ಕೆ ಆತ್ಮೀಯವಾಗಿ ಸ್ವಾಗತಿಸಿದರು.


ಪ್ರತಿ ಗ್ರಾಮದಲ್ಲೂ ಯುವಕರು ಹೆಚ್ಚಾಗಿ ಬಿಜೆಪಿಗೆ ಸೇರ್ಪಡೆ ಆಗುತ್ತಿರುವುದರಿಂದ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಬಿಜೆಪಿ ಬಲಿಷ್ಠಗೊಳ್ಳುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಈ ಕ್ಷೇತ್ರವನ್ನು ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷದ ಅಧಿಕಾರಾವಧಿಯಲ್ಲಿ ಅಭಿವೃದ್ಧಿ ಕಡೆಗಣಿಸಿರುವ ಪರಿಣಾಮ ಇಲ್ಲಿನ ಮತದಾರರು ಬಿಜೆಪಿ ಬೆಂಬಲಿಸಲು ಒಲವು ತೋರುತ್ತಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಾಧನೆಯನ್ನು ಬೂತ್‌ಮಟ್ಟದಲ್ಲಿ ಜನರಿಗೆ ತಿಳಿಸಿ, ಜನರನ್ನು ಬಿಜೆಪಿ ಪಕ್ಷದತ್ತ ಸೆಳೆಯಲಾಗುತ್ತಿದೆ. ಅಲ್ಲದೆ, ತಳಮಟ್ಟದಲ್ಲಿ ಪಕ್ಷ ಹಮ್ಮಿಕೊಂಡಿರುವ ಬೂತ್ ವಿಜಯ ಸಂಕಲ್ಪ ಅಭಿಯಾನದಲ್ಲಿ ಭಾಗವಹಿಸಿ ಮನೆ ಮನೆಗೆ ಪ್ರಧಾನಿ ನರೇಂದ್ರ ನೇತೃತ್ವದ ಎನ್‌ಡಿಎ ಸರ್ಕಾರದ ಸಾಧನೆಗಳನ್ನು ತಿಳಿಸಲು ಶ್ರಮಿಸಬೇಕೆಂದು ಕಾರ್ಯಕರ್ತರಲ್ಲಿ ಮನವಿ ಮಾಡಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಎನ್.ಕೆ.ರವಿಕುಮಾರ್, ಮೂಗನಹುಂಡಿ ಮಂಜು, ಬಲ್ಲಳ್ಳಿ ಮಹೇಶ್ ಮತ್ತಿತರರು ಹಾಜರಿದ್ದರು.



ಮೈಸೂರು ಜಿಲ್ಲೆಯ ಮುಡಕನಪುರ ಮಠದ ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ ನೇತೃತ್ವದಲ್ಲಿ ವಿವಿಧ ಮಠಾಧೀಶರು ಮೈಸೂರು ಪೇಂಟ್ಸ್ & ವಾರ್ನಿಶ್ ಲಿಮಿಟೆಡ್ ಅಧ್ಯಕ್ಷ ಆರ್.ರಘು (ಕೌಟಿಲ್ಯ) ಅವರ ನಿವಾಸಕ್ಕೆ ತೆರಳಿ ಅವರಿಗೆ ಜನ್ಮದಿನದ ಶುಭಾಶಯ ಕೋರಿ ಆಶೀರ್ವದಿಸಿದರು. ನಂದಿಗುಡ ಮಠದ ನಂದೀಶ್ವರ ಸ್ವಾಮೀಜಿ, ಮಡಿವಾಳಸ್ವಾಮಿ ಮಠದ ಅಡವಿ ಸ್ವಾಮೀಜಿ, ಮಂಜುನಾಥ ಸ್ವಾಮೀಜಿ ಅವರನ್ನು ಚಿತ್ರದಲ್ಲಿ ಕಾಣಬಹುದು.

ಇಂದು ಮೈಸೂರು ಜಿಲ್ಲೆಯ 44 ಕೆರೆಗಳಲ್ಲಿ ತ್ರಿವರ್ಣ ಧ್ವಜಾರೋಹಣ

ಮೈಸೂರು,ಜ.25(ಆರ್‌ಕೆ)–ಗಣರಾಜ್ಯೋತ್ಸವದ ಅಂಗವಾಗಿ ನಾಳೆ(ಜ.26) ಮೈಸೂರು ಜಿಲ್ಲೆಯ 44 ಕೆರೆಗಳಲ್ಲಿ ತ್ರಿವರ್ಣ ಧ್ವಜ ಹಾರಿಸಲು ಮೈಸೂರು ಜಿಲ್ಲಾ ಪಂಚಾಯ್ತಿಯು ಸಿದ್ಧತೆ ನಡೆಸಿದೆ. ಜಲ ಸಂರಕ್ಷಣೆ ನಮ್ಮ ಧ್ಯೇಯ ಎಂಬ ಸಂದೇಶ ಸಾರಲು ಹಾಗೂ ಅಂತರ್ಜಲ ಉಳಿಸುವ ಅಭಿಯಾನದಡಿ ನರೇಗಾ ನೆರವಿನೊಂದಿಗೆ ಅಭಿವೃದ್ಧಿಗೊಂಡಿರುವ 33 ಕೆರೆಗಳು ಹಾಗೂ ಅಭಿವೃದ್ಧಿ ಪ್ರಗತಿಯಲ್ಲಿರುವ ಕೆರೆಗಳಲ್ಲೂ ಧ್ವಜಾರೋಹಣ ಮಾಡುವ ಮೂಲಕ ಗಣರಾಜ್ಯೋತ್ಸವ ಆಚರಿಸಲಾಗುವುದು ಎಂದು ಜಿಪಂ ಸಿಇಓ ಬಿ.ಆರ್.ಪೂರ್ಣಿಮಾ ತಿಳಿಸಿದ್ದಾರೆ. ಕೆರೆಗಳ ಅಂಗಳದಲ್ಲಿ ಸ್ಥಳೀಯ ಪ್ರೌಢಶಾಲಾ ಮಕ್ಕಳಿಗೆ ಕೆರೆಯ ಮಹತ್ವ ಕುರಿತು ಚಿತ್ರಕಲಾ ಸ್ಪರ್ಧೆ, ಕಾಲೇಜು ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ನಡೆಸಿ ವಿಜೇತರಿಗೆ ಬಹುಮಾನ ವಿತರಿಸುವ ಜೊತೆಗೆ ಶ್ರಮದಾನ, ಸಸಿ ನೆಡುವ ಕಾರ್ಯಕ್ರಮವನ್ನು ನಾಳೆ (ಜ.26) ಏರ್ಪಡಿಸಲಾಗಿದೆ. ಸುತ್ತಲಿನ ಗ್ರಾಮಸ್ಥರು, ಪರಿಸರವಾದಿಗಳು, ಸಂಘ–ಸಂಸ್ಥೆಗಳ ಪ್ರಮುಖರು ಭಾಗವಹಿಸುವಂತೆ ಕೋರಿದ್ದಾರೆ.





ಡಾ.ವಿಷ್ಣುವರ್ಧನ್ ಸ್ಮಾರಕ ಲೋಕಾರ್ಪಣೆ ಹಿನ್ನೆಲೆ

ಜ.29ರಂದು ಮೈಸೂರಲ್ಲಿ ವಿಷ್ಣುವರ್ಧನ್ ಕಟೌಟ್‌ನೊಂದಿಗೆ ಬೃಹತ್ ಮೆರವಣಿಗೆ

ಮೈಸೂರು,ಜ.25(ಪಿಎಂ)– ಮೈಸೂರು ತಾಲೂಕು ಉದ್ಬೂರು ಗೇಟ್ ಬಳಿ ಹಾಲಾಳು ಗ್ರಾಮದಲ್ಲಿ ಜ.29ರಂದು ನಡೆಯಲಿರುವ ಡಾ.ವಿಷ್ಣುವರ್ಧನ್ ಸ್ಮಾರಕ ಲೋಕಾರ್ಪಣೆ ಸಮಾರಂಭ ಪ್ರಯುಕ್ತ ಅಂದು ಮೈಸೂರು ನಗರದಲ್ಲಿ ಬೃಹತ್ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ವಿಷ್ಣು ಸೇನಾ ಸಮಿತಿ ಅಧ್ಯಕ್ಷ ಹಾಗೂ ನಗರ ಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ (ಪಾತಿ) ತಿಳಿಸಿದರು.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಲಕ್ಷಾಂತರ ಅಭಿಮಾನಿಗಳ ಸಮ್ಮುಖದಲ್ಲಿ ವಿಷ್ಣುವರ್ಧನ್ ಅವರ ಸ್ಮಾರಕ ಲೋಕಾರ್ಪಣೆ ಮಾಡಲಿದ್ದಾರೆ. ಇದರ ಪ್ರಯುಕ್ತ ಡಾ.ವಿಷ್ಣುವರ್ಧನ್ ಅಭಿಮಾನಿಗಳ ಸಂಘ, ವಿಷ್ಣು ಸ್ಮಾರಕ ಒಕ್ಕೂಟದಿಂದ ಮೈಸೂರು ನಗರದಲ್ಲಿ ಬೃಹತ್ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದರು. ಅಂದು ಬೆಳಗ್ಗೆ 9ಕ್ಕೆ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಬಳಿಯ ಡಾ.ವಿಷ್ಣುವರ್ಧನ್ ಉದ್ಯಾನವನದ ಎದುರಿನಿಂದ ವಿಷ್ಣುವರ್ಧನ್ ಅವರ ಕಟೌಟ್‌ನೊಂದಿಗೆ ಮೆರವಣಿಗೆ ಚಾಲನೆ ಪಡೆಯಲಿದೆ. ಇಲ್ಲಿಂದ ನಗರದ ವಿವಿಧ ರಸ್ತೆಗಳಲ್ಲಿ ಸಂಚರಿಸಿ ಹೆಚ್‌ಡಿ ಕೋಟೆ ರಸ್ತೆಯ ಶ್ರೀರಾಂಪುರ ವೃತ್ತದವರೆಗೆ ಮೆರವಣಿಗೆ ಸಾಗಲಿದೆ. ಬಳಿಕ ವಾಹನಗಳಲ್ಲಿ ಸ್ಮಾರಕಕ್ಕೆ ಪ್ರಯಾಣ ಬೆಳೆಸಲಾಗುವುದು. ಮೆರವಣಿಗೆಯಲ್ಲಿ 5 ಸಾವಿರ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಸ್ಮಾರಕ ನಿರ್ಮಾಣ ಕಾರ್ಯಗತಗೊಳಿಸಲು ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ, ಹೆಚ್.ಡಿ.ಕುಮಾರಸ್ವಾಮಿ ಮತ್ತು ಬಿ.ಎಸ್.ಯಡಿಯೂರಪ್ಪ ಅವರು ತಮ್ಮ ಅವಧಿಯಲ್ಲಿ ಅಗತ್ಯ ಎಲ್ಲಾ ಕ್ರಮ ವಹಿಸಿದ್ದಾರೆ. ಅವರಿಗೆ ವಿಷ್ಣುವರ್ಧನ್ ಅಭಿಮಾನಿಗಳ ಪರವಾಗಿ ಧನ್ಯವಾದ ತಿಳಿಸುತ್ತೇನೆ ಎಂದು ಹೇಳಿದರು. ಮುಖಂಡರಾದ ಲಕ್ಷ್ಮೀಪತಿ, ಸುರೇಶ್ ಗೋಲ್ಡ್, ಅರ್ಜುನ್, ರಘು, ಕುಮಾರ್, ಜಮೀರ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಸ್ವಯಂ ಉದ್ಯೋಗ ಆರಂಭಕ್ಕೆ ಯುವಜನ ಮುಂದಾಗಬೇಕು

ಮಹಿಳಾ ಉದ್ಯಮಿಗಳ ಒಕ್ಕೂಟದ ಅಧ್ಯಕ್ಷೆ, ನಿವೃತ್ತ ಐಎಎಸ್ ಅಧಿಕಾರಿ ರತ್ನಪ್ರಭ ಸಲಹೆ

ಮೈಸೂರು,ಜ.25(ಎಂಟಿವೈ)– ಯುವಜನರು ಎಲ್ಲ ಕ್ಷೇತ್ರದ ಜ್ಞಾನ ಸಂಪಾದಿಸಿಕೊಂಡು, ತಮಗೆ ದೊರೆತ ಅವಕಾಶದಿಂದ ಸ್ವಯಂ ಉದ್ಯೋಗ ಆರಂಭಿಸುವತ್ತ ಗಮನಹರಿಸುವಂತೆ ಮಹಿಳಾ ಉದ್ಯಮಿಗಳ ಒಕ್ಕೂಟದ ಅಧ್ಯಕ್ಷೆ, ನಿವೃತ್ತ ಐಎಎಸ್ ಅಧಿಕಾರಿ ರತ್ನಪ್ರಭ ಸಲಹೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಬಿಎಂಶ್ರೀ ಸಭಾಂಗಣದಲ್ಲಿ ಭಾರತೀಯ ವಿದ್ಯಾರ್ಥಿ ಸಂಘ, ಮೈಸೂರು ವಿಶ್ವವಿದ್ಯಾನಿಲಯ ಯುಹೆಚ್‌ಸಿ ಮತ್ತು ವೃತ್ತಿ ಕೇಂದ್ರದ ಸಂಯುಕ್ತಾಶ್ರಯದಲ್ಲಿ ಬುಧವಾರ ಆಯೋಜಿಸಿದ್ದ 'ಯುವಜನರಿಗೆ ಉದ್ಯಮಶೀಲತೆಯ ಮಹತ್ವ ಮತ್ತು ಮಾರ್ಗಗಳು' ಕುರಿತ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಉದ್ಯೋಗಕ್ಕೆ ಸಾಕಷ್ಟು ಮಂದಿ ಪರದಾಡುತ್ತಿದ್ದಾರೆ. ತಮ್ಮಲ್ಲೇ ಸ್ವಉದ್ಯೋಗ ಆರಂಭಿಸುವ ಸಾಮರ್ಥ್ಯವಿದ್ದರೂ, ಉದ್ಯೋಗಗಿಟ್ಟಿಸಿಕೊಳ್ಳುವುದಕ್ಕೆ ಹರಸಾಹಸ ಮಾಡುತ್ತಿದ್ದಾರೆ. ಸರ್ಕಾರಿ ಕೆಲಸಕ್ಕಾಗಿಯೇ ಓದುವವರ ಸಂಖ್ಯೆ ಹೆಚ್ಚಾಗಿದೆ. ಇಂತಹ ಹವ್ಯಾಸ ಹೊಂದಿರುವ ಯುವಜನರು ಸೀಮಿತ ಮನಸ್ಥಿತಿಯವರು. ಅಲ್ಲದೆ, ತಮ್ಮದೇ ಆದ ಚೌಕಟ್ಟಿನಲ್ಲಿ ಜೀವಿಸುವಂತಾಗಿದೆ ಎಂದು ರತ್ನಪ್ರಭಾ ವಿಷಾದಿಸಿದರು.



ಮೈಸೂರು ವಿವಿಯ ಬಿಎಂಶ್ರೀ ಸಭಾಂಗಣದಲ್ಲಿ ನಡೆದ 'ಯುವಜನರಿಗೆ ಉದ್ಯಮಶೀಲತೆಯ ಮಹತ್ವ ಮತ್ತು ಮಾರ್ಗಗಳು' ಕುರಿತ ವಿಚಾರ ಸಂಕಿರಣ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಕ್ರೀಡಾಪಟು ಎಂ.ಡಿ.ನಾಗೇಂದ್ರ(ಪೊಲೀಸ್), ರಾಷ್ಟ್ರೀಯ ಕಾನೂನು ವಿವಿ ನಡೆಸುವ ಸಿಎಲ್‌ಎಟಿ ಪರೀಕ್ಷೆಯಲ್ಲಿ ಮೊದಲ ರ್‍ಯಾಂಕ್ ಪಡೆದ ಜೆ.ಎ.ಜ್ಞಾನಾಂಕಿತ್ ಅವರನ್ನು ಸನ್ಮಾನಿಸಲಾಯಿತು.

ಕರ್ನಾಟಕ ದಲಿತ ಉದ್ದಿಮೆದಾರರ ಸಂಘದ ಅಧ್ಯಕ್ಷ ಸಿ.ಜಿ.ಶ್ರೀನಿವಾಸ್ ಮಾತನಾಡಿ, ಪರಿಶಿಷ್ಟ ಜಾತಿ, ಪಂಗಡ ಹಾಗೂ ಹಿಂದುಳಿದ ವರ್ಗ ಸೇರಿದಂತೆ ವಿವಿಧ ಸಮುದಾಯಗಳು ಮೀಸಲಾತಿ ಬೇಡಿಕೆ ಮುಂದಿಡುತ್ತಿರುವುದು ಶಿಕ್ಷಣ ಹಾಗೂ ಸರ್ಕಾರಿ ಉದ್ಯೋಗ ಪಡೆದುಕೊಳ್ಳುವುದಕ್ಕಾಗಿಯೇ ಆಗಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಇಂದು ಸರ್ಕಾರಿ ಅಧೀನದ ಸಂಸ್ಥೆಗಳನ್ನು ಖಾಸಗೀಕರಣ ಮಾಡಲಾಗುತ್ತಿದೆ. ಇದನ್ನು ಮನಗಂಡು ಯುವ ಜನರು ಸವಲತ್ತುಗಳನ್ನು ಬಳಸಿಕೊಂಡು ಸಾಧನೆ ಮಾಡುವತ್ತ ಮುಂದಾಗಬೇಕು ಎಂದರು.

ಇದೇ ವೇಳೆ ರಾಷ್ಟ್ರೀಯ ಕ್ರೀಡಾಪಟು ಎಂ.ಡಿ.ನಾಗೇಂದ್ರ(ಪೊಲೀಸ್), ರಾಷ್ಟ್ರೀಯ ಕಾನೂನು ವಿಶ್ವವಿದ್ಯಾನಿಲಯ ನಡೆಸುವ ಸಿಎಲ್‌ಎಟಿ ಪರೀಕ್ಷೆಯಲ್ಲಿ ಮೊದಲ ರ್‍ಯಾಂಕ್ ಪಡೆದ ಜೆ.ಎ.ಜ್ಞಾನಾಂಕಿತ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಕೈಗಾರಿಕಾ ಕೇಂದ್ರ ಉಪನಿರ್ದೇಶಕ ಟಿ.ಟಿ ವರದೇಗೌಡ, ದಲಿತ ಉದ್ದಿಮೆದಾರರ ಸಂಘದ ಜಿಲ್ಲಾಧ್ಯಕ್ಷ ಮಂಜುನಾಥ್, ಮೈಸೂರು ವಿವಿ ವೃತ್ತಿಕೇಂದ್ರ ಸಂಯೋಜಕರಾದ ಪ್ರೊ.ಹಂಸವೇಣಿ, ಅಕ್ಕ ಐಎಎಸ್ ಅಕಾಡೆಮಿ ಮುಖ್ಯಸ್ಥ ಡಾ.ಶಿವಕುಮಾರ್, ಹೂವಿನ ಸಿದ್ದು ಇನ್ನಿತರರು ಉಪಸ್ಥಿತರಿದ್ದರು.